ಗೌರಿ ಲಂಕೇಶರ

ಲಂಕೇಶ್

ಸೆಪ್ಟೆಂಬರ್ 27, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆



ಶಾಕಾಂಬರಿ ಕಂಪನಿ ಸ್ಕೂಪ್

ಕರೆಂಟ್ ಡೀಲ್‌ನಲ್ಲಿ ಕುಮಾರನ ದರೋಡೆ!



ಚೆನ್ನಿಗಪ್ಪನ ರಾಜೀನಾಮೆ ನಾಟಕ!

ಚಿತ್ರದುರ್ಗ ಜಿ.ಪಂ ಹರಾಜಿಗೆ



ಕುಬೇರಪ್ಪ & ಸನ್ಸ್

ಗ್ರೇಟರ್ ಬೆಂಗಳೂರು- ಗ್ರೇಟರ್ ಬವಣೆ!



ಬೆಂಗಳೂರು ಇನ್ನು ಮುಂದೆ ಗ್ರೇಟರ್ ಬೆಂಗಳೂರಾಗುತ್ತದಂತೆ. ಗ್ರೇಟರ್ ಎಂದರೆ ಮಹತ್ವದ, ಬೃಹತ್ತಾದ, ಉನ್ನತವಾದ ಎಂದೆಲ್ಲಾ ನಿಘಂಟಿನ ಅರ್ಥವಿದೆ. ಬೆಂಗಳೂರು ಯಾವ ಅರ್ಥದಲ್ಲಿ ಉನ್ನತವಾಗುತ್ತಿದೆ? ಸಾಮಾನ್ಯವಾಗಿ ಉನ್ನತ ಎಂಬ ಪದಕ್ಕೆ ಮೊದಲಿಗಿಂತ ಉತ್ತಮವಾದ ಎಂಬ ಅರ್ಥ ಇದೆಯಲ್ಲವೇ? ಹಾಗಿದ್ದಲ್ಲಿ ಇನ್ನು ಮುಂದೆ ಬೆಂಗಳೂರಿನ ಸಾಮಾನ್ಯ ಜನತೆಯ ಬದುಕು ಹಿಂದಿನದಕ್ಕಿಂತ ಉತ್ತಮವಾಗುತ್ತದೆಯೇ? ಗ್ರೇಟರ್ ಬೆಂಗಳೂರಿನ ಜನಸಂಖ್ಯೆ ಆಗ 80 ಲಕ್ಷವಾಗುತ್ತದೆ. ಅದರಲ್ಲಿ ಕನಿಷ್ಠ 40 ಲಕ್ಷ ಬೆಂಗಳೂರಿಗರು ಒಂದೋ ಘೋಷಿತ ಕೊಳೆಗೇರಿಗಳಲ್ಲಿ ಅಥವಾ ಅಘೋಷಿತ ಕೊಳೆಗೇರಿಗಳಲ್ಲಿ ವಾಸಿಸುತ್ತಿರುತ್ತಾರೆ. ಗ್ರೇಟರ್ ಬೆಂಗಳೂರಿನಲ್ಲಿ ಅವರೆಲ್ಲರ ಜೀವನ ಗ್ರೇಟರ್ ಆಗುತ್ತದೆಯೇ?

ವಾಸ್ತವವಾಗಿ ಈ ಎಲ್ಲಾ ಕೊಳೆಗೇರಿ ನಿವಾಸಿಗಳಿಗೆ ಮಾತ್ರವಲ್ಲ, ಮಧ್ಯಮ ವರ್ಗದವರಿಗೂ ಗ್ರೇಟರ್ ಬೆಂಗಳೂರೆಂದರೆ ಗ್ರೇಟರ್ ಬವಣೆಯೇ ಹೊರತು ಬೇರೆನೂ ಅಲ್ಲ. ಏಕೆಂದರೆ ಈ ಗ್ರೇಟರ್ ಬೆಂಗಳೂರೆಂಬ ಪರಿಕಲ್ಪನೆಯ ಹಿಂದಿರುವುದು ವಿಶ್ವಬ್ಯಾಂಕ್ ಮತ್ತು ಎ.ಡಿ.ಬಿ ಯಂತಹ ಸಂಸ್ಥೆಗಳು ಹಾಗೂ ಅವರಿಗೆ ಹಣ ನೀಡುವ ಬಹುರಾಷ್ಟ್ರೀಯ ಕಂಪನಿಗಳು. ಇವರುಗಳು ರೂಪಿಸುತ್ತಿರುವ ಅವರ ಕನಸಿನ ಬೆಂಗಳೂರಿನಲ್ಲಿ ಕಿನ್ನರಪುರುಷರು ವಾಸಿಸುವ ಅಮರಾವತಿ ಮಾತ್ರ ಇದೆ. ಆ ಕಿನ್ನರ ಕಿಂಪುರುಷರಿಗೆ ಸೇವೆ ಮಾಡುವವರು ಅಗತ್ಯವಿರುವುದರಿಂದ ಹೊರವಲಯದಲ್ಲಿ ಕೊಳೆಗೇರಿಗಳಿಗೆ ಅವಕಾಶವಿರುತ್ತದೆ. ಅಷ್ಟು ಮಾತ್ರವಲ್ಲ, ಈ ಗ್ರೇಟರ್ ಬೆಂಗಳೂರಿನ ಅಮರಾವತಿಯ ಸೌಕರ್ಯಗಳಿಗೆ ಹಣ ಮಾತ್ರ ಎಲ್ಲರೂ ತೆರಬೇಕು. ಇದೆಲ್ಲದರ ಅರ್ಥ ಇಷ್ಟೇ: ಗ್ರೇಟರ್ ಬೆಂಗಳೂರು ಅಂದರೆ ಬಹುಪಾಲು ಜನರಿಗೆ ಗ್ರೇಟರ್ ಬವಣೆ....

ಚಾರ್ವಾಕ

- ಶಿವಸುಂದರ್-

"ರೈಟ್ ಸೈಸಿಂಗಿಗೂ"(ಸರಿಯಾದ ನೌಕರಿ ಕಡಿತ) "ಡೌನ್ ಸೈಸಿಂಗಿಗೂ"(ನೌಕರಿ ಕಡಿತ) ವ್ಯತ್ಯಾಸವೇನು ಕಾಮ್ರೇಡ್ಸ್?



ಪಶ್ಚಿಮ ಬಂಗಾಳದಲ್ಲಿ ಕಾಮ್ರೇಡರು ಹೊಸ ಹೊಸ ಕಸರತ್ತಿನಲ್ಲಿ ತೊಡಗಿರುವುದನ್ನು ಎಲ್ಲರೂ ಬಲ್ಲರು. ವಾಸ್ತವವಾಗಿ ವಿಶ್ವಬ್ಯಾಂಕಿನ ಆದೇಶಗಳನ್ನು ಚಾಚೂ ತಪ್ಪದೆ ಅನುಸರಿಸುತ್ತಿರುವ ಯು.ಪಿ.ಎ. ಪಕ್ಷಗಳು ಮತ್ತು ಎನ್.ಡಿ.ಎ. ಪಕ್ಷಗಳು ಪಶ್ಚಿಮ ಬಂಗಾಳವನ್ನು ಬೆರಗಿನಿಂದ ನೋಡುತ್ತಿವೆ. ಆದರೆ ವಿಶ್ವಬ್ಯಾಂಕಿನ ಆದೇಶಗಳನ್ನು ಧಿಕ್ಕರಿಸಿ ಹೇಗೆ ಆಳ್ವಿಕೆ ಮಾಡುತ್ತಿದೆ ಎಂಬ ಬೆರಗಲ್ಲ ಇದು. ಬದಲಿಗೆ ವಿಶ್ವಬ್ಯಾಂಕಿನ ಎಲ್ಲಾ ಆದೇಶಗಳನ್ನು ಜಾರಿಗೆ ತರುತ್ತಿದ್ದರೂ ಹೇಗೆ ತಾವು ಭಿನ್ನ ಎಂದು ಪರಿಣಾಮಕಾರಿಯಾಗಿ ತೋರಿಸಿಕೊಳ್ಳಲು ಅವರಿಗೆ ಸಾಧ್ಯವಾಗಿದೆ ಎಂದು ಅರ್ಥ ಮಾಡಿಕೊಳ್ಳಲು..! ಉದಾಹರಣೆಗೆ ನೋಡಿ: ಇಲ್ಲಿ ಬಿ.ಎಂ.ಐ.ಸಿ. ವಿಷಯದಲ್ಲಿ ಎಡಪಕ್ಷಗಳಿಗೆ ಆಕ್ಷೇಪವಿದೆ. ಆದರೆ ಕೋಲ್ಕತ್ತಾದಲ್ಲಿ ಇದೇ ಬಗೆಯ ಯೋಜನೆಯನ್ನು ಇದೇ ಪಕ್ಷಗಳೇ ಜನೋಪಯೋಗಿ ಎಂಬ ಹೆಸರಲ್ಲಿ ತರುತ್ತಿವೆ. ಅದೇ ರೀತಿ ಬೇರೆಲ್ಲಾ ರಾಜ್ಯಗಳಲ್ಲೂ ಮತ್ತು ಕೇಂದ್ರದಲ್ಲೂ ನೌಕರಿ ಸಂಖ್ಯೆಯನ್ನು ಕಡಿತಗೊಳಿಸುತ್ತಿದ್ದರೆ ಅಂದರೆ "ಡೌನ್ ಸೈಸಿಂಗ್" ಮಾಡುತ್ತಿದ್ದರೆ ಅದರ ವಿರುದ್ಧ ಹೋರಾಟ ಕಟ್ಟುವ ಎಡಪಕ್ಷಗಳು ಅದೇ ಪಶ್ಚಿಮ ಬಂಗಾಳದಲ್ಲಿ ಇದೇ ಎಡಪಕ್ಷಗಳು ಒಂದು ಲಕ್ಷ ನೌಕರಿಗಳನ್ನು ಕಡಿತಗೊಳಿಸಿವೆ. ಆದರೆ ಅದು ಡೌನ್ ಸೈಸಿಂಗ್ ಅಲ್ಲವಂತೆ....ಬದಲಿಗೆ "ರೈಟ್ ಸೈಸಿಂಗ್" ಅಂತೆ! ಇದೇನು ಕಾಮ್ರೇಡರೇ ಡಬಲ್ ಸ್ಟಾಂಡರ್ಡು..?

ಕತ್ತಿ ಕಾಂಗ್ರೆಸ್ಸಿನದಾದರೆ ಮಾತ್ರ ನೋವೆ? ಅದನ್ನೇ ಕಾಮ್ರೇಡರು ಹದಹಾಕಿ ತಿವಿದರದು ಹೂವೇ?!

No Comments

"ಈ ಬಾರಿಯೂ ಶೋಭಾಯಾತ್ರೆಗೆ ಅವಕಾಶವಿರದಿದ್ದರೆ ನಾವೇಕೆ ಸರ್ಕಾರದಲ್ಲಿರಬೇಕು?"

- ಸಿ.ಟಿ.ರವಿ



"ಹುಲಿ ಮತ್ತು ಆದಿವಾಸಿ ಇಬ್ಬರೂ ಒಟ್ಟಿಗೆ ಜೀವಿಸಲು ಸಾಧ್ಯವಿಲ್ಲ, ಆದ್ದರಿಂದ ಹುಲಿಗಳನ್ನು ಉಳಿಸಬೇಕೆಂದರೆ ಆದಿವಾಸಿಗಳನ್ನು ಎತ್ತಂಗಡಿ ಮಾಡಲೇಬೇಕು."

-ವಾಲ್ಮೀಕಿ ಥಾಪರ್

ಸುಪ್ರೀಂ ಕೋರ್ಟಿನ ಸಲಹಾ ಸಮಿತಿಯ ಸದಸ್ಯ



"ರಾಷ್ಟ್ರ ನಾಯಕರು ಬಂದರೆ ಮಾತ್ರ ಉತ್ತರ ಕೊಡುವೆ, ಮುನಿಸಿಪಾಲಿಟಿ ಲೆವೆಲ್ ನಾಯಕರಿಗೆಲ್ಲಾ ಉತ್ತರ ಕೊಡುತ್ತಾ ಇರಲು ನನ್ನಲ್ಲಿ ಸಮಯವಿಲ್ಲ"

- ದೇವೇಗೌಡ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ಸೀಡಿಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ನನ್ನಲ್ಲಿ ಸಮಯವಿಲ್ಲ"

- ಎಚ್.ಡಿ. ಕುಮಾರಸ್ವಾಮಿ



"ಸ್ವಾಮಿ ನನ್ನ ಜೀವನದಲ್ಲೇ ಅಷ್ಟೊಂದು ದುಡ್ಡು ನೋಡಿದವನಲ್ಲ"

-ಚನ್ನಿಗಪ್ಪ




"ನಾವು ಮೊದಲು ರೋಗ ಪತ್ತೆಹಚ್ಚಿ ನಂತರ ಔಷಧಿ ಕೊಡುತ್ತೇವೆ"

-ಸಂತೋಷ್ ಹೆಗಡೆ

"ಸಾಹಿತ್ಯ ಸಮ್ಮೇಳನ ಮುಂದೂಡಿಕೆ ಇಲ್ಲ"

-ಚಂಪಾ

ವಾರದ ಘೋಷಣೆ




"ಒಬ್ಬ ಡಾಕ್ಟರ್ ತಪ್ಪು ಮಾಡಿದರೆ ಆತನ ಕರಿಯರ್ ಹಾಳಾಗುತ್ತೆ. ಅದೇ ರೀತಿ ಒಬ್ಬ ಲಾಯರ್ ತನ್ನ ವೃತ್ತಿ ಜೀವನದಲ್ಲಿ ತಪ್ಪು ಮಾಡಿದರೆ ಆತ ಪೆಟ್ಟು ತಿನ್ನುತ್ತಾನೆ. ಆದರೆ ಒಬ್ಬ ಪತ್ರಕರ್ತ ದಿನನಿತ್ಯ ತಪ್ಪು ಮಾಡುತ್ತಿದ್ದರೂ ಪಶ್ಚಾತ್ತಾಪದ ಅಗತ್ಯವೂ ಇಲ್ಲದಂತೆ ಮುಂದುವರೆಯುವ ಅವಕಾಶವಿದೆ. ಆದ್ದರಿಂದಲೇ ಒಬ್ಬ ಪತ್ರಕರ್ತ ಮಿಕ್ಕೆಲ್ಲರಿಗಿಂತ ಹೆಚ್ಚು ಜವಾಬ್ದಾರನಾಗಿರಬೇಕು"

-ತರುಣ್ ತೇಜ್‌ಪಾಲ್

ಹಿರಿಯ ಪತ್ರಕರ್ತ ಮತ್ತು ತೆಹೆಲ್ಕಾ ಸಂಪಾದಕ

ಸತ್ಯವಾಕ್ಯ




"JNURM (ಜವಹರಲಾಲ್ ನೆಹರು ನಗರ ಪುನರ್ ನವೀಕರಣ ಯೋಜನೆ) ಎಂದರೆ ಅದು ಜಾರಿಗೆ ಬರುವ 63 ನಗರಗಳಲ್ಲಿ ಉಳ್ಳವರು ಸೌಲಭ್ಯವನ್ನು ಅನುಭವಿಸಿದರೆ ಉಳಿದವರು ಅದಕ್ಕಾಗಿ ಹಣ ತೆರುತ್ತಾರೆ ಅಷ್ಟೆ"

-ಸಾಲೋಮನ್ ಬೆಂಜಮಿನ್

ನಗರೀಕರಣ

ಹುಲಿ ಇದ್ದಲ್ಲಿ ಆದಿವಾಸಿಗಳು ಇರಬಾರದೆನ್ನುವ ಸರ್ಕಾರ ಆದಿವಾಸಿಗಳಿಗೆ ಜಮೀನು ಕೊಡುತ್ತಿರುವ ಗುಟ್ಟೇನು?



ಗುಟ್ಟು ● ರಟ್ಟು

ಈಗ ಅಂತರರಾಷ್ಟ್ರೀಯ ಪರಿಸರ ವಲಯದಲ್ಲಿ ಹುಲಿ ಸಂರಕ್ಷಣೆಯದೇ ಹಾವಳಿ. ಯಾವ ದೇಶ ಹುಲಿ ಸಂರಕ್ಷಣೆಗೆ ವಿಶೇಷ ಕಾಳಜಿ, ಕಾನೂನು ಮಾಡುವುದೋ ಅದಕ್ಕೆ ಹೆಚ್ಚಿನ ಅಂತರರಾಷ್ಟ್ರೀಯ ಸಹಾಯಧನವೂ ಹರಿದು ಬರುತ್ತದೆ. ಸರ್ಕಾರಕ್ಕೂ ಡಾಲರ್ ಬರುತ್ತದೆ, ಹುಲಿ ಸಂರಕ್ಷಣೆ ಎಂಬ ಹೆಸರಲ್ಲಿ ಎನ್.ಜಿ.ಓ.ಗಳನ್ನು ತೆಗೆದು ಡಾಲರ್‌ಗಳನ್ನು ಲೂಟಿ ಹೊಡೆಯುವ ಪರಿಸರವಾದಿಗಳಿಗೂ ಕೋಟಿಗಟ್ಟಲೆ ಡಾಲರ್ ಹರಿದು ಬರುತ್ತದೆ. ಹೀಗಾಗಿಯೇ ಮೊನ್ನೆ ಸುಪ್ರೀಂ ಕೋರ್ಟಿಗೆ ಅರಣ್ಯ ಸಂರಕ್ಷಣೆಯ ವಿಷಯದಲ್ಲಿ ಸಲಹೆ ನೀಡಲೆಂದೇ ನೇಮಕವಾಗಿರುವ ಸೆಂಟ್ರಲ್ ಎಂಪವರ್ಡ್ ಕಮಿಟಿಯ ಸದಸ್ಯ ವಾಲ್ಮೀಕಿ ಥಾಪರ್ ಸಹಾ ಹುಲಿ ಮತ್ತು ಆದಿವಾಸಿಗಳು ಒಟ್ಟಿಗೆ ಇರಲು ಸಾಧ್ಯವಿಲ್ಲ ಎಂದು ತಮ್ಮ ಅಮೂಲ್ಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ ಆದಿವಾಸಿಗಳನ್ನು ಎತ್ತಂಗಡಿ ಮಾಡಬೇಕೆಂದು ಪರೋಕ್ಷವಾಗಿ ಸೂಚಿಸಿದ್ದಾರೆ.

ಹೀಗೆ ಸರ್ಕಾರದವರು ಮತ್ತು ಅದನ್ನು ನಡೆಸುವ ಕುಲೀನರು ಎಲ್ಲರೂ ಆದಿವಾಸಿಗಳನ್ನು ಕಾಡಿನಿಂದ ಎತ್ತಂಗಡಿ ಮಾಡಬೇಕೆಂದೇ ಅಭಿಪ್ರಾಯ ರೂಪಿಸುತ್ತಿರುವಾಗಲೇ ಇದ್ದಕ್ಕಿದ್ದಂತೆ ಸರ್ಕಾರ "ವನ್ಯಜೀವಿ ಸಂರಕ್ಷಣಾ ಕಾಯಿದೆ 2006" ಎಂಬ ಮಸೂದೆಯನ್ನು ತರುವ ಪ್ರಯತ್ನ ನಡೆಸಿದೆ. ಇದರಲ್ಲಿ ಮಿಕ್ಕೆಲ್ಲಾ ಅಂಶಗಳ ಜೊತೆ ಆದಿವಾಸಿಗಳಿಗೆ ಕಾಡಿನಲ್ಲೇ ಎರಡು ಎಕರೆ ಜಮೀನು ಕೊಟ್ಟು ಉಳಿಸಿಕೊಳ್ಳುವ ಪ್ರಸ್ತಾಪವೂ ಇದೆ!

ಒಂದೆಡೆ ಆದಿವಾಸಿಗಳನ್ನು ಎತ್ತಂಗಡಿ ಮಾಡುವ ಹುನ್ನಾರ ನಡೆಸುತ್ತಲೇ ಮತ್ತೊಂದೆಡೆ ಆದಿವಾಸಿಗಳಿಗೆ ಕಾಡಿನಲ್ಲೇ ಜಮೀನು ಕೊಡಿಸುವ ಪ್ರಯತ್ನವನ್ನು ಮಾಡುತ್ತಿರುವುದರ ಗುಟ್ಟೇನು? ಹಾಗಿದ್ದಲ್ಲಿ ಇದ್ದಕ್ಕಿದ್ದಂತೆ ಸರ್ಕಾರಕ್ಕೆ ಆದಿವಾಸಿಗಳ ಮೇಲೆ ತೀರದ ಅನುಕಂಪ ಬಂದುಬಿಟ್ಟದೆಯೇ?

ಆದಿವಾಸಿಗಳ ಮೇಲಿನ ಅನುಕಂಪವಲ್ಲ- ಅವರ ದೇಸಿಜ್ಞಾನದ ಸುಲಿಗೆಯ ಮೋಹ!



ಬ್ರಿಟಿಷರ ಕಾಲದಲ್ಲಿ ಕಾಡೆಂದರೆ ನವಾಬರ, ರಾಜರ ಮತ್ತು ಬಿಳಿದೊರೆಗಳ ಬೇಟೆಯ ಮೋಹಕ್ಕೆ ಒಂದು ತಾಣ. ಆ ಬೇಟೆಗೆ ಪೂರಕವಾಗಿ ಸ್ಥಳೀಯ ಆದಿವಾಸಿಗಳನ್ನು ಪದಾತಿಗಳನ್ನಾಗಿ ಬಳಸಿಕೊಳ್ಳಲಾಗುತ್ತಿತ್ತು. ಆ ನಂತರ ಅಲ್ಲಿ ಸಿಗುತ್ತಿದ್ದ ಅಪಾರ ವನ್ಯ ಮತ್ತು ಖನಿಜ ಸಂಪತ್ತಿನ ಮೇಲೆ ಕಣ್ಣು ಬೀಳುತ್ತಿದ್ದಂತೆ ಆದಿವಾಸಿಗಳನ್ನು ಕೋಟ್ಯಂತರ ಸಂಖ್ಯೆಯಲ್ಲಿ ಎತ್ತಂಗಡಿ ಮಾಡಲಾಯಿತು. ಅದೇ ಪ್ರಕ್ರಿಯೆಯೇ ಈಗಲೂ ಮುಂದುವರೆದಿದೆ. 1988ರ ನಂತರ ಅರಣ್ಯಗಳನ್ನು ಇನ್ನೂ ಹೊಸ ರೀತಿಯಲ್ಲಿ ಲೂಟಿ ಹೊಡೆಯುವ ತಂತ್ರಜ್ಞಾನ ಬಹುರಾಷ್ಟ್ರೀಯ ಕಂಪನಿಗಳಿಗೆ ದೊರೆತಿದೆ. ಅದೇ ಬಯೋಟೆಕ್ನಾಲಜಿ. ಮುಂದಿನ ದಿನಗಳಲ್ಲಿ ಇದು ಐ.ಟಿ.ಗಿಂತ ಹೆಚ್ಚು ಲಾಭ ತರುವ ಉದ್ಯಮವಾಗಲಿದೆ. ಇದಕ್ಕೆ ಕಚ್ಚಾವಸ್ತು ಎಂದರೆ ಕಾಡಿನಲ್ಲಿ ಸಿಗುವ ಜೀವ ವೈವಿಧ್ಯ. ಅದನ್ನು ಉಳಿಸಿಕೊಳ್ಳಬೇಕೆಂದರೆ ಕೇವಲ ಅರಣ್ಯ ಇಲಾಖೆಯ ಅಧಿಕಾರಿಗಳಿಂದ ಸಾಧ್ಯವಿಲ್ಲ ಎಂದು ಈಗಾಗಲೇ ಸಾಬೀತಾಗಿದೆ. ಅಷ್ಟು ಮಾತ್ರವಲ್ಲ, ಕಾಡಿನಲ್ಲಿ ಲಭ್ಯವಿರುವ ಜೀವ ವೈವಿಧ್ಯಗಳ ಪತ್ತೆ ಮತ್ತು ಬಳಕೆಗೆ ಕಾಡಿನಲ್ಲೇ ಹುಟ್ಟಿ ಅದರ ಭಾಗವೇ ಆಗಿಬಿಟ್ಟಿರುವ ಆದಿವಾಸಿಗಳ ದೇಸಿಜ್ಞಾನದ ಅಗತ್ಯವೂ ಅತಿ ಮುಖ್ಯವೆಂದು ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಅನುಭವಗಳಿಂದ ಅರ್ಥ ಮಾಡಿಕೊಂಡಿವೆ. ಉದಾಹರಣೆಗೆ ಜೀವವೈವಿಧ್ಯವನ್ನು ಬಳಸಿ ಔಷಧಿ ಉತ್ಪಾದನೆ ಮಾಡುವ ಶಮನ್ ಫಾರ್ಮಸ್ಯೂಟಿಕಲ್ಸ್ ಮತ್ತು ಎಲಿ-ಲಿಲ್ಲಿ ಎಂಬ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು "ಜೀವವೈವಿಧ್ಯವನ್ನು ಆಧರಿಸಿ ಒಂದು ಹೊಸ ಔಷಧಿ ಉತ್ಪಾದನೆ ಮಾಡಲು ತಗಲುವ ವೆಚ್ಚ ಆದಿವಾಸಿಗಳ ಸಹಾಯವಿಲ್ಲದಿದ್ದರೆ ಎಂಟು ಪಟ್ಟು ಹೆಚ್ಚುತ್ತದೆ" ಎಂದು ಕಂಡುಹಿಡಿದಿವೆ. ಹೀಗಾಗಿ ಮೊದಮೊದಲು ಆದಿವಾಸಿಗಳನ್ನು ಸಂಪೂರ್ಣವಾಗಿ ಎತ್ತಂಗಡಿ ಮಾಡಬೇಕೆನ್ನುತ್ತಿದ್ದ ಈ ಕಂಪನಿಗಳು ಈಗ ಆಯ್ದ ಆದಿವಾಸಿ ಕುಟುಂಬಗಳು ಇದ್ದರೆ ಒಳ್ಳೆಯದೆಂದು ಅರ್ಥ ಮಾಡಿಕೊಳ್ಳುತ್ತಿವೆ. ಅದೇ ಬಗೆಯ ಕಾನೂನು ಮಾಡಲು ಸರ್ಕಾರಗಳ ಮೇಲೆ ಒತ್ತಡ ತರುತ್ತಿವೆ. ಅದರ ಭಾಗವಾಗಿಯೇ ನಮ್ಮ 2006ರ ಕಾಯಿದೆಯೂ ಸಹಾ "ತೀರಾ ಅಗತ್ಯವಿದ್ದರೆ ಮಾತ್ರ ಎತ್ತಂಗಡಿ ಮಾಡಿದರೆ ಸಾಕು" ಎನ್ನುತ್ತದೆ.

ಇದರೊಡನೆ ಎಲ್ಲೆಲ್ಲಿ ಆದಿವಾಸಿಗಳಿದ್ದಾರೋ ಅಲ್ಲೆಲ್ಲಾ ಸಶಸ್ತ್ರ ನಕ್ಸಲೀಯ ಚಳವಳಿಯು ಗಟ್ಟಿಗೊಳ್ಳುತ್ತಿದ್ದು ಎತ್ತಂಗಡಿ ಕ್ರಮಗಳು ಆ ಚಳವಳಿಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆಂಬ ಭಯವೂ ಸರ್ಕಾರಕ್ಕಿದೆ. ಇವೆಲ್ಲವೂ ಒಟ್ಟು ಸೇರಿಯೇ ಈ ಹೊಸ ಕಾಯಿದೆ, ಈ ಹೊಸ ಅನುಕಂಪ!

ಯಶಸ್ಸು

ಒಂದು ಚೆಂದದ ಇಂಗ್ಲಿಷ್ ಮಾತಿದೆ. "ವಿಫಲತೆ[illegible] ಕೀಲಿಕೈ ಎಂದರೆ ಎಲ್ಲರನ್ನೂ ಮೆಚ್ಚಿಸಲು ಯತ್ನಿ[illegible]ವುದು." ಈ ಮಾತು ಇಂದಿನ ಮನುಷ್ಯರು ಯಶಸ್[illegible] ಬಗ್ಗೆ ಇಟ್ಟುಕೊಂಡಿರುವ ಭ್ರಮೆಯನ್ನು ಒಡೆ[illegible] ಹಾಕುತ್ತದೆ. ಯಶಸ್ಸು ಎಂದರೆ ಒಂದು [illegible] ನಿಟ್ಟುಸಿರೇ ಹೊರತು, ಚೀರಾಟವಲ್ಲ. ಈ ಬಗೆ[illegible] ಜಗತ್ತಿನ ಪ್ರಮುಖ ವಿದ್ವಾಂಸರ ಮಾತುಗಳು [illegible] ಸೂಕ್ತಿಗಳಾಗಿವೆ. ಇವುಗಳನ್ನು ಸಂಗ್ರಹಿಸಿ ಕಳಿ[illegible] ಅರಕಲಗೂಡಿನ ಶಿಕ್ಷಕರಾದ ಗುರುಸ್ವಾಮಿಯವ[illegible] ಧನ್ಯವಾದಗಳು.

-ಮ[illegible]

ಸೌಹಾರ್ದ ಗಿರಿಯಲ್ಲಿ ನಿಸರ್ಗದ 'ನೀಲಿಗ್ಯಾನ'

ಒಂದು ನಿಮಿಷ ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ನಾನು ವಿವರಿಸಲಿರುವ ದೃಶ್ಯವನ್ನು ಕಲ್ಪಿಸಿಕೊಳ್ಳಿ.....

....ನೀವು ಒಂದು ಬೆಟ್ಟದ ಮೇಲಿದ್ದೀರಿ. ಅಲ್ಲಿನ ತಂಪು ವಾತಾವರಣ, ಕೈಗಳಿಗೆ ಎಟುಕದೆ ತೇಲಿ ಹೋಗುತ್ತಿರುವ ಮೋಡಗಳು, ನಿಮ್ಮ ಸುತ್ತ ಕಂಗೊಳಿಸುತ್ತಿರುವ ನೀಲಿ ಹೂಗಳು... ಹೌದು, ನೀವು ಕಣ್ಣು ಹಾಯಿಸಿದಷ್ಟೂ ದೂರ ಹರಡಿರುವ ಲಕ್ಷಾಂತರ ನೀಲಿ ಹೂಗಳು! ಎಲ್ಲಿ ನೋಡಿದರಲ್ಲಿ ಕಂಗೊಳಿಸುತ್ತಿರುವ ನೀಲಿ ಹೂಗಳು! ಹನ್ನೆರಡು ವರ್ಷಕ್ಕೊಮ್ಮೆ ಅರಳಿ ಕಂಗಳಿಗೆ ಆನಂದ ನೀಡುವ ನೀಲಿ ಹೂಗಳು!

ಸ್ವರ್ಗ ಹೀಗೇ ಇರಬಹುದು ಅನ್ನಿಸಿತಲ್ಲವೇ ನಿಮಗೆ? ಆದರೆ ನಾನು ಈ ದೃಶ್ಯವನ್ನು ಕಲ್ಪಿಸಿಕೊಂಡು ಹೇಳುತ್ತಿಲ್ಲ; ಯಾವುದೋ ಪೇಂಟಿಂಗ್ ಅಥವಾ ಯೂರೋಪಿನಲ್ಲಿ ಕಂಡದ್ದನ್ನು ವಿವರಿಸುತ್ತಿಲ್ಲ, ಬದಲಾಗಿ ನಮ್ಮ ಕರ್ನಾಟಕದ ಚಿಕ್ಕಮಗಳೂರಿನಲ್ಲಿ ನೋಡಿದ್ದನ್ನು ನಿಮಗೆ ಹೇಳುತ್ತಿದ್ದೇನೆ....

ಮೊನ್ನೆ ಸೆಪ್ಟೆಂಬರ್ 12 ರಂದು, ಪ್ರತಿ ವರ್ಷ ಚಿಕ್ಕಮಗಳೂರಿನಲ್ಲಿ ಚೆಡ್ಡಿಗಳು ಸೃಷ್ಟಿಸುವ ರಾದ್ಧಾಂತದ ಬಗ್ಗೆ ಅಲ್ಲಿನ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಲು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ತಂಡದ ಸದಸ್ಯೆಯಾಗಿ ಹೋಗಿದ್ದಾಗ ಅಲ್ಲಿನ ಬಾಬಾಬುಡನ್ ಗಿರಿಯಲ್ಲಿ ಕಂಡ ಅದ್ಭುತ ದೃಶ್ಯದ ಬಗ್ಗೆ ಹೇಳಬೇಕೆನಿಸುತ್ತಿದೆ.





Photo: G. Rajkumar

ಸುಮಾರು 1800 ಮೀಟರ್ ಎತ್ತರದಲ್ಲಿರುವ ಬಾಬಾಬುಡನ್ ದರ್ಗಾಗೆ ಹೋಗುತ್ತಿದ್ದಾಗ ನಮ್ಮೊಂದಿಗಿದ್ದ ಕಲ್ಕುಳಿ ವಿಠ್ಠಲ ಹೆಗಡೆಯವರು ದೂರದ ಬೆಟ್ಟವೊಂದರಲ್ಲಿ ಅರಳಿದ್ದ ಈ ನೀಲಿ ಹೂಗಳ ಬಗ್ಗೆ ನಮ್ಮ ಗಮನ ಸೆಳೆದರು.

ನಾವು ದರ್ಗಾವನ್ನು ತಲುಪಲು ಎತ್ತರ, ಎತ್ತರಕ್ಕೆ ಹೋದಂತೆ ನಮ್ಮ ಸುತ್ತಲು ಈ ನೀಲಿ ಹೂಗಳಿಂದ ತುಂಬಿದ್ದ; ಇಡೀ ಪ್ರದೇಶವನ್ನು ನೀಲಿಮಯವಾಗಿಸಿದ್ದ; ಅಕ್ಕ, ಪಕ್ಕ, ಹಿಂದೆ, ಮುಂದೆ, ಎಲ್ಲೆಡೆ ಅರಳಿ, ಇಡೀ ಬೆಟ್ಟಗಳನ್ನೇ ಆವರಿಸಿಕೊಂಡಿದ್ದ ಈ ಹೂಗಳ ಸಂಭ್ರಮದ ದೃಶ್ಯ ಪದಗಳಿಗೆ ನಿಲುಕುವುದು ಅಸಾಧ್ಯ.

ಹನ್ನೆರಡು ವರ್ಷಕ್ಕೊಮ್ಮೆ ಅರಳುವ ಈ ನೀಲಿ ಹೂವು (ಅವುಗಳನ್ನು 'ಕುರಿಂಜಿ' ಎಂದು ಕರೆಯುತ್ತಾರೆಂದು ಹೆಗಡೆಯವರು ವಿವರಿಸಿದರು)ಗಳನ್ನು ಮಾನವನೊಬ್ಬ ತನ್ನ ಜೀವಿತಾವಧಿಯಲ್ಲಿ ಮೂರು ಬಾರಿ ನೋಡಿ ಆನಂದಿಸಬಹುದಷ್ಟೇ. ಆದ್ದರಿಂದ ಆದಷ್ಟು ಜನ ಇದನ್ನು ನೋಡಿ ನನ್ನಂತೆ ಸಂತೋಷಪಡಲಿ ಎಂದು ಇದರ ಬಗ್ಗೆ ಬರೆಯುತ್ತಿದ್ದೇನಲ್ಲದೆ, ಈ 'ನೀಲಿ ಕುರಿಂಜಿ' ಬಗ್ಗೆ ಇಂಟರ್‌ನೆಟ್‌ನಲ್ಲಿ ಸಂಗ್ರಹಿಸಿದ ಮಾಹಿತಿಯನ್ನೂ ನೀಡುತ್ತಿದ್ದೇನೆ.

ಹನ್ನೆರಡು ವರ್ಷಕ್ಕೊಮ್ಮೆ ಶ್ರವಣಬೆಳಗೊಳದಲ್ಲಿನ ಗೊಮ್ಮಟನಿಗೆ ನಡೆಯುವ ಮಹಾಮಸ್ತಕಾಭಿಶೇಕದ ಬಗ್ಗೆ ತಲೆ ಕೆಡಿಸಿಕೊಳ್ಳುವ ಸರ್ಕಾರ, ನೂರಾರು ಕಾಲಂ ಜಾಗೆಗಳನ್ನು ನೀಡುವ ಪತ್ರಿಕೆಗಳು, ನಮ್ಮ ನಾಡಿನ ನಿಸರ್ಗದ ಈ ಅದ್ಭುತದ ಬಗ್ಗೆ ಬರೆಯುದೇ ಇರುವುದು (ಪ್ರಜಾವಾಣಿ ಹೊರತಾಗಿ) ಒಂದು ಅಚ್ಚರಿಯೇ ಸರಿ!

ಒಂದು ಅಂದಾಜಿನ ಪ್ರಕಾರ ಹಿಂದೊಮ್ಮೆ ಈ ಕುರಿಂಜಿ ಹೂಗಳು ಇಡೀ ಬಾಬಾಬುಡನ್‌ಗಿರಿಯನ್ನೇ ಹನ್ನೆರಡು ವರ್ಷಕ್ಕೊಮ್ಮೆ ಆವರಿಸುತ್ತಿದ್ದವಂತೆ. ಆದರೆ ಇವತ್ತು ಗಿರಿಯಲ್ಲಿ ಕಾಫಿ ಎಸ್ಟೇಟ್‌ಗಳು ತಲೆ ಎತ್ತಿರುವುದರಿಂದ, ಅಳಿದುಳಿದ ಜಾಗೆಗಳಲ್ಲಿ ಮಾತ್ರ ಇವತ್ತು 'ಕುರಿಂಜಿ' ಕಾಣಿಸಿಕೊಂಡಿದೆ.

ಅಂದಹಾಗೆ, ಈ ಕುರಿಂಜಿ ಹೂಗಳು ಪಶ್ಚಿಮ ಘಟ್ಟದ ಶೋಲಾ ಕಾಡುಗಳಿಗೆ ವಿಶೇಷವಾಗಿರುವುದರಿಂದ ಅವು ಕೇರಳದಿಂದ ಕರ್ನಾಟಕದವರೆಗೂ ಹಬ್ಬಿವೆ. ಆದರೆ ವ್ಯತ್ಯಾಸ ಯಾವುದೆಂದರೆ ಇವುಗಳ ಬಗ್ಗೆ ನಮ್ಮ ಜನರಲ್ಲಿ ಅಜ್ಞಾನ, ಸರ್ಕಾರದ ನಿರ್ಲಕ್ಷ್ಯ ಹೆಚ್ಚಾಗಿದ್ದರೂ, ನೆರೆಯ ಕೇರಳದಲ್ಲಿ ಈ ಕುರಿಂಜಿಗಳು ಅರಳುವ ಪ್ರದೇಶಗಳನ್ನು ಕಾಪಾಡಬೇಕೆಂದು ಕೆಲವು ದಶಕಗಳಿಂದ ಪರಿಸರವಾದಿಗಳು ಹೋರಾಡುತ್ತಿದ್ದಾರೆ.

ಕರ್ನಾಟಕಕ್ಕಿಂತಲೂ ತಮಿಳುನಾಡು ಮತ್ತು ಕೇರಳದಲ್ಲಿ ಟೀ ಮತ್ತು ಏಲಕ್ಕಿ ಎಸ್ಟೇಟ್‌ಗಳು ಹಾಗು ವಿದ್ಯುತ್ ಯೋಜನೆಗಳು ಈ ಕುರಿಂಜಿ ಬೆಳೆಯುವ ಪ್ರದೇಶಗಳನ್ನು ನಾಶ ಮಾಡಿವೆ. ಆದರೆ ಜಗತ್ತಿನ ಯಾವುದೇ ಭಾಗದಲ್ಲಿ ಅರಳದ ಈ ಹೂಗಳು ಭಾರತದ ಈ ಪ್ರದೇಶಗಳಲ್ಲಿ ಮಾತ್ರ ಹೀಗೆ ಒಮ್ಮೆಲೆ ಅರಳುವುದರಿಂದ, ಅದನ್ನು ನೋಡಲೆಂದು ಪ್ರವಾಸಿಗರು ಬರುವುದರಿಂದ ಈಗ ಈ ಎರಡೂ ರಾಜ್ಯಗಳು ಎಚ್ಚೆತ್ತುಕೊಂಡು, ಕುರಿಂಜಿ ಹೂಗಳು ಅರಳುವ ಪ್ರದೇಶಗಳನ್ನು ಸುರಕ್ಷಿತ ತಾಣಗಳೆಂದು ಘೋಷಿಸಲು ಮುಂದಾಗಿವೆ.

ಕಂಡಹಾಗೆ



ಇಲ್ಲೊಂದು ವಿಸ್ಮಯಕಾರಿ ವಿಷಯವನ್ನು ಹೇಳಲೇಬೇಕು. ನೀಲಗಿರಿ ಬೆಟ್ಟಗಳಿಗೆ ಹೆಸರು ತಂದಿದ್ದು ಅಲ್ಲಿನ ನೀಲಗಿರಿ ಮರಗಳಲ್ಲ, ಬದಲಾಗಿ ತಮಿಳು ಮತ್ತು ಮಲಯಾಳಂನಲ್ಲಿ 'ನೀಲ ಕುರಿಂಜಿ' ಎಂದೇ ಪ್ರಸಿದ್ಧವಾಗಿರುವ ಈ ಹೂಗಳು! ಹಿಂದೊಮ್ಮೆ ನೀಲಗಿರಿ ಶ್ರೇಣಿಯನ್ನೇ ಈ ಹೂಗಳು ನೀಲಿಮಯವಾಗಿಸುತ್ತಿದ್ದರಿಂದ ಅವುಗಳಿಗೆ 'ನೀಲಿ' ಪದ ಅಂಟಿಕೊಂಡಿದ್ದು! ಇವತ್ತು ಬಾಬಾಬುಡನ್‌ಗಿರಿಯಲ್ಲಿ ಹೇಗೆ ಈ ಕುರಿಂಜಿಗಳು ಅರಳಿದ್ದಾವೋ, ಹಾಗೆಯೇ ತಮಿಳುನಾಡಿನ ಕೊಡೈಕೆನಾಲ್ ಮತ್ತು ಕೇರಳದ ಮುನ್ನಾರ್‌ನಲ್ಲೂ ಕುರಿಂಜಿಗಳು ಅರಳಿ ಅವುಗಳನ್ನು ನೋಡಿ ಆನಂದಿಸಲು ಲಕ್ಷಾಂತರ ಪ್ರವಾಸಿಗಳು ಸೇರುತ್ತಿದ್ದಾರೆ. 1994 ರಿಂದ ಈ ಹೂಗಳನ್ನು ನೋಡಲು ಕಾಯುತ್ತಿದ್ದ ಲಕ್ಷಾಂತರ ಜನ ಈಗ ಇವುಗಳನ್ನು ಕಂಡು ಆನಂದಿಸಲು ಬರುತ್ತಿರುವುದರಿಂದ ಅಲ್ಲಿನ ಹೋಟೆಲ್‌ಗಳು ಕಿಕ್ಕಿರಿದಿವೆ. ಅಷ್ಟೇ ಅಲ್ಲ ಇದೇ ಅಕ್ಟೋಬರ್ ತಿಂಗಳ ಮೊದಲ ವಾರದಲ್ಲಿ 'ಕುರಿಂಜಿ ಹಬ್ಬ'ವನ್ನು ಕೇರಳ ಸರ್ಕಾರ ಆಚರಿಸುತ್ತಿದೆ.



ಹಿಂದೊಮ್ಮೆ ಸಾವಿರಾರು ಎಕರೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಕುರಿಂಜಿ ಈಗ ಹಲವೇ ಪ್ರದೇಶಗಳಿಗೆ ಸೀಮಿತವಾಗಿರುವುದರಿಂದ, ಆ ಪ್ರದೇಶಗಳ ರಕ್ಷಣೆಗೆ ಕೇರಳ ಮತ್ತು ತಮಿಳುನಾಡು ಸರ್ಕಾರಗಳು ಜಂಟಿ ಯೋಜನೆ ರೂಪಿಸುತ್ತಿವೆ. ಆ ಎರಡೂ ರಾಜ್ಯಗಳ ಪರಿಸರವಾದಿಗಳ ಹೋರಾಟ ಮತ್ತು ಅಲ್ಲಿನ ಸರ್ಕಾರಗಳ ಒತ್ತಡದಿಂದಾಗಿಯೇ ಇದೇ ಮೇ ತಿಂಗಳಲ್ಲಿ ಕೇಂದ್ರ ಸರ್ಕಾರ ಕುರಿಂಜಿ ಹೂಗಳ ಒಂದು ಅಂಚೆ ಸ್ಟ್ಯಾಂಪ್ ಅನ್ನು ಬಿಡುಗಡೆಗೊಳಿಸಿತ್ತು.

ತಮಿಳುನಾಡಿನ ಜನರಿಗೂ, ಈ ನೀಲಿ ಕುರಿಂಜಿ ಹೂಗಳಿಗೂ ಭಾವನಾತ್ಮಕವಾದ ಸಂಬಂಧವಿರುವುದಕ್ಕೆ ಕಾರಣವೂ ಇದೆ. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಮುರುಗನ್ ದೇವನು ವಾಲಿ ಎಂಬ ದೇವತೆಯನ್ನು ಮದುವೆ ಆದಾಗ ಅವಳಿಗೆ ಈ ನೀಲಿ ಕುರಿಂಜಿಗಳಿಂದ ಮಾಡಿದ್ದ ಹಾರವನ್ನು ಹಾಕಿದ್ದನಂತೆ. ಈ ಪುರಾಣ ಅಲ್ಲಿನ ಜನರ ಮೇಲೆ ಎಂಥ ಪ್ರಭಾವ ಬೀರಿದೆ ಎಂದರೆ, ಕುರಿಂಜಿ ಹೂಗಳು ಬಾಡಿ, ಅವುಗಳ ಬೀಜ ಎಲ್ಲೆಡೆ ಹರಡುವವರೆಗೂ ಜನ ಅವುಗಳನ್ನು ಮುಟ್ಟುವುದಿಲ್ಲ! ಅಷ್ಟೇ ಅಲ್ಲ, ಆ ಎರಡು ರಾಜ್ಯಗಳ ಹಲವು ಬುಡಕಟ್ಟು ಜನಾಂಗಗಳು ತಮ್ಮ ಜೀವಿತಾವಧಿಯನ್ನು ಲೆಕ್ಕ ಹಾಕುವುದೇ ಈ ಕುರಿಂಜಿಗಳು ಅರಳುವ ವರ್ಷದ ಆಧಾರದ ಮೇಲೆ!

ಈ ಕುರಿಂಜಿ ಹೂಗಳು ತಲೆತಲಾಂತರದಿಂದ ದಕ್ಷಿಣ ಭಾರತದಲ್ಲಿ ಕಾಣಿಸಿಕೊಂಡಿದ್ದರೂ ಅವುಗಳ ವಿಶೇಷತೆಯನ್ನು ಮೊದಲ ಬಾರಿಗೆ 1800 ರ ದಶಕದಲ್ಲಿ ಗಮನಿಸಿದ್ದು ಇಬ್ಬರು ಬ್ರಿಟಿಷ್ ಸಸ್ಯಶಾಸ್ತ್ರಜ್ಞರು. ಅದೆಲ್ಲ ಏನೇ ಇರಲಿ, ಜೀವ ವೈವಿಧ್ಯತೆಯನ್ನು ಹೊಂದಿರುವ ಜಗತ್ತಿನ 18 ಪ್ರದೇಶಗಳಲ್ಲಿ ಈ ಕುರಿಂಜಿ ಹೂಗಳ ಪ್ರದೇಶಗಳೂ ಸೇರಿವೆ. ಈಗಾಗಲೇ ಈ ಪ್ರದೇಶಗಳು ನಾಶವಾಗಿ ಹಲವೇ ಹಲವು ಕಡೆ ಈ ಹೂಗಳು ಅರಳುತ್ತಿವೆ. ಕರ್ನಾಟಕದಲ್ಲಿ ಉಳಿದಿರುವ ಹಲವು ಪ್ರದೇಶಗಳಲ್ಲಿ ಬಾಬಾಬುಡನ್ ಗಿರಿಯೂ ಒಂದಾಗಿದೆ.

ನಮ್ಮ ಪಶ್ಚಿಮಘಟ್ಟದ ಜೀವ ವೈವಿಧ್ಯತೆಯನ್ನು ಕಾಪಾಡಬೇಕಿದ್ದರೆ, ಆ ವೈವಿಧ್ಯತೆಯ ಅಂಗವಾಗಿರುವ ಕುರಿಂಜಿ ಹೂಗಳು ಹನ್ನೆರಡು ವರ್ಷಗಳ ನಂತರವೂ ಮತ್ತೆ ಕಾಣಿಸಿಕೊಳ್ಳಬೇಕೆಂದಿದ್ದರೆ, ನಮ್ಮ ರಾಜ್ಯದಲ್ಲೂ ಕುರಿಂಜಿ ಅರಳುವ ಪ್ರದೇಶಗಳನ್ನು ರಕ್ಷಿಸಬೇಕಿದೆ. ಆದರೆ ಹಾಗೆ ಮಾಡಬೇಕೆಂಬ ಆಶೆ ಹುಟ್ಟುವುದು ಆ ಹೂಗಳ ಸೌಂದರ್ಯವನ್ನು ನೋಡಿದ ನಂತರವೇ.

ಕೊನೆಯದಾಗಿ, ಈ ಹೂಗಳ ಅಂದವನ್ನು ಆನಂದಿಸಲು ಕೊಡೈಕೆನಾಲ್ ಮತ್ತು ಮುನ್ನಾರ್ ಸೂಕ್ತ ಪ್ರದೇಶಗಳು ಎಂಬ ಮಾತಿದೆಯಾದರೂ, ನಮ್ಮದೇ ಬಾಬಾಬುಡನ್ ಗಿರಿಯಲ್ಲಿ ಅವನ್ನು ನೋಡಿ ಆನಂದಿಸುವುದು ಒಂದು ವಿಶೇಷ. ಅಂದಹಾಗೆ, ಈ ಹೂಗಳು ಇನ್ನು ಎರಡು ತಿಂಗಳು ಮಾತ್ರ ಇರುತ್ತವೆ. ಹಾಗಾಗಿ, ಗಿರಿಗಳನ್ನೇ 'ನೀಲಿ'ಯಾಗಿಸಿರುವ ಈ ಕುರಿಂಜಿಯ ಅದ್ಭುತ ನೋಡಬೇಕೆಂದಿದ್ದರೆ, ಈಗಲೇ ಹೋಗಿ....

ಹೋಗಿ, ನೋಡುತ್ತೀರಾ?

-ಗೌರಿ ಲಂಕೇಶ್

ವಿಶೇಷ ಸೂಚನೆ




ಪಿ.ಲಂಕೇಶರ ಅಭಿಮಾನಿಗಳಿಗೂ, ಸಾಹಿತ್ಯಾಸಕ್ತರಿಗೂ, 'ಲಂಕೇಶ್' ವಾರಪತ್ರಿಕೆಯ ಓದುಗರಿಗೂ ಈ ಮೂಲಕ ತಿಳಿಸುವುದೇನೆಂದರೆ, ಇನ್ನು ಮುಂದೆ ಪಿ. ಲಂಕೇಶರ ಸಾಹಿತ್ಯದ ಮೇಲಿನ ಎಲ್ಲಾ ಹಕ್ಕುಗಳು ಅವರ ಶ್ರೀಮತಿ ಇಂದಿರಾ ಲಂಕೇಶ್ ರವರದ್ದಾಗಿರುತ್ತವೆ.

ಆದ್ದರಿಂದ ಲಂಕೇಶರ ಬರಹಗಳನ್ನು ಕುರಿತಂತೆ ಯಾವುದೇ ವಿಷಯವಿದ್ದರೂ ಶ್ರೀಮತಿ ಇಂದಿರಾ ಲಂಕೇಶ್‌ರವರನ್ನು ಸಂಪರ್ಕಿಸತಕ್ಕದ್ದು. ಲಂಕೇಶರ ನಾಟಕಗಳನ್ನು ಆಡಬಯಸುವವರು ಹಿಂದಿನಂತೆಯೇ ಗೌರವಧನ ಕೊಡುವ ಅಗತ್ಯವಿಲ್ಲ, ಆದರೆ ನಾಟಕ ಪ್ರದರ್ಶನದ ಬಗ್ಗೆ ವಿಚಾರ ತಿಳಿಸಬೇಕೆಂದು ವಿನಂತಿ. ಹಾಗೆಯೇ ಲಂಕೇಶರ ಸಾಹಿತ್ಯವನ್ನು ಪಠ್ಯವನ್ನಾಗಿಸಲು ಅಥವಾ ಸಂಗ್ರಹಗಳಲ್ಲಿ ಬಳಸಲು ಇಚ್ಛಿಸುವ ವಿಶ್ವವಿದ್ಯಾಲಯಗಳು, ಬರಹಗಾರರು, ಪ್ರಕಾಶಕರು ಇನ್ನು ಮುಂದೆ ಇಂದಿರಾ ಲಂಕೇಶ್‌ರವರ ಒಪ್ಪಿಗೆ ಪಡೆಯಬೇಕೆಂದು ತಿಳಿಸಲು ಇಚ್ಛಿಸುತ್ತೇವೆ.

ಇಂದಿರಾ ಲಂಕೇಶ್‌ರವರ ವಿಳಾಸ :
ನಂ. 9, ಪಬ್ಲಿಕ್ ಹೌಸ್, ... ರಸ್ತೆ, ಬಸವನಗುಡಿ, ಬೆಂಗಳೂರು – 560 004.

ರಾಜೀನಾಮೆ ನಾಟಕ



ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತಮಿಳುನಾಡಿನ ಪ್ರವಾಸದಲ್ಲಿರುವ ಸಮಯದಲ್ಲೇ ಸಚಿವ ಚೆನ್ನಿಗಪ್ಪ ತಮಿಳು ನಾಡಿನ ತೀರ್ಥ ಕ್ಷೇತ್ರಗಳ ದರ್ಶನಕ್ಕೆ ತೆರಳಿರುವುದರ ರಹಸ್ಯವೇನು? ಜಾತ್ಯತೀತ ಜನತಾದಳ ಪಕ್ಷದ ಮೂಲಗಳ ಪ್ರಕಾರ, ಸಚಿವ ಚೆನ್ನಿಗಪ್ಪನವರಿಗೆ ಈಗ ದೇವರ ದರ್ಶನಕ್ಕಿಂತಲೂ ತುರ್ತಾಗಿ ದೇವೇಗೌಡರ ದರ್ಶನ ಮಾಡಲೇಬೇಕಾದ ಅನಿವಾರ್ಯ ಎಂಬಂತಾಗಿದೆಯಂತೆ.

ಕಳೆದ ಗುರುವಾರ ಸೆಪ್ಟೆಂಬರ್ 14 ರಂದು ಅತಿ ನಿಗೂಢವಾಗಿ ನುಸುಳಿ ಬಂದ ಸೀಡಿಯಲ್ಲಿ, ದೇವೇಗೌಡರ ಕುಟುಂಬದ ಸ್ವಯಂಘೋಷಿತ ಬಲಗೈ ಬಂಟ ಸಚಿವ ಚೆನ್ನಿಗಪ್ಪ, ಗೌಡರ ಕುಟುಂಬದ ಸದಸ್ಯರನ್ನು ತೀರಾ ಅಶ್ಲೀಲವಾಗಿ ಬೈಯುತ್ತಾ ಹಾವ-ಭಾವಗಳೊಂದಿಗೆ ಭಾರಿ ಅಬ್ಬರದಿಂದ ಮಾತನಾಡಿದ ದೃಶ್ಯವಿದೆ.

ಇಡೀ ರಾಜ್ಯದ ಜನತೆ ಈ ಸಿಡಿಯನ್ನು ವೀಕ್ಷಿಸಿದ್ದಾರೆ. ಸಹಜವಾಗಿ ಇದು ದೇವೇಗೌಡರಾದಿಯಾಗಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಸಿಟ್ಟು ಮತ್ತು ಮುಜುಗರಕ್ಕೆ ಕಾರಣವಾಗಿ ಅವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದೆ. ಈ ಸೀಡಿಯಲ್ಲಿ ಸಚಿವ ಚೆನ್ನಿಗಪ್ಪ ಪ್ರಸ್ತಾಪಿಸಿರುವುದು ಗಣಿಗಾರಿಕೆಗೆ ಸಂಬಂಧಿಸಿದ ವಿಷಯ. ಈಗ ಚೆನ್ನಿಗಪ್ಪ ತಮ್ಮ ಕುಟುಂಬವನ್ನು ಅತ್ಯಂತ ನಿಕೃಷ್ಟ ಭಾಷೆಯಿಂದ ಬೈದಿದ್ದಾರೆಂಬ ವೈಯಕ್ತಿಕ ಕಾರಣದಿಂದ ಅವರನ್ನು ಸಂಪುಟದಿಂದ ಕೈಬಿಟ್ಟರೆ ಅಥವಾ ರಾಜೀನಾಮೆ ಕೇಳಿದರೆ, ಸೂರ್ಯನಷ್ಟು ಕೋಟಿ ರೂಪಾಯಿ ಗಣಿ ಹಗರಣದ ಆರೋಪವನ್ನು ಮೇಲ್ನೋಟಕ್ಕೆ ಒಪ್ಪಿಕೊಂಡಂತೆಯೇ.

ಹೀಗಾಗಿ ಚೆನ್ನಿಗಪ್ಪ ಕುಮಾರಸ್ವಾಮಿಯ ಪಾಲಿಗೆ 'ಬಿಸಿ ತುಪ್ಪ'ವಾಗಿದ್ದಾರೆ. ಸೀಡಿ ವೀಕ್ಷಿಸಿದ ಮರುಗಳಿಗೆಯೇ ಚೆನ್ನಿಗಪ್ಪನನ್ನು ಕರೆಸಿದ ಕುಮಾರಸ್ವಾಮಿ ಒಂದು ರೌಂಡ್ ಹಿಗ್ಗಾಮುಗ್ಗಾ ಬೆಂಡೆತ್ತಿದ್ದಾರೆ. ಆದರೆ ಬಹಿರಂಗವಾಗಿ ಅವರನ್ನು ಶಿಕ್ಷಿಸಲು ಹೊರಟರೆ, ಚೆನ್ನಿಗಪ್ಪ ನಮ್ಮ ಕುಟುಂಬದವರನ್ನು ಬೈದಿದ್ದು ನಿಜ ಎಂದು ಒಪ್ಪಿಕೊಂಡ ಹಾಗೆ ತಾನೆ? ಆ ಕಾರಣಕ್ಕಾಗಿ ಚೆನ್ನಿಗಪ್ಪನ ರಾಜೀನಾಮೆ ಕೇಳುವ ಪ್ರಶ್ನೆಯೇ ಇಲ್ಲ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. 'ಬಿಟ್ಟು ಕೆಳಗೆ ಬಿದ್ರು ಮೀಸೆ ಮಣ್ಣಾಗ್ಲಿಲ್ಲ' ಅಂದನಂತೆ ಹಾಗೆ.

ಈಗ ದೊಡ್ಡ ಗೌಡರು ಚೆನ್ನಿಗಪ್ಪನನ್ನು ಶಿಕ್ಷಿಸುವ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡಿದ್ದು, ತಮ್ಮನ್ನು ಚೆನ್ನೈನಲ್ಲಿ ಬಂದು ಕಾಣುವಂತೆ ಚೆನ್ನಿಗಪ್ಪನಿಗೆ ಹುಕುಂ ಕಳಿಸಿದ್ದರಂತೆ. ಈ ಕಾರಣಕ್ಕೇ ಚೆನ್ನಿಗಪ್ಪ ತಮಿಳ್ನಾಡಿಗೆ ಯಾತ್ರೆ ಹೊರಟದ್ದು, ಶನಿವಾರ ರಾತ್ರಿ ಚೆನ್ನೈನಲ್ಲಿ ಚೆನ್ನಿಗಪ್ಪ ದೇವೇಗೌಡರನ್ನು ಭೇಟಿಯಾಗಿದ್ದಾರೆ. ಗೌಡರ ದರ್ಶನ ನಂತರ 'ಫಲ-ತಾಂಬೂಲ'ವೂ ಸಿಕ್ಕಿದೆಯೆಂದು ಬೇರೆ ಹೇಳಬೇಕಿಲ್ಲ.

ಗೌಡರ ಸೂಚನೆ ಮತ್ತು ಆದೇಶದ ಮೇರೆಗೆ ತೀರ್ಥಯಾತ್ರೆಯಿಂದ ಮರಳಿದ ನಂತರ ಚೆನ್ನಿಗಪ್ಪ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. "ನನ್ನ ಮೇಲೆ ಇಂಥ ಆರೋಪ ಬಂದಿದೆ, ಇದು ಸತ್ಯಕ್ಕೆ ದೂರವಾದದು. ಇದರ ಬಗ್ಗೆ ತನಿಖೆ ನಡೆಯಬೇಕೆಂದು ನಾನು ಮುಖ್ಯಮಂತ್ರಿಗಳನ್ನು ವಿನಂತಿ ಪೂರ್ವಕವಾಗಿ ಒತ್ತಾಯಿಸುತ್ತೇನೆ. ತನಿಖೆ ಪೂರ್ಣವಾಗಿ ನಾನು ನಿರಪರಾಧಿ ಮತ್ತು ಸೀಡಿಗಳು ನಕಲಿ ಎಂದು ಸಾಬೀತಾಗುವವರೆಗೂ ನಾನು ಸಂಪುಟದಿಂದ ಹೊರಗುಳಿಯ ಬಯಸುತ್ತೇನೆ. ತನಿಖೆಗೆ ಅನುಕೂಲವಾಗಲೆಂದು ನಾನು ರಾಜೀನಾಮೆಯನ್ನು ನಮ್ಮ ನಾಯಕರಾದ ಎಚ್.ಡಿ. ಕುಮಾರಸ್ವಾಮಿಯವರಿಗೆ ಸಲ್ಲಿಸಿ, ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತೇನೆ" ಎಂದು ಐದು ಸಾಲಿನ ರಾಜೀನಾಮೆ ಪತ್ರವನ್ನು ಬಿಡುಗಡೆ ಮಾಡಿ ಚೆನ್ನಿಗಪ್ಪ ಹುತಾತ್ಮನ ವೇಷ ಧರಿಸಿ ವಿಶ್ರಮಿಸಲಿದ್ದಾರೆ.

ಅಲ್ಲಿಗೆ ತಮ್ಮ ನಾಲಿಗೆಯುಳ್ಳ ಬ್ಲೂ ಫಿಲಂ ತೋರಿಸಿ ದಾಖಲೆ ಮಾಡಿದ್ದ ಸಚಿವ ಚೆನ್ನಿಗಪ್ಪ ರಾಜಕೀಯ ನೇಪಥ್ಯ ಸೇರುವುದು ಖಚಿತ.

ಕಾರ್ಪೊರೇಟರ್ ಗಾಯಿತ್ರಿ ರಾಮಚಂದ್ರ

'ಚಿಕ್ಕ'ಪೇಟೆ ಪುರಾಣ!

ಇಡೀ ಬೆಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಸದಸ್ಯರಿಗೆ ಒದಗಿರುವ ಶಾಪವೋ ಅಥವಾ ದೌರ್ಭಾಗ್ಯವೋ ಗೊತ್ತಿಲ್ಲ, ಪಾಲಿಕೆಯ ಬಹುತೇಕ ಮಹಿಳಾ ಸದಸ್ಯರು ನೆಪ ಮಾತ್ರಕ್ಕೆ ಮಾತ್ರ ಇದ್ದಾರೆ. ಅವರ ಪರವಾಗಿ ಸಕಲ ವ್ಯವಹಾರವನ್ನು ನಡೆಸುವುದು ಮಾತ್ರ ಅವರ ಗಂಡಂದಿರೆ. ಈ ಗಂಡಂದಿರ ಲಾಬಿ ಪಾಲಿಕೆಯಲ್ಲಿ ಎಷ್ಟು ಪ್ರಬಲವಾಗಿದೆಯೆಂದರೆ, ಈ ಹಿಂದೆ ಐಎಎಸ್ ಅಧಿಕಾರಿ ಗೋಪಾಲರೆಡ್ಡಿ ಪಾಲಿಕೆ ಆಯುಕ್ತರಾಗಿದ್ದಾಗ, ಅವರನ್ನು ಭೇಟಿ ಮಾಡಿದ "ಗಂಡಂದಿರ ನಿಯೋಗವು" (ಪಕ್ಷಬೇಧ ಮರೆತು) ಪಾಲಿಕೆಯ ಮಹಿಳಾ ಸದಸ್ಯರ ಗಂಡಂದರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಬೇಕು, ಆದರಿಂದ ಪಾಲಿಕೆ ಆದಿವೇಶನ ನಡೆಯುವ ಸಂದರ್ಭದಲ್ಲಿ ನಾವು ನಮ್ಮ ಪತ್ನಿಯರಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಲು ಅನುಕೂಲವಾಗುತ್ತದೆ, ಎಂದು ಮನವಿ ನೀಡಿ ನಗೆಪಾಟಲಿಗೀಡಾಗಿದ್ದರು.




ಗಾಯಿತ್ರಿ ರಾಮಚಂದ್ರ

ಈಗಲೂ ಸಹ ಅದೇ ಪರಿಸ್ಥಿತಿ ಮುಂದುವರಿದಿದೆ. ಕೂರಲು ಗಂಡಂದಿರಿಗೆ ಪ್ರತ್ಯೇಕ ಆಸನವಿಲ್ಲದಿದ್ದರೂ, ಕ್ಷೇತ್ರದ ಅಭಿವೃದ್ಧಿ 'ಇತರೇ ವರಮಾನ', ಪಾಲಿಕೆಯ ಗುತ್ತಿಗೆ, ಮತ್ತೊಂದು ವ್ಯವಹಾರಗಳು ಇರುವುದು ಮಹಿಳಾ ಸದಸ್ಯರ ಗಂಡಂದಿರ ಕೈಯಲ್ಲೇ. ಇದಕ್ಕೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ. 28 ರಿಂದ ಆಯ್ಕೆಯಾಗಿರುವ ಭಾರತೀಯ ಜನತಾ ಪಕ್ಷದ ಸದಸ್ಯೆ ಗಾಯಿತ್ರಿಯ ಪತಿರಾಯ ಜಿ. ರಾಮಚಂದ್ರನೇನು ಹೊರತಾಗಿಲ್ಲ.

ಜಿ. ರಾಮಚಂದ್ರ, ಎರಡು ಬಾರಿ ಇದೇ ಕ್ಷೇತ್ರದಿಂದ ಪಾಲಿಕೆಗೆ ಜನತಾದಳದಿಂದ ಆಯ್ಕೆಯಾಗಿದ್ದವನು. ಕಳೆದ ಪಾಲಿಕೆ ಚುನಾವಣೆಯಲ್ಲಿ ಈ ಕ್ಷೇತ್ರ ಮಹಿಳಾ ಮೀಸಲು ಎಂದು ಘೋಷಣೆಯಾಗುತ್ತಿದ್ದಂತೆ, ಎಂದೂ ಹೊಸಿಲು ದಾಟಿಯೇ ಬಾರದಿದ್ದ ತನ್ನ ಪತ್ನಿಯನ್ನು ಕಣಕ್ಕಿಳಿಸಿಬಿಟ್ಟ. ಇದರೊಂದಿಗೆ ಇವನಿಗೆ ಜೆಡಿಎಸ್ ಟಿಕೆಟ್ ಸಿಗುವುದು ಸಹ ಕಷ್ಟವಾಗಿದ್ದುದರಿಂದ ಶಾಸಕ ಪಿ.ಸಿ. ಮೋಹನ್ ಬಾಲ ಹಿಡಿದು ಭಾರತೀಯ ಜನತಾ ಪಕ್ಷಕ್ಕೆ ಹಾರಿಬಿಟ್ಟ. ಚಿಕ್ಕಪೇಟೆಯಲ್ಲಿ ಮಂದ್ರಿಗಳ್ (ತಮಿಳು ಗೊಲ್ಲರು) ಜಾತಿಗೆ ಸೇರಿದ ಅಧಿಕ ಸಂಖ್ಯೆಯ ಮತದಾರರಿದ್ದಾರೆ. ಈ ಮತಗಳ ಆಸೆಯಿಂದ ಶಾಸಕ ಮೋಹನ್ ರಾಮಚಂದ್ರನನ್ನು ತಮ್ಮ ತೆಕ್ಕೆಗೆ ಸೆಳೆದುಕೊಂಡರು. ರಾಮಚಂದ್ರ ಸಹ ಅದೇ ಮಂದ್ರಿಗಳ್ ಜಾತಿಗೆ ಸೇರಿದವನು. ಹೀಗೆ ಎರಡು ಬಾರಿ ಪಾಲಿಕೆಗೆ ಆಯ್ಕೆಯಾಗಿ ಈಗ ತನ್ನ ಪತ್ನಿಯನ್ನು ಆರಿಸಿ ಕೂರಿಸಿರುವ ಈ ರಾಮಚಂದ್ರನ ಹಿನ್ನೆಲೆ, ಕಾರ್ಯವೈಖರಿ ಮತ್ತು ಸಾಧನೆ ಏನೆಂದು ತಿಳಿಯಿರಿ.

1978 ರಲ್ಲಿ ಕಬ್ಬನ್ ಪೇಟೆಯಿಂದ ತನ್ನ ತಂದೆಯೊಂದಿಗೆ ಚಿಕ್ಕಪೇಟೆಗೆ ಬಂದು ಮನೆ ಮಾಡಿಕೊಂಡ ರಾಮಚಂದ್ರ ಮೂಲತಃ ತಮಿಳ್ನಾಡಿನವನು. ಚಿಕ್ಕಪೇಟೆಯಲ್ಲಿ ಈತ ಆಗ ಮನೆ ಮನೆಗೆ ಹಾಲು ಮಾರುತ್ತಿದ್ದ. ತಮಿಳು ಚಿತ್ರ ನಟ ಎಂಜಿಆರ್ ಅಭಿಮಾನಿಯಾದ ಈತ, ಮೆಜೆಸ್ಟಿಕ್, ಗೀತ, ಶೇಷಾದ್ರಿಪುರಂನ ಕಿನೋ ಮತ್ತು ನಟರಾಜ್ ಥಿಯೇಟರ್‌ಗಳಲ್ಲಿ ಎಂಜಿಆರ್ ಚಿತ್ರಗಳು ರಿಲೀಸ್ ಆದಾಗ ಸ್ಟಾರ್ ಕಟ್ಟುವುದು, ಬ್ಯಾನರ್ ಕಟ್ಟುವುದರಲ್ಲಿ ಎತ್ತಿದ ಕೈ. ಹಾಗೇ ಪ್ರಮೋಶನ್ ಪಡೆದು ಅಂದಿನ ಶಾಸಕ ಲಕ್ಷ್ಮಿಸಾಗರ್‌ರವರ ಅಕ್ಕಪಕ್ಕ ಓಡಾಡಲು ಆರಂಭಿಸಿದ. ಅವರ ಬಳಿಯೂ ಅದೇ ಕೆಲಸ ಮುಂದುವರಿಯಿತು. ಲಕ್ಷ್ಮಿಸಾಗರ್ ಚುನಾವಣೆಗೆ ಪೋಸ್ಟರ್ ಮೆತ್ತುವುದು, ಬ್ಯಾನರ್ ಕಟ್ಟುವುದು, ಆಟೋದಲ್ಲಿ ಮೈಕ್ ಕಟ್ಟಿಕೊಂಡು ಪ್ರಚಾರ ಮಾಡುವುದು ರಾಮಚಂದ್ರನ ಕೆಲಸ.



ರಾಮಚಂದ್ರ

ಹೀಗೆ ಪ್ರಚಾರ ಮಾಡುತ್ತಲೇ ಲಕ್ಷ್ಮಿಸಾಗರ್‌ಗೆ ಹತ್ತಿರವಾದ ರಾಮಚಂದ್ರ ಮಹಾನಗರ ಪಾಲಿಕೆಗೆ ಸ್ಪರ್ಧಿಸಲು ಅಂದಿನ ಜನತಾ ಪಾರ್ಟಿಯಿಂದ ಟಿಕೆಟ್ ಗಿಟ್ಟಿಸಿ ಗೆದ್ದುಬಿಟ್ಟ. ಇವನೇನೊ ಕಡಿದು ಗುಡ್ಡೆ ಹಾಕುತ್ತಾನೆ ಎಂದು ಭಾವಿಸಿದ್ದ ಜನರಿಗೆ ಎರಡೇ ತಿಂಗಳಲ್ಲಿ ಇವನ ವರಸೆ ಗೊತ್ತಾಯಿತು. ಬೆಳಗಾಗೆದ್ದರೆ 'ವಾರ್ಡ್ ಇನ್ಸ್‌ಪೆಕ್ಷನ್' ಎಂದು ತನ್ನ ಶಿಷ್ಯ ಮೂರ್ತಿಯನ್ನು ಸ್ಕೂಟರಿನಲ್ಲಿ ಕೂರಿಸಿಕೊಂಡು ಹೊರಟರೆ ರಾಮಚಂದ್ರ ನಿಲ್ಲುತ್ತಿದುದೇ ಹೊಸದಾಗಿ ಕಟ್ಟುತ್ತಿದ್ದ ಮನೆಗಳ ಮುಂದೆ. ಹೇಳಿಕೇಳಿ ಚಿಕ್ಕಪೇಟೆ ಏರಿಯಾ ಒಂದು ಗೊಂದಲಾಪುರ. ಅದಕ್ಕೆ ಯಾವುದೇ ಪ್ಲಾನಿಂಗು, ವ್ಯವಸ್ಥೆ ಇಲ್ಲ. ಅದಕ್ಕೆ ತಕ್ಕ ಹಾಗೆ ಬಿಲ್ಡಿಂಗ್‌ಗಳು ಸೊಟ್ಟಗೆ, ನೆಟ್ಟಗೆ ಹ್ಯಾಗ್ಯಾಗೋ ಇರುತ್ತವೆ. ಪಾಲಿಕೆಯ ಮಂಜೂರಾದ ನಕ್ಷೆಯ ಪ್ರಕಾರ ಇಲ್ಲಿ ಕಟ್ಟಡ ನಿರ್ಮಿಸಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಇದೆ.

ರಾಮಚಂದ್ರನಿಗೆ ಬೇಕಾಗಿರುವುದೂ ಇದೆ. ಇಂತ ಮನೆ, ಕಾಂಪ್ಲೆಕ್ಸ್‌ಗಳನ್ನು ಹುಡುಕಿ, ಆ ಮಾಲೀಕರುಗ ಹ್ಯಾಟ್-ಬೂಟ್ ಎಂದು ಸ್ವಲ್ಪ ಧಮಕಿ ಹಾಕಿ ಸಾಕು, ದಕ್ಷಿಣೆ ತನ್ನಿಂತಾನೆ ಉದುರುತ್ತದೆ ಎಂಬ ರಾಮಚಂದ್ರನಿಗೆ ಗೊತ್ತಿತ್ತು. ದಿನನಿತ್ಯ ಅವನದು ಇ ಕಸುಬಾಯ್ತು. ಈತ ಮೊದಲು ಬಾರಿ ಪಾಲಿ ಆಯ್ಕೆಯಾದಾಗ ಮಂಜೂರಾದ ನಕ್ಷೆಯನ್ನು ಉಲ್ಲಂ ನಿರ್ಮಿಸುತ್ತಿರುವ ಕಟ್ಟಡಗಳಿಂದ ಒಂದು ಫ್ಲೋ 20 ರಿಂದ 25 ಸಾವಿರ ರೂಪಾಯಿ ದಕ್ಷಿಣೆ ಎಂ ನಿಗದಿಪಡಿಸಿದ. ಆದರೆ ಈಗ ದಕ್ಷಿಣೆ ಒಂದು ಫ್ಲೋರಿಗೆ 1 ರೂಪಾಯಿಗೆ ಏರಿದೆ ಎಂ ನೀವೇ ಊಹಿಸಿ.

ಇಂತಹ ನಕ್ಷೆ ಉಲ್ಲಂಘಿಸಿದ ಕಟ್ಟಡಗಳನ್ನು ಪತ್ತೆಹಚ್ಚಲು ಈ ರಾಮಚಂದ್ರ ಹೋಗುವುದಿಲ್ಲ ಕೆಲಸ ಮಾಡಲು ಹಳೇ ಮೂರ್ತಿ, ಪಾಲಿಕೆಯ ಗ್ಯಾಂ ಮನ್ ಮುನಿರ್ ಅಹಮ ವರ್ಕ್ಸ್ ಇನ್ಸ್‌ಪೆಕ್ಟರ್ ರೆಡ್ಡಿ ಹಾ ತಿರುಬೋಕಿ ಸುರೇಶ ಎಂಬು ರಿದ್ದಾರೆ. ಗ್ಯಾಂಗ್‌ಮನ್ ಮುನಿ ಈ ಹಿಂದೆ ಲೋಕಾಯು ಸಿಕ್ಕಿಬಿದ್ದಿದ್ದ. ಇವನನ್ನು ರಾಜಾ ನಗರ ರಾಮಮಂದಿರ ವಾರ್ಡ್ ವರ್ಗಾವಣೆ ಮಾಡಲಾಗಿ ಆದರೂ ಅಲ್ಲಿಗೆ ಹೋಗದೆ ಗೂಟಕ್ಕೆ ನೇತಾಡುತ್ತಿದ್ದಾನೆ.

ಈ ಮಹಾಮಹನೀಯರೆಲ್ಲಾ ಸೇರಿ ಇತ್ತೀ ಒಂದು ಮಹತ್ಕಾರ್ಯವನ್ನು ಮಾಡಿದ್ದಾರೆ. ಚಿಕ್ಕಪೇ ಪೊಲೀಸ್ ಠಾಣೆಯ ಪಕ್ಕದಲ್ಲಿ ಒಂದು ಕಮರ್ಷಿಯ ಕಾಂಪ್ಲೆಕ್ಸ್ ತಲೆ ಎತ್ತುತ್ತಿದೆ. ಮಂಜೂರಾದ ಪ ಪ್ರಕಾರ ಆ ಕಟ್ಟಡದ ಒಂದು ಮತ್ತು ಎರಡ ಮಹಡಿಯಲ್ಲಿ ಅಂಗಡಿ ಮಳಿಗೆಗಳು ಮತ್ತು ಗ್ರೌಂ ಫ್ಲೋರಿನಲ್ಲಿ ವಾಹನ ಪಾರ್ಕಿಂಗಿಗೆ ಜಾಗವನ್ನು ಮೀ ಲಿಡಬೇಕು. ಆದರೆ ಜಾಗದ ಮಾಲೀಕ ಕೃಷ್ಣ ಶೆಟ್ಟಿಯು ಗ್ರೌಂಡ್ ಫ್ಲೋರಿನಲ್ಲಿ ಸಹ ಆರು ಅಂ

ನನ್ನತ್ರ ಸೀಡಿಲಿರೊ ತರದ ಅಂಗಿನೇ ಇಲ್ಲ ಕಂಡ್ರಿ!

ಥೂತ್ತೇರಿ

ನಮ್ಮ ರಾಷ್ಟ್ರನಾಯಕರೂ ಮಾಜಿ ಪ್ರಧಾನಿಗಳೂ ಆದ ದೇವೇಗೌಡರು ಒಬ್ಬರೇ ತೀರ್ಥಯಾತ್ರೆ ಮಾಡುತ್ತ ಹಾಗೆ ಹೊರನಾಡು, ಕಳಸ, ಕೊಲ್ಲೂರು ಇತ್ಯಾದಿ ಮುಗಿಸಿಕೊಂಡು ಮಂಗಳೂರು ಕಡೆ ಹೋದಾಗ ಅಲ್ಲಿನ ಕಿಡಿಗೇಡಿ ಪತ್ರಕರ್ತರು ಗೌಡರನ್ನು ಶಾನೆ ರೇಗಿಸಿದರಂತಲ್ಲಾ. ಈ ರೇಗಿಸಿದ ಮಾತಿನಲ್ಲಿ ಲೋಕಲ್ ರಾಜಕಾರಣಿಗಳು ಗೌಡರನ್ನು ಆಡಿಕೊಳ್ಳುವ ಅಭಿಪ್ರಾಯಗಳಿದ್ದುದನ್ನು ಪ್ರಶ್ನೆ ಮಾಡಿದಾಗ, ಗೌಡರು ರಾಷ್ಟ್ರನಾಯಕರ ಗತ್ತಿನಲ್ಲಿ "ನಾನು ಮುನಿಸಿಪಾಲಿಟಿ ಲೆವೆಲ್ ರಾಜಕಾರಣಿಗಳಿಗೆ ಉತ್ತರ ಕೊಡುವುದಿಲ್ಲ, ಏನಿದ್ದರೂ ರಾಷ್ಟ್ರಮಟ್ಟದ ನಾಯಕರಿಗೆ ಮಾತ್ರ ಪ್ರತಿಕ್ರಿಯಿಸುತ್ತೇನೆ" ಎಂದರಂತಲ್ಲಾ. ಆಗ ಕಿಡಿಗೇಡಿ ಮಂಗಳೂರು ಪತ್ರಕರ್ತರು "ಈ ಗೌಡರಿಗೆ ಮಂಡೆ ಸಮ ಇಲ್ಲ ಮಾರಾಯ್ರೆ. ರಾಷ್ಟ್ರಮಟ್ಟದ ನಾಯಕರಿಗೆ ಇವರು ಉತ್ತರ ಕೊಡುವುದಾದರೆ ಇವರು ಮುನಿಸಿಪಾಲಿಟಿ ಮಟ್ಟಕ್ಕೆ ಇಳಿದದ್ದು ಯಂತಕ್ಕೆ? ದೊಡ್ಡ ಸ್ಥಾನದಲ್ಲಿ ಕುಳಿತ ಸಣ್ಣ ವ್ಯಕ್ತಿಗಳು ಇತ್ತ ತಮಗೂ ಬೆಲೆ ತಂದುಕೊಳ್ಳುವುದಿಲ್ಲ, ಅತ್ತ ಸ್ಥಾನಕ್ಕೂ ಬೆಲೆ ತರುವುದಿಲ್ಲ. ಅಂತೂ ನಮ್ಮ ಗೌಡರು ಉನ್ನತ ಸ್ಥಾನದಲ್ಲಿದ್ದು ಬಂದ ಸಣ್ಣ ವ್ಯಕ್ತಿಯಾಗಿ ಊರೂರು ಅಲೆಯುತ್ತ, ದೂಳಾರಿಸುತ್ತ, ಮಾಜಿ ಪ್ರಧಾನಿಗಳಿಗಿರಬೇಕಾದ ಮಾನ ಮರ್ಯಾದೆಗಳನ್ನು ಮಂಗಳೂರಿಗೆ ಬಂದು ಹರಾಜು ಹಾಕಿದರಲ್ಲಾ ಯಂತ ಮಾಡುವುದು ಬೊಜ್ಜ" ಎಂದು ಆಡಿಕೊಂಡವಂತಲ್ಲಾ, ಥೂತ್ತೇರಿ!

* * * * * * *

ಕೋಇಜಾ ಸರ್ಕಾರದೊಳಗಿದ್ದು ಥೇಟ್ ಕೋಇಜಾಗಳಂತೆಯೇ ವರ್ತಿಸುತ್ತಿದ್ದ ನಮ್ಮ ಚಿಡ್ಡಿಗಳು ಬಾಬಾ ಬುಡನ್‌ಗಿರಿ ವಿಷಯ ಸಮೀಪಿಸುತ್ತಿದ್ದಂತೆ, ಷಂಡತ್ವದಿಂದ ಮುಕ್ತಿ ಪಡೆದ ಗಂಡಸು ಪ್ರಯೋಗಾರ್ಥ ಪಕ್ಕದ ಮನೆಯವರನ್ನು ಸಹಾಯಕ್ಕೆ ಕರೆದಂತೆ ಭಜರಂಗಿಗಳನ್ನು ಆಶ್ರಯಿಸಿ ಬಾಬಾ ಬುಡನ್‌ಗಿರಿಗೆ ಬೆಂಕಿ ಹಚ್ಚಲು ಹೊರಟಿವೆಯಂತಲ್ಲಾ, ಬಾಬಾಬುಡನ್ ಗಿರಿ ಬೆಂಕಿ ಜ್ವಾಲೆಯಿಂದಲೇ ಗೆದ್ದು ಬಂದು ಶಾಸಕನಾದ ಸಿ.ಟಿ. ರವಿ ಎಂಬ ಸೀಮೆಎಣ್ಣೆ ಗಿರಾಕಿ, "ದತ್ತ ಜಯಂತಿ ಇಲ್ಲವಾದರೆ ನಾನು ಶೇವಣಿ ಕಳೆದುಕೊಂಡು ಮನೆಗೆ ಹೊರಟಂತೆಯೆ, ಯೋಚಿಸಿ ನೋಡಿ" ಎಂದು ಮುಖ್ಯಮಂತ್ರಿಗೆ ಧಮಕಿ ಹಾಕಿದರಂತಲ್ಲಾ, ಆದರೆ ಮುಖ್ಯಮಂತ್ರಿಗಳು ಈಗಾಗಲೇ ಕರಟಕ ದಮನಕರೆಂಬ ಲಕ್ಕಯ್ಯನ ಮಕ್ಕಳಾದ ಬೋಜೇಗೌಡ ಮತ್ತು ಧರ್ಮೇಗೌಡರನ್ನು ಬಗಲಿಗಿರಿಸಿಕೊಂಡು, ಮುಂದೆ ಧರ್ಮೇಗೌಡನನ್ನು ಚಿಕ್ಕಮಗಳೂರಿಗೆ ಸ್ಥಾಪಿಸುವ ಸಂಚಿನಿಂದ ಸಿ.ಟಿ. ರವಿಗೆ ಸೀಮೆಎಣ್ಣೆ ಡಬ್ಬಾ ಗ್ಯಾರಂಟಿ ಎಂಬ ಗುಮಾನಿ ಹಬ್ಬದೆಯಂತಲ್ಲಾ, ಇದರ ಫಲವಾಗಿಯೇ ಎಂ.ಪಿ. ಪ್ರಕಾಶ್ ಮೊದಲ ಬಾರಿಗೆ ಗಂಡಸರಂತೆ ಮಾತನಾಡಿ "ಚಿಕ್ಕಮಗಳೂರಲ್ಲಿ ಶೋಭಾ ಯಾತ್ರೆಯೂ ಇಲ್ಲ, ಬಾಬಾ ಯಾತ್ರೆಯೂ ಇಲ್ಲ, ಹಿಂದಿನಂತೆಯೇ ಮುಂದೆಯೂ ನಡೆಯುತ್ತದೆ" ಎಂದುಬಿಟ್ಟರಂತಲ್ಲಾ, ಇದನ್ನು ಕೇಳಿಸಿಕೊಂಡ ನಮ್ಮ ಚೂರಿನಾಲಿಗೆ ಸುಬ್ಬಯ್ಯ "ಬಾಬಾಬುಡನ್‌ಗಿರಿಯಲ್ಲಿ ಗಡ್ಡದ ಸಾಬರ ನಮಾಜೂ ಕೂಡದು, ಹಾಗೆಯೇ ಚಿಡ್ಡಿಯೊಳಗಿನ ಗಂಟೆ ಶಬ್ದವೂ ಕೂಡದು" ಎಂದು ಗುಟುರು ಹಾಕಿದರಂತಲ್ಲಾ, ಥೂತ್ತೇರಿ!!

* * * * * * *

ಇತ್ತ ನಮ್ಮ ಸಾಹಿತ್ಯ ಕ್ಷೇತ್ರದ ಸುದ್ದಿಗಳು ಶಾನೆ ಮಜವಾಗಿವೆಯಂತಲ್ಲಾ, "ಉತ್ತರ ಕರ್ನಾಟಕದಲ್ಲಿ ಹನಿ ಮಳೆಯಾಗದಿದ್ದರೂ ಮಹಾರಾಷ್ಟ್ರದ ಮಳೆಯ ಪ್ರವಾಹದಿಂದ ಜನ ಕಂಗಾಲಾಗಿ ಕುಳಿತಿದ್ದಾರೆ. ಇದರ ಜೊತೆಗೆ ಈಚೆಗೆ ಚಚ್ಚದ ಅಡ್ಡ ಮಳೆ ಮನೆ ಮಠಗಳನ್ನು ಅಡ್ಡ ಮಲಗಿಸಿದೆ. ಕನ್ನಡಿಗರೆಲ್ಲಾ ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದಾರೆ. ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆ ಹೂವೇಕೆ?" ಎಂಬಂತೆ ಪಾಟೀಲ ಪುಟ್ಟಪ್ಪನವರು ಚಂಪಾ ಗ್ಯಾಂಗಿನ ಸಾಹಿತ್ಯ ಸಮ್ಮೇಳನವನ್ನು ಆಡಿಕೊಂಡರಂತಲ್ಲಾ. ಇದರಿಂದ ಕೆರಳಿಕೆಂಡವಾದ ಚಂಪಾ "ನಾವು ಆರಿಸಿರುವ ಸಮ್ಮೇಳನಾಧ್ಯಕ್ಷರಾದ ನಿಸಾರ್ ಅಹಮದ್‌ರನ್ನು ಜನಾಂಗವೂ ಒಪ್ಪಿಕೊಂಡಿದೆ. ಇದರ ಬಗ್ಗೆ ಅಭಿಪ್ರಾಯವೂ ಹೊರಬಂದಿದೆ. ಚಿಡ್ಡಿಗಳೂ ಮತ ಮಂತ್ರಿಗಳೂ ಚಕಾರವೆತ್ತಿಲ್ಲ. ಇಂತಹ ಸಂದ ಹಾಳಾಗುವ ಮುನ್ನ ಸಮ್ಮೇಳನ ಮಾಡಿ ಮುಗಿಸಬೇ ಎಂದರಂತಲ್ಲಾ. "ಎಪ್ಪತ್ಮೂರನೇ ಸಾಹಿತ್ಯ ಸಮ್ಮೇಳನದ ನೆರೆ ಸಂತ್ರಸ್ತರು ಮತ್ತು ಬರಗಾಲ ಪೀಡಿತರು, ಹ ಗಡಿನಾಡ ಸಮಸ್ಯೆ, ಗಡಿ ಸಮಸ್ಯೆಗಳೆಲ್ಲಾ ಜಾ ಮಾಡಿದಂತೆ ಪರಿಹಾರವಾಗುವುದಾದರೆ ಡಿಸೆಂಬರ್ ಕಾಯುವುದು ಬೇಡ ದಸರಾ ಜೊತೆಯಲ್ಲೇ ನ ಹೋಗಲಿ" ಎಂದು ಮುಗ್ಧ ಕನ್ನಡಿಗರು ಮ ಮ್ಯಾಗಿಯೇ ಒಪ್ಪಿಗೆ ಸೂಚಿಸುತ್ತಿರುವಾಗಲೇ "ಈ ಸಾಹಿತ್ಯ ಸಮ್ಮೇಳನ ಈ ನಾಡಿನ ಸಾಂಸ್ಕೃತಿಕ ಹಬ್ಬ ಬೇಕೆ ಹೊರತು ಕಸಾಪ ಜನರ ತುರ್ತಿನ ಸಭೆಯ ಬಾರದು" ಎಂದು ಚಂಪಾ ಕಂಡರಾಗದ ಚಾಂಡಾ ದೂರುತ್ತಿದ್ದಾರಲ್ಲಾ, ಥೂತ್ತೇರಿ!!



* * * * * * *

ಕಡೆಗೂ ನಮ್ಮ ಚೆನ್ನಿಗಪ್ಪ ವಿವಾಹ ಭೋಜ ಮುಂದೆ ಕುಳಿತ ಘಟೋದ್ಗಜನಂತೆ ಕಂಗೊಳಿಸುತ್ತಿ ಸೀಡಿ, ಫೋಟೋಗಳೆಲ್ಲಾ ಸ್ಫೋಟಗೊಂಡಿವೆಯ ಚೆನ್ನಿಗಪ್ಪನ ಎದುರು ಮೆದೆಯಂತೆ ಹೊಟ್ಟದ ನೊ ಕಂತೆ ವಿಷಯವಾಗಿ ಅವರಿಗೇ ಫೋನ್ ಮಾಡ ಹೇಗೆ; ಸರಿಯಾಗಿ ಉತ್ತರ ಕೊಡದೆ ಸಿಟ್ಟಾದರೆ ಎ ಎಂಬ ಅನುಮಾನದಿಂದಲೇ ಫೋನ್ ಮಾಡ ರಿಂಗಾಯ್ತು, ನಾನು ಬಾಯಿಬಿಡುವುದೇ ತಡವಾ


"ಹಲೋ, ಅದ್ಯಾರು ಮಾತಾಡಿ, ಬೇಗ."

"ಚೆನ್ನಿಗಣ್ಣ ನಾನು ಯಾಹೂ."

"ಓಹೋಹೋ ಪತ್ರಕರ್ತರು. ಅದೇನು ಪತ್ರಕರ್ತರ್ರಿ ನೀವು? ಆ ಬೋ ರೆಡ್ಡಿ ಏನೊ ಕೊಟ್ನ ಅಂತ ಉಪ್ಪು ಹಚ್ಚ ಬರಿತಿರಲ್ಲಾ? ನಿಮಗೂ ಏನಾರ

ಕಟ್ಟಿದ್ದಾನೆ. ರಾಮಚಂದ್ರನ ಅಭಯದ ಮೇರೆಗೆ.

ಇಲ್ಲಿ ಇನ್ನೂ ಒಂದು ಹುನ್ನಾರ ನಡೆದಿದೆ. ಈ ಕಾಂಪ್ಲೆಕ್ಸ್ ಎದುರಿಗೆ ಒಂದು ಜಟಕಾ ಸ್ಟ್ಯಾಂಡ್ ಇದೆ. ಈಗ ಅಲ್ಲಿ ಯಾವ ಜಟಕಾ ಬಂಡಿಯೂ ನಿಲ್ಲುವುದಿಲ್ಲ. ಇದು ಪಾಲಿಕೆಯ ಆಸ್ತಿ. ಇದಕ್ಕೆ ಫೆನ್ಸಿಂಗ್ ಹಾಕಿ ಕಾಪಾಡಿ ಎಂದು ಆಯುಕ್ತ ಜೈರಾಜ್ ಆದೇಶ ನೀಡಿದ್ದರೂ ರಾಮಚಂದ್ರ ಅವಕಾಶ ನೀಡಿಲ್ಲ. ಈ ಜಟಕಾ ಸ್ಟ್ಯಾಂಡ್ ಜಾಗವನ್ನು ಕಾಂಪ್ಲೆಕ್ಸ್ ಖದೀಮ ಕೃಷ್ಣ ಶೆಟ್ಟಿ ಪಾರ್ಕಿಂಗ್‌ಗಾಗಿ ಬಳಸಿಕೊಳ್ಳಲಿ ಎಂಬುದು ರಾಮಚಂದ್ರನ ಉದ್ದೇಶ. ಈ ಪುಟ್ಟ ಸಹಾಯಕ್ಕಾಗಿ



ಲಕ್ಷ್ಮೀಸಾಗರ್

ಎಂ.ಎಸ್. ಸತೀಶ್

ರಾಮಚಂದ್ರನಿಗೆ ಬಂದಿರುವುದು ಕೇವಲ 5 ಲಕ್ಷ ರೂಪಾಯಿ. ಇದು ಹಾಳಾಗಿ ಹೋಗಲಿ ಬಿಡಿ. ಶೆಟ್ಟಿ ತನ್ನ ಜಾಗದಲ್ಲಿ ತಾನು ಕಟ್ಟಿಕೊಂಡಿದ್ದಾನೆ ಎನ್ನಬಹುದು. ಆದರೆ ಆರ್ಕಾಟ್ ಶ್ರೀನಿವಾಸಾಚಾರ್ ಸ್ಟ್ರೀಟ್‌ನ ಓಣೇಶ್ವರ ದೇವಾಲಯದ ಪಕ್ಕದ ರಸ್ತೆಯಲ್ಲಿ 6 ಅಡ್ಡಿ ರಸ್ತೆಯನ್ನೇ ಆಕ್ರಮಿಸಿಕೊಂಡು ನಿಂತಿರುವ ಗೋಪಾಲ ಎಂಬುವನ ಡಬ್ಬಾ ಅಂಗಡಿಯ ವಿಷಯ ವೇನು? ರಾಮಚಂದ್ರನನ್ನು ಯಾರಾದರೂ ಹುಡುಕಿಕೊಂಡು ಹೋದರೆ ಆತನ ಕಾರ್ಪೊರೇಟರ್ ಪತ್ನಿ ಗಾಯಿತ್ರಿ "ಅವನು ಇಲ್ಲೆಲ್ರಿ ಇರ್ತಾನೆ? ಆ ಗೋಪಾಲನ್ ಮನೇಲಿ ಬಿದ್ದಿರ್ತಾನೆ ನೋಡಿ" ಅಂತಾರೆ. ಆದ್ರೆ ಆ ಸಮಯದಲ್ಲಿ ಗೋಪಾಲ ತನ್ನ ಅಂಗಡೀಲಿ ಇರ್ತಾನೆ. ಇದಕ್ಕೂ-ಅದಕ್ಕೂ ಏನಾದರೂ ಸಂಬಂಧ ಇರಬಹುದೆ?

ಕಳೆದ ಆಗಸ್ಟ್ 20 ರಂದು ರಾಮಚಂದ್ರ 300 'ಬಡ' ಜನರಿಗೆ ಸೈಕಲ್ಲು, ಹೊಲಿಗೆ ಯಂತ್ರ ಮತ್ತು ಸೀರೆ ಹಂಚಿ ಭಾರಿ ಕಾರ್ಯಕ್ರಮ ನಡೆಸಿದ. ಸಂಸದ ಅನಂತಕುಮಾರ್ ಪತ್ನಿ ತೇಜಸ್ವಿನಿ ಈ ಸಮಾರಂಭದ ಮುಖ್ಯ ಅತಿಥಿ. ಸೌಲಭ್ಯ ಪಡೆಯಲು ಬಂದಿದ್ದ 'ಬಡ' ಜನರ ಮೈ ಮೇಲಿದ್ದ ಒಡವೆ ಮತ್ತು ಉಟ್ಟಿದ್ದ ರೇಷ್ಮೆ ಸೀರೆಯನ್ನು ನೋಡಿ ಥಂಗು ಬಡಿದು ಹೋದ ತೇಜಸ್ವಿನಿ, "ಇವರೆಲ್ಲಾ ಬಡವರೇನ್ರಿ" ಎಂದು ರಾಮಚಂದ್ರನನ್ನೇ ಕೇಳಿದರಂತೆ. "ಇವರೆಲ್ಲಾ ನಮ್ಮ ಓಟರ್ಸ್ ಮೇಡಂ" ಎಂದು ರಾಮಚಂದ್ರ ಹಲ್ಲು ಕಿರಿದನಂತೆ. ಕಳೆದ ವರ್ಷವೂ ಇಂತಹ ಸಮಾರಂಭ ನಡೆದಿದ್ದು, ಅದೇ ಫಲಾನುಭವಿಗಳು ಈ ಬಾರಿಯೂ "ಫಲ" ಸ್ವೀಕರಿಸಿದರೆಂದು ಚಿಕ್ಕಪೇಟೆಯಲ್ಲಿ ಈಗ ಎದ್ದಿರುವ ಸುದ್ದಿ. ಇನ್ನೊಂದು ವಿಷಯವೇನೆಂದರೆ ಚಿಕ್ಕಪೇಟೆಯ ಅಷ್ಟೂ ವ್ಯಾಪಾರಸ್ಥರಿಂದ ಈ ಕಾರ್ಯಕ್ರಮಕ್ಕೆಂದು ರಾಮಚಂದ್ರ ಸುಲಿದಿದ್ದಾನೆ.

ಎರಡು ಬಾರಿ ತಾನೇ ಪಾಲಿಕೆಗೆ ಆಯ್ಕೆಯಾಗಿ ಈಗ ತನ್ನ ಪತ್ನಿಯ ಮೂಲಕ ಮೂರನೇ ಅವಧಿ ಪೂರೈಸುತ್ತಿರುವ ರಾಮಚಂದ್ರ ಹೆಚ್ಚೇನು ಆಸ್ತಿ ಮಾಡಿಲ್ಲ. ಸಂಪಂಗಿ ರಾಮನಗರದಲ್ಲಿ ತಿಂಗಳಿಗೆ ಒಂದೂವರೆ ಲಕ್ಷ ರೂಪಾಯಿ ಬಾಡಿಗೆ ಬರುವ ಒಂದು ಕಮರ್ಷಿಯಲ್ ಕಾಂಪ್ಲೆಕ್ಸ್, ಮಡಿವಾಳ-ಹೊಸೂರು ರಸ್ತೆಯಲ್ಲಿ ಅಂದಾಜು ನಾಲ್ಕುವರೆ ಕೋಟಿ ರೂಪಾಯಿ ಬೆಲೆಬಾಳುವ ಮತ್ತೊಂದು 'ಚಿಕ್ಕ' ಕಾಂಪ್ಲೆಕ್ಸ್ ಮತ್ತು ಎಲೆಕ್ಟ್ರಾನಿಕ್ ಸಿಟಿ ಸಮೀಪ ಒಂದು ನಾಲ್ಕು ಎಕರೆ ಸರ್ಕಾರಿ ಗೋಮಾಳವನ್ನು ನುಂಗಿರುವುದು ರಾಮಚಂದ್ರನ ಸಾಧನೆ. ಇಷ್ಟೆಲ್ಲ ಸಾಧನೆ ಮಾಡಿದ ಮೇಲೆ ಪಿ.ಸಿ. ಮೋಹನ್‌ನನ್ನು ಗೆಲ್ಲಿಸಿದ್ದೇ ನಾನು ಎಂದು ರಾಮಚಂದ್ರ ಹೇಳಿಕೊಂಡು ಓಡಾಡುತ್ತಿರುವುದರಲ್ಲಿ ಆಶ್ಚರ್ಯವಿಲ್ಲ. ●


ಪಿ.ಸಿ.ಮೋಹನ್

ಕೊಟ್ಟಿದ್ದನೇನ್ರಿ ಅವುನು?"

"ನಾವಿನ್ನೂ ಕೇಳಿಲ್ಲ ಕಣಣ್ಣ"

"ಮದ್ಲು ಕೇಳೀಸಗಳ್ರೀ. ಆದ್ರೆ ಈಸಗಳೊ ಮುನ್ನ ಉಷಾರಾಗಿರಿ, ಆ ಮುಂಡೆಮಗ ಏನು ಮಾಡ್ತನೆ ಗೊತ್ತ?"

"ಏನು ಮಾಡ್ತನಣ್ಣ?"

"ಕರದು ರಾಜಮರಿಯಾದೆ ಮಾಡ್ತನೆ. ಒಂದೆರಡು ಪೆಗ್ ಹಾಕುಸ್ತನೆ. ಅಂಗೇ ಮಾತಾಡುಸ್ತ, ಮಾತಾಡುಸ್ತ ದುಡ್ಡ ತಗದು ಟೇಬಲ್ ಮೇಲಿಡತನೆ. ಎಣಿಸಿಗಳಿ ಅಂತ ಒತ್ತಾಯ ಮಾಡ್ತನೆ. ನೀವೇನಾರ ಎಣಿಸಿಗಳ ಕ್ಯೋದ್ರೋ, ಆಗಲೆ ತರದು ಸಿಗಾಯ್ಕಳದು!"

"ಅದ್ಯಾಕಣ್ಣ?"

"ಕ್ಯಾಮರ ಮಡಗಿರತನೆ ಕಂಡ್ರೀ! ಕಳ್ಳ ಕ್ಯಾಮರ! ಅದ ಎಲ್ಲಿ ಮಡಗ್ಯವುನೆ ಅಂತ ಗೊತ್ತಾಗದಿಲ್ಲ."

"ಅಂತ ಕ್ಯಾಮರನಾ?"

"ಊ ಕಂಡ್ರಿ. ಅದು ಅವನ ಪೆನ್ನಿನ ಕ್ಯಾಪಲ್ಲಿರಬವುದು, ಅಂಗಿ ಗುಂಡಿಲಿರಬವುದು, ಅಥವಾ ಬಾಗಲ ಕರಟನ್ನಲ್ಲಿರಬವುದು. ಎಲ್ಲಿ ಮಡಗ್ಯವುನೆ ಅಂತ ಹೇಳಕ್ಕೆ ಬರದಿಲ್ಲ ಅಂತ ಹಕನಾತಿ ನನ್ನ ಮಗ ಅವುನು."

"ನಿಜವೇನಣ್ಣ?"

"ನಿಜ ಅಂತ ಕೇಳ್ತಿರಲ್ರೀ? ಈಗ ನ್ಯಡಿತಾಯಿರದು ನಿಮ್ಮ ಕಣ್ಣಿಗೆ ಕಾಣದಿಲವೆ?"

"ಆ ತರ ನಾನು ಸಿಕ್ಕಿಬಿದ್ರೂ ನಮ್ಮ ಸಂಪಾದಕರು ನನ್ನನ್ನು ಕೆಲಸದಿಂದ ತಗಿಯಲ್ಲ ಕಣಣ್ಣ"

"ಅಂಗಿರಬೇಕು ಕಂಡ್ರಿ. ನೋಡ್ರಿ, ಇವತ್ತು ನಮ್ಮ ಕುಮಾರಣ್ಣ ನನ್ನ ಕೈ ಬುಟ್ಟಿಲ್ಲ, ನಮ್ಮ ದೇವೇಗೌಡ್ರು ನನ್ನ ಕೈ ಬುಟ್ಟಿಲ್ಲ, ಈ ರೆಡ್ಡಿ ನನ್ನ ಮಗನ ಸೀಡಿ ನೋಡಿ ಕುಮಾರಣ್ಣ ನನ್ನ ಕೈ ಬುಟ್ಟದ್ರೆ ಗತಿಯೇನ್ರಿ?"

"ಹೌದು ಕಣಣ್ಣ, ಅದನ್ನ ನಾವು ಊಹೆ ಮಾಡಿ ಕಳಕಾಗದಿಲ್ಲ, ಕೂಡ್ಲೆ ನೀವು ತಿರುಗಿಬಿದ್ದು ಈ ಅಪ್ಪ, ಮಕ್ಕಳ ದುರಾಸೆಗೆ ನಾಡು ಬಲಿಯಾದೆ, ಈ ಮುಂಡೆ ಮಕ್ಳು ಆಸ್ತಿ ಹಣ ಮಾಡಿಕಂಡ್ರು, ನಾಡು ಬೀದಿಗೆ ಬಿದ್ದೆ ಅಂತ ಬೈಕಂಡು ತಿರಗಾಡದ ನಾವು ನೋಡಕ್ಯಾಯ್ತು ಇಲ್ಲ, ಅಲಬೇಣ್ಣ?"

"ಥೂ, ಅದಲ್ಲ ಕಂಡ್ರಿ. ಕುಮಾರಣ್ಣ ಕೈ ಬಿಟ್ರೆ ನಾನು ರಾಜೀನಾಮೆ ಕೊಡಬೇಕಾಯ್ತದೆ. ರಾಜೀನಾಮೆ ಕೊಟ್ಟೇಟಿಗೆ ನಾನು ಕಳ್ಳಾಯ್ತಿನಿ. ಕೊಡದೆಯಿದ್ರೆ ಯಂಗೊ ದಬಾಯಿಸಿಗಂಡು ಕಾಲ ಮಾಡಬವುದೂ."

"ಆದ್ರು ಸೀಡಿ ಚಿತ್ರದಲ್ಲಿರೋನು ನಿಮ್ಮಂಗೆ ಕಂಡನಲ್ಲಣ್ಣ?"

"ಥೂ, ಆ ತರ ಅಂಗಿನೆಯಿಲ್ಲ ಕಂಡ್ರಿ ನನ್ನತ್ರ"

"ಅಂಗಿ ಹಾಳುಬಿದ್ದೊಗ್ಲಿ. ಆ ಅಂಗಿ ಇಕ್ಕಿರೊ ವ್ಯಕ್ತಿ ಒಂಥರಾ ಉಂಡು ಕುಂತಿರಂಗೆ ಕಾಣ್ತನೆ. ಹಾವಭಾವ ನಿಮ್ಮ ತರನೆ ಇದೆ."

"ಲೇ ಯಾವ್ರೂ, ಇವತ್ತು ಟೆಕ್ನಾಲಜಿಲಿ ಏನೇನು ಬದ್ಲಾವಣೆ ಆಗ್ಯದೆ ಗೊತ್ತೇ? ಬರಿ ನಿಮ್ಮ ತಲೆಯಿರೊ ಫೋಟೋ ಸಿಕ್ಕಿದ್ರೆ ಸಾಕು, ಒಳ್ಳೆ ಬ್ಲೂಫಿಲಂ ತಗದು ಮಾರ್ಕೆಟಿಗೆ ಬುಡಬವುದು."

"ಅಂಗಂತಿಯೇನಣ್ಣ?"

"ಅನ್ನದೇನು? ಇವತ್ತು ನ್ಯಡಿತಾಯಿರದೇ ಅದು. ಈಗ ನನಿಗೂ ನಿನಿಗೂ ಆಗಲ್ಲ ಅಂತ ಇಟ್ಗೊ. ನಿನ್ನ ತಲೆಯಿರೋ ಫೋಟೋ ನನಗೆ ಸಿಕ್ಕಿದ್ರೆ ಸಾಕು, ಇನ್ಯಾವನಿಗೊ ಅಂಟಿಸಿ ಇನ್ಯಾವುದೊ ಹೆಂಗಸಿನ ಜೊತೆಯಿರಂಗೆ ಸೀಡಿ ತಗದು ಮಾರ್ಕೆಟಿಗೆ ಬುಡ್ತಾ? ಆಗ ನಿನ್ನ ಮರಿಯಾದಿ ಏನಾಯ್ತದೆ?"

"ಬ್ಯಾಡ ಕಣಣ್ಣ ನಿನ್ನ ದಮ್ಮಯ್ಯಾ ಅಂತಿನಿ. ಬೇಕಿದ್ರೆ ಆ ಕುಮಾರಣ್ಣ, ದ್ಯಾವೇಗೌಡ್ರು ನಿನ್ನನ್ನೇನಾರ ಸಂಪುಟದಿಂದ ತಗದಾಕಿದ್ರೆ ಅಂಗೆ ಮಾಡು."

"(ನಗು) ಅಲ್ಲಾ ಕಂಡ್ರಿ, ದ್ಯಾವೇಗೌಡ್ರ ಬ್ಲೂಫಿಲಂ ತಗಿಯಕ್ಕಾದತೇನ್ರಿ? ಜನ ಒಪ್ತತರೇನ್ರಿ?"

"ನಿಜ ಕಣಣ್ಣ, ಇವತ್ತು ನಿನ್ನ ವಿಷಯದ ಸೀಡಿನ ಜನ ಹೇಗೆ ಒಪ್ತಾಯಿಲವ್ರೊ, ಅಂಗಾಯ್ತದೆ!"

"ಮತ್ತೆ? ಆ ರೆಡ್ಡಿ ಮಾತು, ಸೀಡಿನೆಲ್ಲ ಒಪ್ಪಬೇಡಿ. ಆ ಮುಂಡೆ ಮಗ ಎಲ್.ಕೆ.ಜಿ. ಹುಡುಗಿದ್ದಂಗೆ."

"ಎಲ್.ಕೆ.ಜಿ. ಹುಡುಗ್ರು ನಿಜಹೇಳ್ತವಲ್ಲಣ್ಣಾ?"

"ಅಂಗಂತಿಯಾ?"

"ಥೂತ್ತೇರಿ!!!"

-ಯಾಹೂ

ಲಕ್ಷ್ಮಣ ಹಾವನೂರ್ ಅಸ್ತಂಗತ

"ಊರು, ಉಪಕಾರ ಅರಿಯದು, ಹೆಣ ಸಿಂಗಾರ ಅರಿಯದು" ಎಂಬ ನಾಣ್ನುಡಿಯನ್ನು ನೆನಪಿಸುತ್ತಲೇ ಪ್ರೊ. ಎಲ್.ಜಿ. ಹಾವನೂರರು ತಮ್ಮ ಜೀವನಯಾತ್ರೆಯನ್ನು ಮುಕ್ತಾಯಗೊಳಿಸಿದ್ದಾರೆ.

ಅಗಾಧವಾದ ಕಾನೂನು ಪಾಂಡಿತ್ಯ ಸಾಮಾಜಿಕ ನ್ಯಾಯದ ಸಮಗ್ರ ಗ್ರಹಿಕೆ ಹಾಗೂ ಗಾಢವಾದ ಸೈದ್ಧಾಂತಿಕ ತಿಳುವಳಿಕೆಯಿಂದಾಗಿಯೇ 1970 ರ ದಶಕದ ಕರ್ನಾಟಕದಲ್ಲಿ ತಮ್ಮ ವಿಚಾರಧಾರೆಯನ್ನು ಸಾಕಾರಗೊಳಿಸುವ 'ಹಾವನೂರ್ ವರದಿ'ಯ ಕಾಣ್ಕೆಯನ್ನಿತ್ತು ಕಣ್ಮರೆಯಾದ ಲಕ್ಮಣ್ ಜಿ. ಹಾವನೂರರ ಸಾವು ರಾಜ್ಯದ ಹಿಂದುಳಿದ ವರ್ಗಗಳ ಮುಂಚೂಣಿ ನಾಯಕಗಣಕ್ಕೆ ನಿರೀಕ್ಷಿತ ತಲ್ಲಣವನ್ನುಂಟು ಮಾಡಲೇ ಇಲ್ಲ! ನಮ್ಮ ಸುದ್ದಿ ಮಾಧ್ಯಮಗಳೋ, ಯಥಾಪ್ರಕಾರ 'ದೊರೆ'ಯ ಗ್ರಾಮೀಣ ಗಿಮಿಕ್ಕು ಮತ್ತು ಸಿಡಿ ಬಾಂಬ್ ರೋಮಾಂಚನದಲ್ಲಿ ಮೈಮರೆತಿದ್ದರಿಂದಲೋ ಏನೋ ಹಾವನೂರ್ ನಿರ್ಗಮನವನ್ನು ಸಿಂಗಲ್ ಕಾಲಂಗೆ ಸೀಮಿತಗೊಳಿಸಿ ತಮ್ಮ ಇತಿಹಾಸ ಪ್ರಜ್ಞೆಯನ್ನು ಮೆರೆದವು....

ಕರ್ನಾಟಕದ ವೃತ್ತಿ ರಾಜಕಾರಣಕ್ಕೆ ವೈಚಾರಿಕತೆಯ ಸ್ಪರ್ಶ ನೀಡಿದ ಹಾವನೂರರನ್ನು ಉತ್ತರ ಕರ್ನಾಟಕದ ರಾಣೆಬೆನ್ನೂರಿನ ಒಬ್ಬ ಯಕಃಶ್ಚಿತ್ ಲಾಯರ್ ಎಂಬ ಅನಾಮಿಕತೆಯಿಂದ ರಾಜ್ಯದ ಸಾರ್ವಜನಿಕ ಬದುಕಿನಲ್ಲಿ ಇತಿಹಾಸ ನಿರ್ಮಿಸಬಲ್ಲ ಮೇಧಾವಿ ಎಂಬ ಅತ್ಯುನ್ನತ ಪಟ್ಟಕ್ಕೇರಿಸಿದ ಕೀರ್ತಿ ಅಂದಿನ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಎಂಬ ಮುತ್ಸದ್ದಿ ನಾಯಕರದ್ದು.

ಅರಸು ಚಾಲನೆ ನೀಡಿದ ಪ್ರಗತಿಪರ, ಪರಿವರ್ತನಶೀಲ ರಾಜಕೀಯಕ್ಕೆ ನಿರ್ಣಾಯಕ ತಿರುವು ನೀಡಿದ್ದೇ ಎರಡನೇ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಹಾವನೂರರು ರಚಿಸಿದ ಮೂರು ಸಂಪುಟಗಳ ಅಧ್ಯಯನ ವರದಿ! ಸಂವಿಧಾನದ 15(4) ಮತ್ತು 16(4) ಪರಿಚ್ಛೇದಗಳನುಸಾರ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸುವ, ಅಂತಹ ಜಾತಿ, ಜನಾಂಗ ಮತ್ತು ಪಂಗಡಗಳಿಗೆ ವಿದ್ಯೆ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವ ಅತ್ಯಂತ ತರ್ಕಬದ್ಧಾದ ಸೂತ್ರವನ್ನು ರೂಪಿಸಿದ್ದ ಈ ವರದಿಯನ್ನು ಹಿಂದುಳಿದವರ 'ಬೈಬಲ್' ಎಂದು ಬಣ್ಣಿಸಲಾಗಿತ್ತು.

ರಾಜ್ಯದ ಬಲಿಷ್ಠ ಕೋಮುಗಳಾದ ಲಿಂಗಾಯತರು ಹಾಗು ಒಕ್ಕಲಿಗರ ಪೈಕಿ ಲಿಂಗಾಯತರನ್ನು ಹೊರಗಿಟ್ಟು ಒಕ್ಕಲಿಗರನ್ನು ಮಾತ್ರ ಬ್ಯಾಕ್‌ವರ್ಡ್ ಕ್ಲಾಸ್ ಪಟ್ಟಿಯಲ್ಲಿ ಸೇರಿಸಿದ ಅಂಶ ಅಂದು ಭಾರೀ ಕೋಲಾಹಲ ಸೃಷ್ಟಿಸಿದ್ದನ್ನು ಹೊರತುಪಡಿಸಿದರೆ ಹಾವನೂರು ವರದಿಯನ್ನಾಧರಿಸಿದ ಸರ್ಕಾರಿ ಆಜ್ಞೆ ಇಡೀ ರಾಷ್ಟ್ರಕ್ಕೆ ಸಾಮಾಜಿಕ ನ್ಯಾಯಾಧಾರಿತ ರಾಜಕಾರಣದ ಅನುಕರಣೀಯ ಮಾದರಿಯಾಗಿಬಿಟ್ಟಿತು.


ಹಾವನೂರರ ಅಧ್ಯಯನಶೀಲತೆ ಹಾಗೂ ನಿಷ್ಠುರ ವ್ಯಕ್ತಿತ್ವಕ್ಕೆ ಸಾಕ್ಷಿಯೆಂಬಂತಿದ್ದ 'ಹಾವನೂರ್ ವರದಿ' ಹೊರಬರುತ್ತಿದ್ದಂತೆಯೇ ದೇವರಾಜ ಅರಸರು ಹಾವನೂರರನ್ನೇ ತಮ್ಮ ಸರ್ಕಾರದಲ್ಲಿ ಕಾನೂನು ಹಾಗು ಸಮಾಜ ಕಲ್ಯಾಣ ಸಚಿವರನ್ನಾಗಿ ನೇಮಿಸುವ ಮೂಲಕ ಅವರ ಅಪ್ರತಿಮ ಕೊಡುಗೆಗೆ ತಕ್ಕ ಪುರಸ್ಕಾರ ನೀಡಿದರು.

ಹೆಚ್ಚುಕಮ್ಮಿ ಅದೇ ಅವಧಿಯಲ್ಲಿ (1977-79) ಕೇಂದ್ರದಲ್ಲಿದ್ದ ಮುರಾರ್ಜಿ ದೇಸಾಯಿ ನೇತೃತ್ವದ ಜನತಾ ಪಾರ್ಟಿ ಸರ್ಕಾರ ರಚಿಸಿದ್ದ ಮಂಡಲ್ ಆಯೋಗ ಅಖಿಲ ಭಾರತ ಮಟ್ಟದಲ್ಲಿ ಭಾರೀ ಸುದ್ದಿ ಮಾಡಿತಾದರೂ ಅದರ ಅಧ್ಯಕ್ಷ ಬಿ.ಪಿ. ಮಂಡಲ್‌ರವರೇ ಬೆಂಗಳೂರಿಗೊಮ್ಮೆ ಆಗಮಿಸಿ ಪೌರಸನ್ಮಾನ ಸ್ವೀಕರಿಸಿದಾಗ ಹಾವನೂರರೇ ತಮ್ಮ ಮಾರ್ಗದರ್ಶಿ ಎಂದು ಸಾರಿದ್ದರು... "ನನ್ನ ವರದಿಯೇನಿದ್ದರೂ ನಿಮ್ಮ ಹಾವನೂರ್ ವರದಿಯ ಅಖಿಲ ಭಾರತ ಆವೃತ್ತಿಯಾಗಲಿದೆಯಷ್ಟೇ" ಎಂದು ಮಂಡಲ್ ಅಂದು ಬಹಿರಂಗವಾಗಿಯೇ ಒಪ್ಪಿಕೊಂಡಿದ್ದರು....

ಹಾವನೂರ್ ವರದಿಯನ್ನಾಧರಿಸಿದ ಮೀಸಲಾತಿಯಿಂದಾಗಿ 1977 ರಿಂದಾರಂಭಿಸಿ ಇಲ್ಲಿನವರೆಗೂ ಹತ್ತಾರು ತಲೆಮಾರಿನ ಯುವಜನತೆ ಉನ್ನತ ಶಿಕ್ಷಣ ಮತ್ತು ಸರಕಾರಿ ಉದ್ಯೋಗಗಳಲ್ಲಿ ಅವಕಾಶ ಪಡೆದುಕೊಂಡು ರಾಜ್ಯದ ಆಡಳಿತರಂಗ ಮತ್ತು ಸಾಮಾಜಿಕ ಬದುಕಿನಲ್ಲಿ ಹಿಂದುಳಿದ ವರ್ಗಗಳದ್ದೂ ಒಂದು ಗಣನೀಯ ಪಾತ್ರವಿರುವುದನ್ನು ದಾಖಲಿಸುವಂತಾಯಿತು... ಲಕ್ಷಾಂತರ ಮಂದಿ ಇಂತಹ ಫಲಾನುಭವಿಗಳ ಪೈಕಿ ಅದೆಷ್ಟು ಜನ ಇಂದು ಹಾವನೂರರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೋ ಎಂಬುದು ಮಾತ್ರ ಸಂದೇಹಾಸ್ಪದವೇ....

1980 ರ ಜನವರಿಯಲ್ಲಿ ಜರುಗಿದ ಲೋಕಸಭಾ ಚುನಾವಣೆಗಳ ನಂತರ ದೇವರಾಜ ಅರಸರ ರಾಜಕೀಯ ಅವಸಾನ ಶುರುವಾಗುತ್ತಿದ್ದಂತೆಯೇ, ಹಾವನೂರರೂ ನೇಪಥ್ಯಕ್ಕೆ ಸರಿದುಬಿಟ್ಟರು... ಅವರು ರೂಪಿಸಿದ್ದ ಹಿಂದುಳಿದ ವರ್ಗಗಳ ರಾಜಕೀಯ ಸೂತ್ರದ ಪ್ರಧಾನ ಫಲಾನುಭವಿಯಾದ ಕಾಂಗ್ರೆಸ್ ಪಕ್ಷವೇ ಹಾವನೂರರನ್ನು ಅಲಕ್ಷಿಸುತ್ತ ಬಂತು.

ರಾಜಕೀಯವಾಗಿ ಅಸ್ಥಿರವಾಗುತ್ತಿದ್ದಂತೆಯೇ ಹಾವನೂರರು 1985-86 ರಲ್ಲಿ ಮತ್ತೊಬ್ಬ ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾವ್ ಹಾಗು ಹೈಕಮಾಂಡ್ ರಾಜಕೀಯದಲ್ಲಿ ಮೂಲೆಗುಂಪಾಗಿದ್ದ ಪ್ರಣಬ್ ಮುಖರ್ಜಿಯವರು ಜತೆಗೂಡಿ ರಚಿಸಿದ್ದ ಸಮಾಜವಾದಿ ಕಾಂಗ್ರೆಸ್ ಎಂಬ ಅಲ್ಪಾಯು ರಾಜಕೀಯ ಪಕ್ಷಕ್ಕೂ ಸೇರಿದ್ದುಂಟು.... ಕ್ರಮೇಣ ಗತ್ಯಂತರವಿಲ್ಲವೆಂಬಂತೆ ಕೋಮುವಾದಿ ಹಣೆಪಟ್ಟಿ ಹೊತ್ತ ಬಿಜೆಪಿಗೂ ಕೆಲಕಾಲ ನಿಷ್ಠೆ ಪ್ರದರ್ಶಿಸಿ ಹೊರಬಂದಿದ್ದರು...' ತೀರ ಇತ್ತೀಚೆಗಷ್ಟೇ ಅಂದರೆ


ಹಾವನೂರ್

ಜೆಡಿಎಸ್‌ನಿಂದ ಸಿದ್ಧರಾಮಯ್ಯ ಉಚ್ಚಾಟನೆಯಾಗುತ್ತಿದ್ದಂತೆಯೇ ಸ್ವತಃ ದೇವೇಗೌಡರೇ ತೆರೆಮರೆಯಲ್ಲಿದ್ದ ಹಾವನೂರರನ್ನು ಕರೆತಂದು ತಮ್ಮ ಪಾರ್ಟಿ ಆಫೀಸಿನಲ್ಲಿ ಸನ್ಮಾನ ಮಾಡಿದ್ದರು!!

ಕುಮಾರ ಪಾರ್ಕ್ (ಈಸ್ಟ್) ಬಡಾವಣೆಯ ಹಳೆಯ ಕಟ್ಟಡವೊಂದರ ಮಹಡಿಯಲ್ಲಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಮತ್ತು ವೀರಪ್ಪ ಮೊಯ್ಲಿಯವರುಗಳ ಜತೆ ಕಾನೂನು ಪ್ರ್ಯಾಕ್ಟೀಸ್ ಮಾಡಿದ ಹಾವನೂರರ ಶಿಷ್ಯರುಗಳಾದ ರವಿವರ್ಮಕುಮಾರ್ ಮತ್ತು ಎಸ್.ಆರ್. ನಾಯಕ್ ಅವರ ನಿರಂತರ ಒಡನಾಡಿಗಳಾಗಿದ್ದರು. ಈ ಪೈಕಿ ನಾಯಕ್‌ರೀಗ ಹೈಕೋರ್ಟ್ ನ್ಯಾಯಾಧೀಶ ಪೀಠವನ್ನಲಂಕರಿಸಿದ್ದಾರೆ, ರವಿ ವರ್ಮ ಕುಮಾರ್ ವಕೀಲವೃತ್ತಿ ಮತ್ತು ಸಮಾಜವಾದಿ ಚಳವಳಿಯಲ್ಲಿ ಸಕ್ರಿಯರಾಗಿದ್ದಾರೆ....

ಅಂದಹಾಗೆ 26 ವರ್ಷಗಳ ಹಿಂದೆ ಅಂದರೆ ಜುಲೈ 1980 ರಲ್ಲಿ ಪಿ. ಲಂಕೇಶರು ಆರಂಭಿಸಿದ 'ಲಂಕೇಶ್ ಪತ್ರಿಕೆ'ಯ ಎರಡನೇ ಸಂಚಿಕೆಯಲ್ಲಿಯೇ ಹಾವನೂರರ ಸಂದರ್ಶನ ಮಾಡುವ ಮೂಲಕವೇ ಈ ವರದಿಗಾರ ಪತ್ರಿಕಾರಂಗಕ್ಕೆ ಪ್ರವೇಶಿಸಿದ್ದು... ಅಂದು ಎಂಎಲ್ಸಿಯಾಗಿದ್ದ ಹಾವನೂರ್ ವಿಧಾನಸೌಧದ ಪಕ್ಕದಲ್ಲಿದ್ದ ಸುದರ್ಶನ ಅತಿಥಿಗೃಹದಲ್ಲಿ ಬಿಡಾರ ಹೂಡಿದ್ದರು.

ತಮ್ಮನ್ನು ಸಂದರ್ಶಿಸಿ ಹೋದ ರಾತ್ರಿಯೇ ಲಂಕೇಶರಿಗೆ ಫೋನ್ ಮಾಡಿ "ನೀವು ಕಳಿಸಿದ ಹುಡುಗ ಜೀನಿಯಸ್ ಅವಾನ್ರಿ ಪ್ರೊಫೆಸರ್" ಎಂದು ಮೆಚ್ಚುಗೆ ಸೂಚಿಸಿದ್ದು... ಲಂಕೇಶ್ ಮೇಷ್ಟ್ರು ಕೂಡ ಅದೇ ವಾಕ್ಯಗಳನ್ನು ತಮ್ಮ ಸಂಪಾದಕೀಯದಲ್ಲಿ ದಾಖಲಿಸಿ ನನ್ನನ್ನು ಹುರಿದುಂಬಿಸಿದ್ದರು!!

-ರೇಶ್ಮೆ

ಅವರು ಗೆದ್ದದ್ದೇಕೆಂದರೆ, ಸೋಲಿಗೆ ತಲೆಬಾಗದೆ ಮುನ್ನುಗ್ಗಿದ್ದು -ಬಿ.ಸಿ. ಫೋರ್ಬ್ಸ್

ಸಾಮಾನ್ಯವಾಗಿ ಲೇಡೀಸು ಆಕ್ಸಿಡೆಂಟ್ ಮಾಡದಿಲ್ಲ ಕಣಕ್ಕ



ಕಾಳಮಾವ ಭೂಮಿ, ಪೈರು, ಮಳೆ ಇತ್ಯಾದಿ ಬಗ್ಗೆ ಗಾಢವಾಗಿ ಯೋಚಿಸುತ್ತ ಕುಳಿತಿದ್ದಾಗ ಚೆನ್ನಿಗಪ್ಪನ ಸೀಡಿ ಸಿಡಿತದ ವಿಷಯ ಕುರಿತು ಹರಟುತ್ತಿದ್ದ ಉಗ್ರಿ,

"ರೆಡ್ಡಿ ತಿರಗ ಒಂದು ಸೀಡಿ ಯಸ್ದವುನಂತೆ ಕಣಮಾವ" ಎಂದ.

"ಅಮಾಸ್ಯಾವತ್ನ?" ಎಂದ ಕಾಳಮಾವ.

"ಅಮಾಸೆ ಬೇಸ್ತಾರಲವೆ?"

"ಅಂಗರಮಾಸೆ ದಿನವೇ ಮಾರ್ನಮಿ ಪಕ್ಸ."

"ಈ ಸತಿ ಬಿಡುಗಡೆ ಮಾಡಿರೊ ರೆಡ್ಡಿ ಸೀಡಿಲಿ ಚೆನ್ನಿಗಪ್ಪ ಹಣ ಗುಡ್ಡೆ ಹಾಯ್ಕಂಡು ಕುಂತವುನೆ ಕಣ ಮಾವ."

"ಮಾರ್ನವಮಿ ಪಕ್ಸದೊತ್ತಿಗೆ ರಾಗಿ ಪೈರು ಮಂಡಿವುದ್ದ ಇರವು. ಈ ಸತಿ ನೋಡಿದ್ರೆ ಮೂರಂಗಲವಲ್ಲಾ ಇವು ಅರ್ತೆ ತಗಂಡು, ಕುಂಟೆ ತಗಂಡು, ಬ್ಯಳದು ತ್ಯನೆ ಬುಡದ್ಯಾವಾಗ? ಅಂತೂ ಇಂಗಾರಿನ ಬಗ್ಗೆ ಬರವಸಿಲ್ಲ ಬುಡು" ಎಂದ ಕಾಳಮಾವ. ಆಗ ಅಸಮಾಧಾನಗೊಂಡ ಉಗ್ರಿ,

"ಈ ಜನಾರ್ಧನ ರೆಡ್ಡಿ ಸರ್ಕಾರದ ಮ್ಯಾಲೆ ಸೀಡಿ ಯಸಿಯದು, ನಾನು ಅದ ಕಾಳಮಾವನಿಗೇಳದು ಒಂದೇ ಆಯ್ತಪ್ಪ" ಎಂದ.

"ಅಲ್ಲಾ ಕಂಡ್ಯ ಸಿಡಿ ಅಂದ್ರೆ ಕಾಳಮಾವನಿಗೆ ಗೊತ್ತಾದತೇನ್ನ? ಸಿಡಿ ಅಂದ್ರೆ ಅವುನು ತಿಳಕಳದೆ ಬ್ಯಾರೆ. ಹಬ್ಬದಲ್ಲಿ ಹರಕೆವೊತ್ತೋರು ಸಿಡಿ ಆಡ್ತರೆ. ಅಮ್ಯಾಲೆ ಹಕ್ಕಿಪಕ್ಷಿ ಕೆಕಗೋರು ಸಿಡಿ ವೊಡ್ಡತರೆ" ಎಂದು ಜುಮ್ಮಿ ಹೇಳುತ್ತಿರುವಾಗ "ಯ್ಯಕ್ ಯ್ಯಕ್" ಎಂದು ಕೆಮ್ಮಿನೊಡನೆ ನಕ್ಕ ಸೀರ,

"ಸಿಡಿ ಅಂದೇಟಗೆ ಗಾಪುಕ್ ಬತ್ತು ಕಂಡ್ಯ ಜುಮ್ಮಿ. ನಾನೊಂದು ಸತಿಯ ನಮ್ಮ ಹಳ್ಳದತ್ರಯಿರೊ ತ್ವಾಟದಲ್ಲಿ ಸಿಡಿವೊಡ್ಡಿದ್ದೆ ಕಂಡ್ಯ" ಎಂದ.

"ಸಿಡಿ ನಾನು ನೋಡಿಲ್ಲ ಯಂಗಿರತದೊ?"

"ಒಂದು ಚಪ್ಪಡಿ ಕಲ್ಲಿಗೆ ಒಂದು ಸಿಡಿಗಡ್ಡಿ ಕೊಟ್ಬು ನಿಲ್ಲಿಸಿರತಿವಿ. ಆ ಕಡ್ಡಿಗೆ ಇನ್ನೊಂದು ಕಡ್ಡಿ ಕೊಟ್ಬು ಅದರ ತುದಿಗೆ ಒಂದೀಟು ಮಾಂಸದ ಚೂರನೊ ಪಕೋಡದ ಚೂರನೊ ಚುಚ್ಚರತಿವಿ. ಆ ತಿಂದಿ ಚೂರಿನಾಸಿಗೆ ಬಂದ ಮಿಕ ಅದ ಕಚ್ಚಿದೇಟಗೆ ಸಿಡಿಗಡ್ಡಿ ಚಪ್ಪಡಿ ಕಲ್ಲನೆ ಅನಾಮತ್ತು ಬೀಳಿಸಿಬುಡ್ತದೆ. ಆಗ ಲಭುಕ್ಕಂತ ಯಾವಾಗ ಒಪ್ಪಡಿ ಕಲ್ಲು ಬೀಳ್ತದೊ; ಮಿಕ ಅದರ ಕ್ಯಳಗೆ ಸಿಗಾಯ್ಕಂಡು ಬುಡ್ತದೆ."

"ಓ ಅಂಗೆ ಅನ್ನು?"

"ಊ ಕಂಡ್ಯ, ನಾನು ಗೌಜಲಕ್ಕಿ ಹಿಡಿಯಕ್ಕೆ ಅಂತ ಸಿಡಿಗಡ್ಡಿ ಒಡ್ಡಿ ಬಂದಿದ್ರೆ ಗೌಜಲಕ್ಕಿ ಬದ್ದಿರಲಿಲ್ಲ, ಸರಿಯಾದ ನಾಗರಾವು ಬದ್ದಿತ್ತು."

"ನಾಗರಾವು ಬದ್ದಿತ್ತೇ?"

"ಊ, ನಾನು ಚಪ್ಪಡಿ ಎತ್ತಿ ನೋಡ್ದಿನಿ. ಬುಸ್ಸಂತ ಯಡೆ ಎತ್ತುತು ಕಣವ್ವ, ನಾನು ಕಾಲಮ್ಯಾಲ್ಯಲ್ಲ ಹುಚ್ಚೆ ಹುಯ್ಕಂಡು ಒಂದೇ ಏಟಗೆ ನ್ಯಗದೆ ಕಂಡ್ಯ" ಎಂದು ಸೀರ ಇದೀಗ ಹಾವು ಕಂಡವನಂತೆ ಕಣ್ಣು ಬಿಟ್ಟಿದ್ದನ್ನು ನೋಡಿ ಜುಮ್ಮಿ ನಕ್ಕಳು.

"ಕಲ್ಲು ಬಿದ್ದೇಟಗೆ ಹಾವು ಸತ್ತಿರಲಿಲವೆ?" ಎಂದ ಉಗ್ರಿ.

ಏ ಹಾವ ಏನು ಅಂತ ತಿಳಕಂಡಿದ್ದಿ ನೀನು, ರಬ್ಬಲಿದ್ದಂಗೆ ಕಂಡ್ಯ ಅದು. ಕಲ್ಲು ಬಿದ್ದೇಟಗೆ ಅಲ್ಲಾಡದಂಗೆ ಅದರ ಕ್ಯಳಗೆ ಇತ್ತು, ತಲೆ ಏನಾರ ಈಚೆಗೆ ಬರಕ್ಕೆ ಅವುಕಾಸ ಸಿಕ್ಕಿದ್ರೆ ವಲ್ಯಾಡಿಕಂಡೆ ಈಚೆಗೆ ಬರೊದೇನೊ. ನಾನು ಅಂತ ದಪ್ಪ ಚಪ್ಪಡಿಯ ಒಡ್ಡಿರಲಿಲ್ಲ ನಂದೆ ತೆಪ್ಪು."

"ಅಂಗರಾವು ಬದಿಕತ್ತು ಅನ್ನು."

"ಊ ಕಂಡ್ಯ, ಬೇಲಿಸಂದಿಗೋಗಿ ಬುಟ್ಟಿತ್ತು, ನನ್ನ ಕೈಲೇನಾರ ಹತಾರ ಇದ್ರೆ ಆಗಲೆ ಮುಗಸತಿದ್ದೆ."

"ನೀನು ಒಂಥರ ಜನಾರ್ಧನ ರೆಡ್ಡಿ ಇದ್ದಂಗೆ ಕಣೊ" ಎಂದ ಉಗ್ರಿ.

"ಯಾಕ್ಲ ಅಂಗಂತಿ?"

"ಅವುನು ಅಂಗೆ ಅಲವೆ. ಸೀಡಿನೇನೊ ತಗದ, ಅದ ಸರಿಯಾಗಿ ತಗದಿದ್ರೆ ಕುಮಾರಸ್ವಾಮಿ, ಚೆನ್ನಿಗಪ್ಪ ಯಲ್ಲ ಎಗರಿಹೊಗರತ್ತಗೆ. ಇವತ್ತು ತೋರಿರೊ ಸೀಡಿಯ ಅವತ್ತು ಪತ್ರಿಕೆಯೋರನ್ಯಲ್ಲ ಕರದಿದ್ನಲ್ಲ ಅವತ್ತೆ ತೋರಿದ್ರೆ ಈಟೊತ್ತಿಗೆ ಸರ್ಕಾರವೆ ಎಗರಿ ಹೋಗಿರದು."

"ಸಿಡಿ ತೋರಿದ್ರೆ ಸರಕಾರ್ಯಾಕ್ಲ ಎಗರ್‍ಬೊದತೂ?"

"ಅಂಗೆ ನೋಡಿದ್ರೆ ಸರ್ಕಾರ ಈಟೊತ್ತಿಗೆ ಹೋಗಬೇಕಿತ್ತು ಕಣೊ. ಟೆಲಿಫೋನಲ್ಲಿ ಅವುರಿವುರು ಮಾತಾಡದ ಹ್ಯಗಡೆ ಕೇಳಿಸಿಗಂಡ ಅನ್ನ ದೂರಿಗೆ ರಾಜೀನಾಮೆ ಕೊಟ್ಟಿದ್ನಪ್ಪ, ಇನ್ನ ನೂರೈವತ್ತು ಕೋಟಿ ಲಂಚದ ಸುದ್ದಿಗೆ ಉಳದರೇನೊ?"

"ಯಗಡೆ ರಾಜೀನಾಮೆ ಬರದಿದ್ದು ನನಿಗೂ ಗೊತ್ತು ಕಂಡ್ಯ. ಆದ್ರೆ ದ್ಯಾವೇಗೌಡನ ಮಗನಿಗೂ ಯಗಡೆಗೂ ಯಾಕ್ಲ ಹೋಲುಸ್ತಿ."

"ಅದು ಸರಿ ಬುಡು, ಇವತ್ತು ನಿಂತಗಂಡು ನೋಡಿದ್ರೆ ಯಗಡೆನೆ ಸರಿ ಅನ್ನಂಗೆ ಕಾಣ್ತದೆ."

"ಮತ್ತಾಗ ಬಾಯಿಗೆ ಬಂದಂಗೆ ಬಯ್ತಿದ್ದೆ."

"ಇದ್ದಾಗ ಬಯ್ಯದು ಇಲ್ದಾಗ ಹೊಗಳದು ಇದ್ಯಾವ ಕಸುಬ್ಲ ನಿಂದು?" ಎಂದಳು ಜುಮ್ಮಿ.

"ಹೊಗಳೊ ಅಂತ ವಿಸಿಯಕೆ ಹೊಗಳಬೇಕಾಯ್ತದೆ, ಬೈಯ್ಯೋ ಅಂತ ವಿಸಿಯಕೆ ಬೈಯಬೇಕಾಯ್ತದೆ, ಈ ದ್ಯಾವೇಗೌಡುನ್ನ ಹ್ಯಗಡೆ ಎಲ್ಲಿ ಅಂದ್ರಲ್ಲಿಟ್ಟಿದ್ದ, ಆಗ ನಾವ್ಯಲ್ಲ ಬೋದೂ. ಇವತ್ತು ನೋಡಿದ್ರೆ ಅವುನೆ ಸರಿ ಅನ್ನಂಗೆ ಕಾಣ್ತದೆ."

"ಆ ಕುಮಾರಸ್ವಾಮಿ ಹರಿಜನರ ಮನಿಗೋಗಿ ಮನಗಿದ್ದ ಯಲ್ಲ ಹೊಗಳದು ಬುಟ್ಬು ಯಾಕ್ಲ ಆದಿಕತ್ತಿರಿ" ಎಂದ ಕಾಳಮಾವ.

"ಆದಿಕಳೊ ಅಂತ ಕ್ಯಲಸವೆಯ ದ್ವಡಪ್ಪ ಅದು" ಎಂದು ವಾಟಿಸ್ಸೆ ಬಂದ.

"ಯಾಕೆ ನಿಮಗೇನು ಗುರುಗುಟ್ಟತೆ?"

"ದ್ವಡಪ್ಪ ಈ ಕ್ಯಾಸ್ಟು ಹೋಗಬೇಕು ಅಂದ್ರೆ, ನೀನು ನಿನ್ನ ಮನೆ ಬೆಡಶೀಟು, ರಗ್ಗು, ಊಟದ ಸಮೇತ ಹೋಗಿ ಹನುಮಯ್ಯನ ಮನೆಲಿ ಮನಗಿದ್ದು ಬಂದ್ರೆ ಹೋಗದಿಲ್ಲ, ಅವುರ ಜೊತೆ ಸೇರಬೇಕು, ಸಮುಂಧ ಮಾಡಬೇಕು, ಗುಡಿವಳಿಕೆ ಸೇರಸಬೇಕು, ಅಂತಿಲಿ ಅನ್ನ ಹಾಕಬೇಕು. ಇನ್ನ ಏನೇನೊ ಅವೆ. ಅವುನ್ಯಲ್ಲ ಮಾಡಬೇಕಾದ್ರೆ ನೀನೇನು ಅನ್ನದ ಮದ್ದು ಯೋಚನೆ ಮಾಡಬೇಕು. ಇದ್ದಕ್ಕಿದ್ದಂಗೆ ನಿನ್ನನ್ನೆ ನೀನು ಗಾಂಧಿಮಾತ್ಮ ಅನ್ನಕಂಡ್ರೆ ನಾವು ಒಪ್ಪಬೇಕಲ್ಲ."

"ಊ ಆದೇಳಪ್ಪ, ಸೀರ ಮಾವ ನಾನು ನೆಹರು ಅನ್ನಕಂಡ್ರೆ ನಗ ಬರದಿಲ್ಲವೆ?" ಎಂದ ಉಗ್ರಿ.



"ನಾನ್ಯಾಕ್ ನೇರು ಆಗನ್ಲ? ನನಿಗೇನು ತಲಿಕೆಟ್ಟಿದ್ದತೆ?" ಎಂದ ಸೀರ.

"ಯಾರಂಗೆ ಯಾರೂ ಇರದು ಬೇಕಾಗಿಲ್ಲ ಚಿಗಪ್ಪ, ಒಬ್ಬರಂಗೆ ಇನ್ನೊಬ್ರು ಯಾಕಿರಬೇಕು, ಇರೊ ಅಗತ್ಯ ಯಿಲ್ಲ, ಪ್ರಾಬ್ಲಮ್ಮು ಅದಲ್ಲ, ಇವತ್ತು ನಮ್ಮಳ್ಳಿ ಏನಾಗ್ಯದೆ ಅಂದ್ರೆ ದಡದ ಕಲ್ಲಳ್ಳಿಲಿ ಕುಮಾರಸ್ವಾಮಿ ಆ ಇವುನು ಮನೆಲಿ ಮನಿಗಿ ಬಂದ, ಆಗ್ನೆ ಅವುನ ಕಂಡ್ರೆ ಅಕ್ಕಪಕ್ಕದೋರ್ಗಿಗೆ ಆಯ್ತಾಯಿಲವಂತೆ."

"ಅದಿರ್ಲಿ ಕಣೊ ವಾಟಿಸ್ಸೆ, ಇಲ್ಲೆ ಒಂದು ಸತಿ ಎಂ.ಪಿ. ಪ್ರಕಾಶ್ ನಮ್ಮ ಗಣೇಸನ ಊರಿಗೆ ಬಂದಿದ್ದ. ಗಣೇಸನೂ ಪ್ರಕಾಶನ ಸುತ್ತಮುತ್ತ ಧಿಮಾಕಿನಲ್ಲಿ ... ಗಾಡಿದ. ಇವುನಿಗೇನಿತ್ತು ಅಂದ್ರೇ, ನಾನು ಮುಂ... ಭಾಳ ಕ್ಲೋಜು ಅನ್ನದ ತೋರಬೇಕಾಗಿತ್ತು ಅದ ಮ... ತೋರಿದ. ಪ್ರಕಾಶ್ ಅತ್ತಗೋದೇಟಗೆ ಆ ಗಣೇ... ಮ್ಯಾಲೆ ಊರೋರ್‍ಯಲ್ಲ ತಿರಿಗಿಬಿದ್ರು. ಅವುನು ಊ... ಬುಟ್ಬು ಪಾಠ ಹೇಳೊ ಮೇಸ್ಟ್ರು ಕ್ಯಲಸ ಹುಡಿಕ್ಯಂಡೊ... ಅತ್ತಗ್" ಎಂದ ಉಗ್ರಿ.

"ಏ ಅಲ್ಲಿಗಂಟ ಯಾಕೋದಿ, ಇಲ್ಲೆ ಎಸ್ಸೆಂ ... ಶಿವರಾಮನ ಮನಿಗೆ ಬಂದಿದ್ದ, ಅವುನು ಬ... ಹೋದಮ್ಯಾಲೆ ಶಿವರಾಮನ ಧಿಮಾಕು ನೊ... ಬೇಕಾಗಿತ್ತು ನೀನು" ಎಂದ ಸೀರ.

"ಊರುಗಳಲ್ಲಿ ವಟ್ಟೆಕಿಚ್ಚು ವಸಿ ಇದ್ದತೆ? ವಿ... ಬ್ಯಾಡಪ್ಪ ಆ ನಿಂಗಪ್ಪನ ಮಗಳಿಗೆ ಸರ್ಕಾರ ಸೈ... ಕೊಡ್ತು, ಅವತ್ತಿಂದಾ ಆ ಹುಡುಗಿ ಕಂಡ್ರೆ ಯ... ಹುಡುಗಿರಿಗೂ ಆಗದಿಲವಂತೆ" ಎಂದಳು ಜುಮ್ಮಿ.

"ಈ ಸೈಕಲ್ ಕೊಡೋ ಸೂಳೆಮಕ್ಕಳು ಅಂಗೆ ... ಬರೀ ದಳದ ಜನ ಹುಡುಕಿ ಕೊಟ್ಟವುರಪ್ಪ, ... ಬಡವುರುದ್ರು ಇವುರಿಗೆ ಕಾಣಲಿಲ್ವೆ? ಅದ್ಕೆ ಅಂಗಾಗಿರದು"

"ಅದೇನಾರ ಆಗ್ಲಿ ಅಂತೂ ಹೆಣಮಕ್ಕಳು ಸೈ... ವಡಿಯಂಗಾದರಲ್ಲ ತಗೊ" ಎಂದ ಸೀರ.

"ಆ ಹುಡುಗಿರು ಬಿದ್ದು ಕೈಕಾಲು ಮುರಕ... ಮಕ ಜಜ್ಜಕಂಡ್ರೆ ಯಾರಾಗರೂ?" ಎಂದಳು ಜು...

"ಯಕ್ಕಾ ಡೋಂಟ್ ವರಿ. ಲೇಡೀಸ್ ಸೈಕ... ವಡಿಯದ್ರುಲ್ಲೇ ಆಗ್ಲಿ, ಬೈಕು, ಕಾರು ಬುಡದ್ರುಲ್ಲೇ ಆಕ್ಸಿಡೆಂಟ್ ಮಾಡಿಕಳದೋಗ್ಲಿ, ಒಂದು ಸಣ್ಣ ಟ... ಕೂಡ ಮಾಡದಿಲ್ಲ ಗೊತ್ತೆ?"

"ನಿಜ ಕಣೊ, ನಾನೂ ಗಮನಿಸಿದ್ದಿನಿ" ಎಂದ ...

"ಯಾಕೇಳು?"

"ಯಾಕಪ್ಪ ಅಂದ್ರೆ ನಾನು ನೋಡಿದಂಗೆ ಈ ಗ... ಸರಿಯ ಬಿದ್ದು ಹಲ್ಲು ಮುರಕಂಡು ನಿಂತಗಳರು..."

"ಯಾಕೆ ಗೊತ್ತೇನೊ ಉಗ್ರಿ, ಲೇಡೀಸು ... ಸೂಕ್ಷ್ಮಲಿರೊ ಜನ. ಅವುರು ರಸ್ತೆಲಿ ನ್ಯಡಿಬೇಕ... ಯಾರಿಗೂ ಟಚ್ ಮಾಡದಂಗೆ ಒ... ಒಯ್ಯಾರದಲ್ಲಿ ನ್ಯಡಿತರೆ" ಎಂದ ವಾ... ಹಾಗೇ ಮಾಡಿ ತೋರಿದ. ಅದನ್ನು ನೊ... ನಗಾಡಿದ ಜುಮ್ಮಿ.

"ಆಹಹ ಯಂಗೆ ನ್ಯಡಿತನೆ ನೋ..." ಎಂದಳು.

"ರಿಯಲಿ ಕಣಕ್ಕ. ಯಾರಾರ ಡಿಕ್ಕಿ ಹ್ವಡ... ಕ್ಯೋದ್ರು ಕೂಡ ಅವುರು ತಪ್ಪಿಸಿಗಂಡು ಹೋಯ... ಅದೇ ಬ್ಯಾಲೆನ್ಸ್ ಅವುರು ವೆಯಿಕಲ್‌ಗೂ ಯ... ಮಾಡದ್ರಿಂದ ಲೇಡಿಸೂ ಸಾಮಾನ್ಯವಾಗಿ ಆಕ್ಸಿಡೆ... ಮಾಡಿಕಳದಿಲ್ಲಾ."


"ಅದೇ ಕುಡುಕ್ರು ಯಲ್ಲಾರಿಗೂ ಡಿಕ್ಕಿ ವಡಿತ... ವೇನ್ನ?"

"ಅದು ಯಾಕೆ ಗೊತ್ತೇನಕ್ಕ? ಡ್ರಿಂಕ್ ಮಾಡಿರೊ... ಸಾಮಾನ್ಯವಾಗಿ ಬ್ರೇಕಿರದಿಲ್ಲ, ಇದ್ರೂ ಅಪ್ಪೈ ಮಾಡಿ... ಲೇಟಾಗಿ ಹಿಡಿತದೆ. ಅಷ್ಟೊತ್ತಿಗೆ ಯಲ್ಲಾ ಆಗಿರತ..." ಎಂದು ವಾಟಿಸ್ಸೆ ಅಭಿನಯ ಪೂರ್ವಕವಾಗಿ ತ... ಹೊರಟಿದ್ದನ್ನು ನೋಡಿ ಕಾಳಮಾವನೂ ತುಟಿಬ...

-ಬಿ. ಚಂದ್ರೇಗ...


Zero Hour

1. 'ಹೆಲ್ಮೆಟ್ ಕಡ್ಡಾಯ!'..... ನಿಮ್ಮ ಅಭಿಪ್ರಾಯ?
   a) ತಲೆಮಾರು ಉಳಿಸಲು ತಲೆ ಮಾರಿಕೊಂಡ ಸರ್ಕಾರದ ಯೋಜನೆ
   b) ಈ ಆದೇಶ ತಲೆ ಇದ್ದವರಿಗೆ ಮಾತ್ರ ಅನ್ವಯವಂತೆ?
   c) ತಲೆತಲಾಂತರದಿಂದಲೂ ಈ ಹೆಲ್ಮೆಟ್ ಸಮಸ್ಯೆ ಇದ್ದದ್ದೇ ಬಿಡು...
   d) ಮುನ್ನಿ ಪುಟ್ಟಿ, ಕ್ವಶ್ಚನ್ನೇ ಅಪೂರ್ಣವಾಗಿದೆಯಲ್ಲ... ಈ ಆದೇಶ ಗೃಹ ಇಲಾಖೆಯದೊ ಅಥವಾ ಕುಟುಂಬ ಕಲ್ಯಾಣ ಇಲಾಖೆಯದೊ ಎಂಬುದನ್ನು ಮೊದಲು ಹೇಳು....
2. ಈ ಚೆನ್ನಿಗಪ್ಪ ಅಲ್ಲೇನು ಮಾಡುತ್ತಿದೆ?



ಮುನ್ನಿ

   a) ನೋಟಿನ ಪೆಂಡಿ ಮಿಸ್ ಆಗಿರ್ಬೇಕು...
   b) ನಿಮ್ಮ ಧಾರವಾಡದ ಕಡೆ ಹಂದಿಗಳು ಕಸದ ತೊಟ್ಟಿಗೆ ಮುತ್ತಿಗೆ ಹಾಕ್ತಾವಲ್ಲ... ಇದೂ ಹಾಗೆ ಅನ್ನೊ....
   c) ಸುಮ್ಮಿರು, ಕಸದಲ್ಲಿ ರಸ ತೆಗೆಯಬಲ್ಲ ಕಲೆಗಾರನಾತ!
   d) ರೆಡ್ಡಿ ಸಿ.ಡಿ. ಹುಡುಕ್ತಿದಾನೆ...
   e) ಜಾಣ ಚೆನ್ನಿಗನಾತ... 150 ಕಸದ ತೊಟ್ಟಿಗಳಲ್ಲಿ 150 ಕೋಟಿ ಬಚ್ಚಿಟ್ಟಿದ್ದಾನೆ
3. 'ಆನ್‌ಲೈನ್' ಎಂದರೇನು?
   a) ಟೋಪಿ ಹಾಕೋ ಲಾಟರಿ...
   b) 'ಬಾಯ್ಸ್ ಆನ್ ಲೈನ್' ಅಂತಾ ಹೇಳಬಹುದು
   c) ಸದಾ ಲೈನ್ ಹೊಡೆಯುತ್ತಲೇ ಇರುವಾತ... ರಿಸಲ್ಟು ಮಾತ್ರ ಜೀರೋ!
   d) ಮುನ್ನಿ, ಧಾರವಾಡ ಕ್ಯಾಂಪಸ್ಸಿನಲ್ಲಿ ನಿಂಗ್ಯಾರೂ ಲೈನ್ ಹೊಡೆಯಲ್ವಾ?
4. ಗೌಡರ ಫ್ಯಾಮಿಲಿಯ ಶಾಖಾಂಬರಿ ಕಂಪನಿ ನಮ್ ಗದಗಿನಲ್ಲಿ ಗಾಳಿ ವಿದ್ಯುತ್ ತಯ್ಯಾರಿಸುತ್ತಂತೆ?
   a) ಆದಿರು ಮುಗೀತು..... ಇನ್ನು ಕರೆಂಟು ಕದಿಯೋ ಕೆಲ್ಸ....
   b) ಶಾಖಾಂಬರಿಗೆ ಶಾಖೋತ್ಪನ್ನ ವಿದ್ಯುತ್ತೇ ಗೊತ್ತಿಲ್ಲ; ಇನ್ನೆಲ್ಲಿಯ ಗಾಳಿ ವಿದ್ಯುತ್ತು?
   c) ಈ ಶಾಖಾಂಬರಿ ಕರ್ನಾಟಕಕ್ಕೆ ಶಾಕ್ ನೀಡಲಿದೆ, ಎಚ್ಚರ!
   d) ಕರೆಂಟೂ ನುಂಗ್ತಾರಲ್ಲಮ್ಮೋ.....
   e) ಮೇಲಿನವೆಲ್ಲವೂ ಸರಿ ಬಿಡು....
5. "ಮುನ್ಸಿಪಾಲ್ಟಿ ಲೀಡರುಗಳಿಗೆಲ್ಲ ನಾನು ಉತ್ತರಿಸೋದಿಲ್ಲ..." ಎಂದು ದೇವೇಗೌಡರು ಹೇಳಿದ್ದಾರೆ. ನೀವೇನಾದ್ರು ಹೇಳಿ.....



   a) ಗೌಡರದು ಬುಶ್, ಬ್ಲೇರ್ ಜೊತೆ ಸಂಘರ್ಷ
   b) ದಳ(ಎಸ್)ನಲ್ಲಿ ಮುನ್ಸಿಪಾಲ್ಟಿ ಮೆಂಬರುಗಳಿಲ್ಲವಾ?
   c) ದಳ(ಎಸ್)ನ ಮುನ್ಸಿಪಾಲ್ಟಿ ಮೆಂಬರುಗಳು ಈ ಸಲ ಎಲೆಕ್ಷನ್ನಿನಲ್ಲಿ ಇಕ್ತಾರೆ ಬಿಡು
   d) ಐ, ಗ್ರಾಮ ಪಂಚಾಯ್ತಿ ಎಲೆಕ್ಷನ್ ಬಗ್ಗೆ ತಲೆ ಕೆಡಿಸಿಕೊಳ್ಳೊ... ಈಗ ಹಿಂಗ್ ಅಂತಿದಾರೆ.

ಉತ್ತರಗಳು:
1.d, 2.b, 3.c, 4.e, 5.d

... ಜನರು ಇನ್ನೇನೋ ಗೆಲ್ಲಬೇಕೆನ್ನುವಾಗ ಪ್ರಯತ್ನವನ್ನು ಕೈ ಬಿಡುತ್ತಾ...

ಸ್ವ-ಮನಸ್ತಾಪ

ಕೇದಿಗೆ ತೆನೆಗಳ ಚಿಕ್ಕ ತೊರೆಯನ್ನೇ ತಂದರು. ಈ ವಿಶ್ವನಾಥ ಹಳ್ಳಿಯ ಜನರ ಪ್ರೀತಿಯನ್ನು ಹೇಗೆ ವರ್ಣಿಸುವುದು. ಎಲ್ಲ ನಾಯಕರ(ಬೇಡರ) ಕುಟುಂಬಗಳು; ಒಂದು ಲಿಂಗಾಯತರ ಮನೆ. ಕರುಣೆ ತೋರಲು, ತಾತ್ಸಾರ ತೋರಲು ಕಾರಣವೇ ಇಲ್ಲದ ನೆಮ್ಮದಿಯ ಹಳ್ಳಿ. ಅಲ್ಲಿ ಕೂತು ನನ್ನತ್ತ ಬರುತ್ತಿದ್ದ ಕೇದಿಗೆ ತೆನೆಗಳನ್ನು ನೋಡಿದೆ. ನಾನು ಕೇದಿಗೆ ಬಗ್ಗೆ ಬರೆದದ್ದನ್ನು ಓದಿದ ಅವರು ನನ್ನ ಸಂತೋಷಕ್ಕಾಗಿ ತಂದಿದ್ದರು. "ಛೆ! ಅದನ್ನು ಹೆಚ್ಚು ಮೂಸಿದರೆ ತಲೆನೋವು ಬರುತ್ತೆ ಕಣ್ರೀ!" ಎಂದು ಕಠೋರವಾಗಿ ಹೇಳಿದ ತೇಜಸ್ವಿಯವರ ಮಾತಿಗೆ ಹಿಂಜರಿದರು. ಕೇದಿಗೆಯ ಚಿಕ್ಕ ಮೆದೆ ಮಾಯವಾಗಿ ಒಂದು ತೆನೆ ಮಾತ್ರ ಉಳಿಯಿತು. ನನಗೆ ತಲೆನೋವು ಬರೋಲ್ಲ, ನಾನು ತಗೊಂಡು ಹೋಗ್ತೇನೆ ಅಂದೆ. ಇವತ್ತಿಗೂ ನನ್ನ ಕಾರು ಕೇದಿಗೆಯ ಸುಗಂಧದಿಂದ ಮುಕ್ತವಾಗಿಲ್ಲ.

ತೇಜಸ್ವಿ ನಿತ್ಯದಂತೆ ದಾರಿಯಲ್ಲಿ ಬೀಡ, ಅಡಿಕೆ ಕೊಳ್ಳಲು ಹೋಗಿ ನಗುತ್ತ ಬಂದರು, ಹೇಳಿದರು:

ಅಂಗಡಿಯವನು ಕೇಳಿದ, "ಆದೇಕೋ ನಿಮಗೂ ಲಂಕೇಶ್‌ಗೂ ಈಚೆಗೆ ಹೆಚ್ಚು ಮನಸ್ತಾಪ ಬೆಳೆದಿದೆಯಂತೆ ಹೌದಾ ಸಾರ್?"


"ನಿಮಗೆ ಹೇಗೆ ಗೊತ್ತಾಯಿತು?" ಅಂದೆ.

"ಗೊತ್ತಾಗುತ್ತೆ ಸಾರ್. ಮುಚ್ಚಿಡೋಕಾಗುತ್ತ?" ಅಂದ.

"ಸರಿ ಈಗೇನು ಮಾಡೋದು?"

"ಹಾಗೆಲ್ಲ ಜಗಳ ಮನಸ್ತಾಪಕ್ಕೆ ಹೋಗಬಾರದು ಸಾರ್. ಒಗ್ಗಟ್ಟಿನಿಂದ ಕೆಲಸ ಮಾಡಬೇಕು..." ಅಂದ.

"ಅಲ್ರೀ, ನನ್ನ ಬಗ್ಗೇನೇ ನನಗೆ ಮನಸ್ತಾಪ ಇದೆ. ಇನ್ನು ಲಂಕೇಶ್ ಬಗ್ಗೆ ಮನಸ್ತಾಪವಿದ್ದರೆ ಆಶ್ಚರ್ಯವೇನು ಅಲ್ವ?" ಅಂದು ಬಂದೆ.




ಇಬ್ಬರೂ ನಗತೊಡಗಿದೆವು.

****

"ಅಲ್ರೀ ಲಂಕೇಶ್, ನನಗೆ ಸ್ವಲ್ಪ ಹಿಂಜರಿಕೆ ಯಾಕೆ ಗೊತ್ತೆ, ರಾಜಕೀಯ ಮಾಡಿಬಿಡಬಹುದು. ನನಗೆ ನೂರಾರು ಜನ ಹುಡುಗರು, ಉತ್ಸಾಹಿಗಳು ಗೊತ್ತು. ರೈತರ ಹುಡುಗರಂತೂ ತುಂಬ ಉತ್ಸಾಹಿಗಳು. ಕರೆದರೆ ಬಂದುಬಿಡ್ತಾರೆ. ಆದರೆ ಮಾರನೆ ದಿನದಿಂದಲೆ, 'ಸಾರ್! ರೈತ ಸಂಘದಲ್ಲಿ ರ‍್ಯಾಲಿನಾದ್ರೂ ಇರ್ತಿತ್ತು, ಇಲ್ಲಿ ಅದೂ ಇಲ್ಲ!' ಅಂತ ಕೂತುಬಿಡ್ತಾರೆ...." ಅಂದರು ತೇಜಸ್ವಿ.

ಮುಂದುವರಿಸಿ, "ನಾವು ಪ್ರಗತಿರಂಗದ ಮೂಲಕ ಗೆದ್ದೇ ಬಿಟ್ವಿ ಅನ್ನಿ, ಅದರಿಂದ ಪತ್ರಿಕೆಗೆ ತೊಂದರೆ, ಸೋತೇಬಿಟ್ರೆ ಅದರಿಂದಲೂ ತೊಂದರೆ..."

"ಹಾಗೇನಿಲ್ಲ, ಎಲ್ಲ ತೊಂದರೆಗಳ ಬಗ್ಗೆ ನಾನು ಯೋಚಿಸಿದ್ದೇನೆ. ಇದು ಪ್ರಯೋಗ. ನಾನಾಗಲಿ, ನೀವಾಗಲಿ, ಪತ್ರಿಕೆಯಾಗಲಿ ಅಮರವಲ್ಲ, ನಮ್ಮ ರಾಜಕೀಯ ಪ್ರಯತ್ನ ಕೂಡ ಪತ್ರಿಕೆಗೆ ಬೇಕು. ನಾವು ಗೆದ್ದರೂ ಸೋತರೂ ಇದನ್ನು ಉಳಿಸೋದು ಜನಕ್ಕೆ ಮತ್ತು ನನಗೆ ಗೊತ್ತು...." ಅಂದೆ.




ಜುಲೈ 10, 1988

ಯಾಕೋ ತಮಾಷೆ ಮಾಡುತ್ತಲೇ ಹೋಗಬೇಕೆನ್ನಿಸಿದೆ. ಜೊತೆಗೆ ಟೆನ್ನಿಸ್ ಸುದ್ದಿ ನೀವು ಓದಿರಬಹುದು. ವಿಂಬಲ್ಡನ್ ಕಾಲ ಇದು. ಕಳೆದ ಹತ್ತು ವರ್ಷದಿಂದ ನನ್ನ ಫೇವರಿಟ್ ಬೋರ್ಗ್; ಆಮೇಲೆ ಬೋರಿಸ್ ಬೆಕರ್. ಹೆಂಗಸರಲ್ಲಿ ಕ್ರಿಸ್, ಈಚೆಗೆ ಸ್ಟೆಫಿಗ್ರಾಫ್. ಬೋರ್ಗ್ ಬಗ್ಗೆ ಓದುತ್ತಿದ್ದರೂ ಆತನ ಆಟವನ್ನು ಟಿವಿಯಲ್ಲಿ ನೋಡಲಾಗಲಿಲ್ಲ; ಆತ ಅತ್ಯುತ್ತಮವಾಗಿ ಆಡುತ್ತಿದ್ದಾಗ ಬೆಂಗಳೂರಿಗೆ ಟಿವಿ ಬಂದಿರಲಿಲ್ಲ; ಆತ ಮೆಕೆನ್ರೋ ಎದುರು ಸೋತಾಗ ಟಿವಿ ಬಂದಿತ್ತು; ನನ್ನ ಹೀರೋ ಸೋಲುವುದನ್ನು ನೋಡಲಾಗದೆ ಕಣ್ಣು ಮುಚ್ಚಿಕೊಂಡೆ. ಅದೆಲ್ಲ ಇರಲಿ.

ಹೆಣ್ಣು ಮಕ್ಕಳ ಟೆನ್ನಿಸ್ ಆಟದ ಬಗ್ಗೆ ತಮಾಷೆ ಮಾಡುವುದುಂಟು. ಹೋದ ವರ್ಷದ ಛಾಂಪಿಯನ್ ಪ್ಯಾಟ್ ಕ್ಯಾಶ್ "ಅದೇನು ಹೆಂಗಸರ ಆಟ, ಜುಜುಬಿ" ಎಂಬಂತೆ ಮಾತಾಡಿದ. ಆದರೆ ಹೆಣ್ಣು ಮಕ್ಕಳು ಕೇವಲ ಹುಡುಗಿಯರಾಗಿಯೇ ಗಮನ ಸೆಳೆಯುವುದುಂಟು. ಹೋದವರ್ಷ ಮೈಗೆ ಅಂಟಿಕೊಂಡ ಬಟ್ಟೆ ತೊಟ್ಟ ಹುಡುಗಿ ಅಂಪೈರ್, ಪ್ರೇಕ್ಷಕರ ಹುಬ್ಬೇರಿಸಿದಳು. ಅವಳ ಅಂಗಸೌಷ್ಠವ ಮೆಚ್ಚುತ್ತಲೇ 'ಹೀಗೆ ಮಾಡಬಾರದು' ಎಂದು ಗೊಣಗಿದರು. ಈ ವರ್ಷ ಪಾಟರ್ ಎಂಬ ಹುಡುಗಿ... ಈಕೆ ಏನು ಮಾಡಿದಳು ಗೊತ್ತೆ, ಅದಕ್ಕಿಂತ ಮುಂಚೆ ಒಂದು ಮಾತು, ಹುಡುಗಿಯರ ಗುಂಪಿನಲ್ಲಿ ತುಂಬ ಚೆನ್ನಾಗಿರುವಾಕೆ ಅರ್ಜೆಂಟೀನಾದ ಗೇಬ್ರಿಯಲ್ ಸಬಟೀನ. ಪಾಟರ್ ಕೂಡ ಚೆನ್ನಾಗಿದ್ದಾಳೆ. ಈ ಪಾಟರ್ ಮ್ಯಾಚ್ ಆಡುವಾಗ ತುಂಬ ಬೆವತು ಹೋಗಿ ಬ್ಲೌಸ್ ಬದಲಿಸಲು ಬಾಲ್‌ಬಾಯ್ಸ್‌ಗೆ ಟವಲು ಹಿಡಿದು ಮರೆಮಾಡಲು ಹೇಳಿದಳು. ಅರೆನಗ್ನ ಸ್ಥಿತಿಯನ್ನು ನೋಡುತ್ತಲೇ ಹುಡುಗರು ಟವಲ್ ಹಿಡಿದರು. ದೊಡ್ಡವರು-ಅಂದರೆ ಅಂಪೈರ್‌ಗಳು, ಪ್ರೇಕ್ಷಕರು, ಪ್ರೇಕ್ಷಕಿಯರು ಕುಪಿತರಾದರು. ಟವಲ್ ಹಿಡಿಯಲು ಹುಡುಗರಿಗೆ ತುಂಬ ಸಂಕೋಚವಾಗುತ್ತೆ, ಕುಮಾರಿ ಪಾಟರ್ ಹೀಗೆ ಮಾಡಬಾರದು ಅಂದರು.

ಗೇಬಿ ಕೂಡ...



ಪತ್ರಕರ್ತರು ಹುಡುಗರನ್ನು ಅವರ ಸಂಕೋಚದ ಬಗ್ಗೆ ಕೇಳಿದರು. ಹದಿನಾಲ್ಕು ವರ್ಷದ ಹುಡುಗ ಹೇಳಿದ: "ಛೆ, ಸಂಕೋಚ ಯಾಕೆ. ಗೇಬಿ ಕೂಡ ಹೀಗೆ ಬಟ್ಟೆ ಬದಲಿಸಿದರೆ ಚೆನ್ನಾಗಿರುತ್ತೆ......." ಗೇಬಿ ಅಂದರೆ ಗೇಬ್ರಿಯಲ್ ಸಬಟೀನಿ..

ಹುಡುಗರಿಗೂ ದೊಡ್ಡವರಿಗೂ ಎಷ್ಟು ವ್ಯತ್ಯಾಸ!

ಮುತ್ತು ಕೊಡುವಾಗ ಕಣ್ಣು ಮುಚ್ಚುವುದೇಕೆ?

ಟಿ.ಎಂ. ಕುಮಾರ, ರಾಮದುರ್ಗ
ಡಿಕೆಶಿ ಸೋನಿಯಾ ಕಾಲಿಗೆ ಎರಗಿದ್ದು ಮುಂದಿನ ಮುಖ್ಯಮಂತ್ರಿ ಕನಸೆ?
* ಇಲ್ಲ, ಬರೀ ಭಟ್ಟಂಗಿ ವರಸೆ.

ಹೇಮಂತ್ ಮೊರಿಗೇರಿ, ಹರಪನಹಳ್ಳಿ
ದೇವೇಗೌಡರು ವೇದಿಕೆಯಲ್ಲಿ ಮಾಡುವ ನಿದ್ದೆಗೂ, ಕುಮಾರಸ್ವಾಮಿ ಹಳ್ಳಿಗರ ಮನೆಯಲ್ಲಿ ಮಾಡುವ ನಿದ್ದೆಗೂ ಏನಾದರೂ ಸಂಬಂಧವಿದೆಯಾ?
* ಅಪ್ಪನದು ನಿಜವಾದ ನಿದ್ದೆ, ಮಗನದ್ದು ಬರೀ ನಾಟಕ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಆಯುಧ ಪೂಜೆಯಂದು ನಿಮ್ಮನ್ನು ಸನ್ಮಾನಿಸಿ, ಯಾವುದಾದರು ಆಯುಧ ಕೊಡಣಾಂತ ಇದ್ದೀನಿ, ಯಾವ ಆಯುಧ ಬೇಕು?
* 'ಲಂಕೇಶ್' ಎಂಬ ಆಯುಧ ಕೊಟ್ಟಿದ್ದೀರಲ್ಲಾ.

ಎಂ. ಶ್ರೀಧರ ಮಿರ್ಜಾನ, ಕುಮಟಾ
ವಾಸ್ತವ್ಯ ಬಡವರ ಮನೆಯಲ್ಲಿ, ಆದರೆ....?
* ಕೊನೆಗೂ ಸೆಟ್ಲಾಗೋದು ಹೈಟೆಕ್ ರೆಸಾರ್ಟ್‌ನಲ್ಲಿ ಅಂತ ಗೊತ್ತಾಯ್ತಲ್ಲಾ.

ಅಮರಯ್ಯಾ, ಶೋರಾಪೂರ
ಅತ್ತೆಯ ಮಗಳು ಮಲ್ಲಿಗೆ ಹೂವಾದರೆ, ಮಾವನ ಮಗಳು?
* ಮಾವಿನ ಹಣ್ಣು.

ಅನಾರ್ಕಲಿಸಲೀಂ ಚಿಣ್ಯ, ಶ್ರೀರಂಗಪಟ್ಟಣ
ಪ್ರಶ್ನೆ ಕಳಿಸಿದ್ರೆ ಅವಮಾನ ಆಗೋ ಉತ್ತರ ಕೊಡ್ತೀರಾ? ಬಳ್ಳಾರಿ ರೆಡ್ಡಿನಾ ಎತ್ತಿ ಕಟ್ತೀನಿ ಜೋಕೆ!
* ಆ ರೆಡ್ಡಿನ ಈಗ ಎತ್ತಿ ಕಟ್ಟಿರೋರು ಯಾರು ಅಂದುಕೊಂಡಿದ್ದೀರಾ?


ಕೆ.ಶ್ರೀನಿವಾಸ್, ಮಂಡ್ಯ
ಕುಮಾರಣ್ಣನ ರಾಜಕೀಯ ಸ್ಟಂಟ್‌ಗಳಿಗೆ ಯಾವುದು ಸ್ಫೂರ್ತಿ?
* ಹೊರಗೆ ಗಾಂಧಿ, ಒಳಗೆ ಭ್ರಾಂತಿ.

ಕವಿತಾ ಮಧುಸೂದನ್, ದಾವಣಗೆರೆ
ರಾಜಕಾರಣಿಗಳನ್ನು ಮಂಪರು ಪರೀಕ್ಷೆಗೊಳಪಡಿಸಿದರೆ ಎಷ್ಟೆಷ್ಟು ಎಲ್ಲೆಲ್ಲಿ 'ಸಗಣಿ' ತಿಂದಿದ್ದಾರೆಂದು ಹೇಳುವರೆ?
* ಮಂಪರು ಪರೀಕ್ಷೆ ಮಾಡೋದು ಮೆದುಳು ಇದ್ದವರಿಗೆ ಕಣ್ರೀ.

ಎಂ. ನಿಸರ್ಗ, ದಾವಣಗೆರೆ
ಸಿಎಂ ಒಂದು ರಾತ್ರಿ ಹಳ್ಳೀಲಿ ಮಲಗೋದ್ರಿಂದ ಹಳ್ಳಿಗಳ ಸಮಸ್ಯೆ ನೀಗುವುದೆ?
* ಇಲ್ಲ, ಸಿಎಂ ಸಮಸ್ಯೆ ಹೆಚ್ಚಾಗಿದ್ದರಿಂದ ರೆಸಾರ್ಟಿಗೆ ಹೋಗಿ ಬಚ್ಚಿಟ್ಟುಕೊಂಡಿದ್ದು.

ಇಂದಿರಾ ಶ್ರೀಧರ್, ದಾವಣಗೆರೆ
ಶೇಖರ್ ಸುಮನ್ ನಡೆಸಿದ ಟಿವಿ ಸಂದರ್ಶನದಲ್ಲಿ ಒಬ್ಬ ಚಿಡ್ಡಿಗಾದರೂ ಸರಿಯಾಗಿ ವಂದೇ ಮಾತರಂ ಹೇಳಿಲಿಕ್ಕೆ ಬರಲಿಲ್ಲವಲ್ಲ?
* ಹೇಳೋದಕ್ಕೂ, ಬಾಯಿ ಬಡಿದುಕೊಳ್ಳೋದಕ್ಕೂ ವ್ಯತ್ಯಾಸ ಇದೆ ಅಂತ ಗೊತ್ತಾಯ್ತಲ್ಲ.

ಆ.ರಾ.ಮಂಜುನಾಥ್, ಗೆದರೆ
ಮದ್ವೆ ಆದೋರ‍್ಗೆ 'ಫಸ್ಟ್ ನೈಟೇ' ಯಾಕೆ? 'ಫಸ್ಟ್ ಡೇ'ನೇ ಯಾಕಿಲ್ಲಾ?
* ಅದು 'ಸೆಕೆಂಡ್ ಡೇ'ಯಿಂದ ಶುರುವಾಗುತ್ತೆ.



ಬಸವರಾಜ್ ಬೆಸ್ತರ್, ಹರಪನಹಳ್ಳಿ
ಚಿಕೂನ್‌ಗುನ್ಯಾ ರೋಗದಿಂದ ಈ ವರ್ಷದ ಜನಸಂಖ್ಯೆ ಏರಿಕೆಯಲ್ಲಿ ಇಳಿಮುಖವಾಗಬಹುದೇ?
* ಒಂದು ಮರಿ ಬೆಸ್ತರ್ ಕಡಿಮೆ ಆಗಬಹುದೇನೋ, ಪರವಾಗಿಲ್ಲ ಬಿಡಿ ಬಸವರಾಜ್.

ಡಿ.ಎಲ್. ಶ್ವೇತಾ, ಹರಪನಹಳ್ಳಿ
ಸ್ತ್ರೀವಾದವೆಂದರೆ?
* ನಾಪತ್ತೆ ಆಗಿರುವ 'ಪಾಂಚಾಲಿ' ಶಾರದೆಗಾಗಿ ಹುಡುಕುತ್ತಿರುವ ಕಬೀರನಿಗೆ ಈ ಪ್ರಶ್ನೆ ಕೇಳಿದರೆ ಹೇಗೆ?

ಡಿ.ಎಲ್. ನಾಗರಾಜ್, ಹರಪನಹಳ್ಳಿ
ಶೋಭಕ್ಕನಿಗೂ ಸೈಕಲ್ ಕೊಟ್ಟಿದ್ದಾರಾ ಯಡಿಯೂರಪ್ಪ?
* ಹೌದೌದು, ಅದಕ್ಕೆ ಯಡ್ಡಿ ಮನೆಯಲ್ಲೇ ಸ್ಟ್ಯಾಂಡ್ ಹಾಕಿಕೊಂಡು ಸೈಕಲ್ ತುಳಿತಿದ್ದಾಳಂತೆ.

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಉಚಿತ ಸೈಕಲ್ ಬಾಲಕಿಯರಿಗಾದರೆ, ಬಾಲಕರಿಗೆ?
* ಸೈಕಲ್ ಸ್ಟ್ಯಾಂಡ್ ಹತ್ತಿರ ಕಾವಲು ಕಾಯೋ ಕಾಯಕ.

ಡಿ.ಎಲ್. ಸುರೇಶ್, ಹರಪನಹಳ್ಳಿ
ನನಗೂ-ನಿನಗೂ, ಅವನಿಗೂ-ಅವಳಿಗೂ 'ಪ್ರೀತಿ' ಎಂಬುದು ಇರದೇ ಹೋಗಿದಿದ್ದರೆ?
* ಹರಪನಹಳ್ಳಿಯ ಡಿ.ಎಲ್. ಫ್ಯಾಮಿಲಿಯಲ್ಲಿ ಸುರೇಶ್, ಚಂದ್ರಿಕಾ, ಶ್ವೇತಾ, ನಾಗರಾಜ್‌ರಿಂದ ಇಷ್ಟೊಂದು ಪ್ರಶ್ನೆ ಬರುತ್ತಿರಲಿಲ್ಲ.

ಅಂಬುಜಾ, ಶೋರಾಪೂರ
ಮುತ್ತು ಕೊಡುವಾಗ ಕಣ್ಣು ಮುಚ್ಚುವುದೇಕೆ?
* 'Close up' ಪ್ರಭಾವ.

ಬಹುಮಾನಿತ ಪ್ರಶ್ನೆ

ಛೀ ತುಂಟಿ!

'ನಾಚಿಕೆ ಪಡಬೇಡ; ಏನು ಬೇಕು, ಅಂತ ಕೇಳು!' ಪತಿ ಆಶ್ವಾಸನೆ ನೀಡದ.

'ನಮ್ಮ ಮದುವೆ ನಿನ್ನೆ ತಾನೆ ಆಗಿದೆ. ಆದ್ದರಿಂದ ಕೇಳೋಕೆ ನಾಚಿಕೆ ಆಗುತ್ತೆ' ಮಡದಿ ನುಡಿದಳು.

'ಪರವಾಗಿಲ್ಲ ಕೇಳು!'

'ನನಗೆ ಮಾವಿನಕಾಯಿ ತಿನ್ನಬೇಕು ಅಂತ ಆಸೆ ಆಗ್ತಿದೆ ಕಣ್ರೀ! ಹೆಣ್ಣು ತನ್ನ ಬಯಕೆಯನ್ನು ಹೊರಗೆಡಹಿದಳು.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಸಮಸ್ಯೆ ಇದ್ದ ಕಡೆಗಳಲೆಲ್ಲಾ ಮಲಗುವ ಮುಖ್ಯಮಂತ್ರಿ ಮಲೆನಾಡಿನಲ್ಲೇಕೆ ಮಲಗುತ್ತಿಲ್ಲ?

ಸೆಪ್ಟೆಂಬರ್ 13ರ ಸಂಚಿಕೆಯ ನಮ್ಮ ಪ್ರಶ್ನೆ: ಹಿರಿ 'AKKA'ನ ಚಾಳಿ ಸಚಿವ-ಶಾಸಕರಿಗೆಲ್ಲ..... ನೀವೇನಂತೀರಾ?

ನಿಮ್ಮ ಉತ್ತರ: ಶಾಸಕರನ್ನು ಬಿಡಿ, ನಮ್ಮ ಮುಖ್ಯಮಂತ್ರಿಗಂತೂ 'ಅಕ್ಕ'ನ ಚಾಳಿಗಿಂತ ಅತ್ತಿಗೆಯ 'ಲೆಕ್ಕ'ದ ಚಾಳಿ ಮುಖ್ಯ ಆಗಿದೆ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಚ್.ಆರ್. ಏಗಣ್ಣ, ತೊಳಲೀಶ್ವಾನಸುಭೋಗನಹಳ್ಳಿ

ನೀನು ಗೆಲ್ಲಲೇಬೇಕಾದರೆ, ಸೋಲುಗಳು ಇಮ್ಮಡಿಯಾಗಲಿ -ಟಾಂ ವಾಟ್ಸನ್

ಅಭಿವೃದ್ಧಿರಂಗದ ಯುವ ಮುಖ್ಯಮಂತ್ರಿಗೆ ಸಿಟ್ಟು ಬಂದಿದೆ... ದಿನಬಟ್ಟು ದಿನಕ್ಕೊಂದರಂತೆ ಸ್ಫೋಟ ಗೊಳ್ಳುತ್ತಿರುವ ಜನಾರ್ಧನ ರೆಡ್ಡಿಯ ಸೀಡಿಗಳಿಂದ ಕಂಗೆಟ್ಟು ಬಹಿರಂಗವಾಗಿಯೇ ಸಿಡಿಮಿಡಿಗೊಳ್ಳುತ್ತಿದ್ದಾರೆ.... ಸಾರ್ವಜನಿಕರ 'ಜನತಾದರ್ಶನ'ದಲ್ಲೂ ರೋಷದಿಂದ ಸ್ಫೋಟಿಸಿದ್ದಾರೆ.

"ಸಾರ್ವಜನಿಕವಾಗಿ ಯಾವುದೇ ವ್ಯವಹಾರಗಳನ್ನು ನಡೆಸೂಬಾರದೆ?" ಎಂದು ಕುಮಾರಣ್ಣ ತಮ್ಮ ಸೋದರರು ಹಾಗು ಅತ್ತಿಗೆಯವರ ಬಿಜಿನೆಸ್ ವ್ಯವಹಾರಗಳನ್ನು ಕುರಿತು ತಮ್ಮ ಶತ್ರುಗಳಾದ ಕಾಂಗ್ರೆಸ್ಸಿಗರ ವಿರುದ್ಧ ನೈತಿಕ(?) ಸವಾಲನ್ನೆಸೆದಿದ್ದಾರೆ...

"ನಮ್ಮ ಕುಟುಂಬದ ಸದಸ್ಯರು ಸಂವಿಧಾನದ ಚೌಕಟ್ಟು ಮೀರಿ, ಅಕ್ರಮವಾಗಿ, ಅಧಿಕಾರ ದುರುಪಯೋಗ ಮಾಡಿಕೊಂಡು ವಂಚಿಸಿ ಆಸ್ತಿ ಮಾಡಿಲ್ಲ... ಜಮೀನು ಲಪಟಾಯಿಸಿಲ್ಲ..." ಎಂದು ಅತ್ಯಂತ 'ಸಂವಿಧಾನಾತ್ಮಕ ವಾಗಿ'ಯೆ ತಮ್ಮ ಫ್ಯಾಮಿಲಿ ವಹಿವಾಟುಗಳನ್ನು ಸಮರ್ಥಿಸಿಕೊಂಡಿದ್ದಾರೆ ನಮ್ಮ ಹೊಸ ತಲೆಮಾರಿನ ಸಿ.ಎಮ್ಮು!

ಇತ್ತೀಚೆಗೆ ತಮ್ಮ VVIP ಪಿತಾಶ್ರೀ ದೇವೇಗೌಡಾಜೀಯವರು ಮಾಡುತ್ತಿರುವಂತೆಯೇ ಸನ್ಮಾನ್ಯ ಕುಮಾರಸ್ವಾಮಿಯವರೂ ಮಾತೆತ್ತಿದರೆ "ನಮ್ಮ ಕುಟುಂಬ", "ನಮ್ಮ ವಂಶ" ಎಂದೇ ಪದೇಪದೇ ಪ್ರಥಮ ವಿಭಕ್ತಿ-ಬಹುವಚನ ಪ್ರಯೋಗ (First person plural) ಬಳಸುವ ದೈನೇಸಿ ಸ್ಥಿತಿಯನ್ನು ಅನಿವಾರ್ಯಗೊಳಿಸಿಕೊಂಡಿದ್ದಾರೆ....

"ನಮ್ಮ ಪಕ್ಷ", "ನಮ್ಮ ಸರ್ಕಾರ" ಅಥವಾ "ನಮ್ಮ ಸಹೋದ್ಯೋಗಿ-ಮಿತ್ರರು" ಎಂಬ ಸಹಜ ಸಂಬಂಧಗಳನ್ನೇ ಕಳೆದುಕೊಂಡಿರುವ ಈ ತಂದೆ-ಮಕ್ಕಳು ತಮಗೆ ಇಷ್ಟೊಂದು ಅಧಿಕಾರ, ಅಂತಸ್ತು ಮತ್ತು ಐಶ್ವರ್ಯಗಳನ್ನು ತಂದುಕೊಟ್ಟಿರುವ ಜಾತ್ಯತೀತ ಜನತಾದಳ ಎಂಬ ರಾಜಕೀಯ ಪಕ್ಷವನ್ನು ಅಧಿಕೃತವಾಗಿಯೇ ಬಲಿಕೊಟ್ಟು ಅದನ್ನೊಂದು ಫ್ಯಾಮಿಲಿ ಪ್ರಾಪರ್ಟಿಯಾಗಿ ಪರಿವರ್ತಿಸಿದ್ದಾರಲ್ಲವೆ?

ಅದಿರಲಿ, ನಾವೀಗ ಪ್ರಸ್ತಾಪಿಸುತ್ತಿರುವುದು ಕುಮಾರಣ್ಣನವರ ಬ್ರದರ್ಸ್ ಅಥವಾ ಸಿಸ್ಟರ್-ಇನ್-ಲಾಗಳ 'ಸಾರ್ವಜನಿಕ' ವ್ಯವಹಾರವನ್ನಲ್ಲ.... ಬಾಲಣ್ಣ ಮತ್ತು 'ಮುನ್ನಾಭಾಯಿ' ಡಾ. ರಮೇಶರ ಜಗತ್ಪ್ರಸಿದ್ಧ ಗಣಿ ವ್ಯಾಪಾರವನ್ನಲ್ಲ...

ಇದು ಸ್ವತಃ ಕುಮಾರಸ್ವಾಮಿ ಮತ್ತು ಅವರ ಧರ್ಮಪತ್ನಿ ಅನಿತಾರವರಷ್ಟೇ ಡೈರೆಕ್ಟರುಗಳಾಗಿರುವ "ಶಾಕಾಂಬರಿ ಎಂಟರ್‌ಪ್ರೈಸಸ್" ಎಂಬ ಕಂಪನಿಯೆ 'ಸಾರ್ವಜನಿಕವಾಗಿ' ಆದರೆ ಅನಗತ್ಯ ಸದ್ದುಗದ್ದಲವಿಲ್ಲದೆಯೇ ತೊಡಗಿಸಿಕೊಂಡಿರುವ ಪವನಶಕ್ತಿ ವಿದ್ಯುತ್ ವಹಿವಾಟಿನ ಚಟುವಟಿಕೆಯ ಸೂಕ್ಷ್ಮ ವೃತ್ತಾಂತ.....

ನಾವೀಗ ಪ್ರಸ್ತಾಪಿಸುತ್ತಿರುವುದು ಕುಮಾರಣ್ಣನವರ ಬ್ರದರ್ಸ್ ಅಥವಾ ಸಿಸ್ಟರ್-ಇನ್-ಲಾಗಳ 'ಸಾರ್ವಜನಿಕ' ವ್ಯವಹಾರವನ್ನಲ್ಲ.... ಬಾಲಣ್ಣ ಮತ್ತು 'ಮುನ್ನಾಭಾಯಿ' ಡಾ. ರಮೇಶರ ಜಗತ್ಪ್ರಸಿದ್ಧ ಗಣಿ ವ್ಯಾಪಾರವನ್ನಲ್ಲ... ಇದು ಸ್ವತಃ ಕುಮಾರಸ್ವಾಮಿ ಮತ್ತು ಅವರ ಧರ್ಮಪತ್ನಿ ಅನಿತಾರವರಷ್ಟೇ ಡೈರೆಕ್ಟರುಗಳಾಗಿರುವ "ಶಾಕಾಂಬರಿ ಎಂಟರ್‌ಪ್ರೈಸಸ್" ಎಂಬ ಕಂಪನಿಯೆ 'ಸಾರ್ವಜನಿಕವಾಗಿ' ಆದರೆ ಅನಗತ್ಯ ಸದ್ದುಗದ್ದಲವಿಲ್ಲದೆಯೇ ತೊಡಗಿಸಿಕೊಂಡಿರುವ ಪವನಶಕ್ತಿ ವಿದ್ಯುತ್ ವಹಿವಾಟಿನ ಚಟುವಟಿಕೆಯ ಸೂಕ್ಷ್ಮ ವೃತ್ತಾಂತ.....



ಗದುಗಿನ ಕಪ್ಪತಗುಡ್ಡದಲ್ಲಿ ಕುಮಾರಣ್ಣ!

'ನೀರನಾರಾಯಣನ ಬೀಡು' ಎಂದೇ ಬಣ್ಣಿಸಲ್ಪಟ್ಟಿರುವ ಗದಗ್ ನಗರ ಇಂದು ಜಿಲ್ಲಾ ಕೇಂದ್ರದ ಪಟ್ಟಕ್ಕೇರಿದೆಯಷ್ಟೇ.... ಗದುಗಿನ ಹೊರವಲಯದ ಗಡಿಯುದ್ದಕ್ಕೂ ಸಾಲುಸಾಲಾಗಿ ಹಬ್ಬಿರುವ ಕಪ್ಪತಗುಡ್ಡ ಎಂಬ ಬೆಟ್ಟಗಳ ಶ್ರೇಣಿಯುದ್ದಕ್ಕೂ ಇಂದು ಕುಮಾರಣ್ಣನ "ಶಾಕಾಂಬರಿ" ಕಂಪನಿಯ ದೈತ್ಯ-ಪಂಖಾಗಳು ತಿರುಗುತ್ತಿವೆ!

ಅಸಲಿಗೆ ಈ ಕಪ್ಪತಗುಡ್ಡ ಬೆಟ್ಟದ ಸಾಲು ಗತಕಾಲದಿಂದ ಪ್ರಸಿದ್ಧವಾಗಿದ್ದೇ ಅದರ ಅಂತರಾಳದಲ್ಲಿ ಅಡಗಿರುವ ಚಿನ್ನ ಹಾಗು ತಾಮ್ರದ ಅದಿರಿನ ನಿಕ್ಷೇಪಗಳಿಂದಾಗಿ... ಹಾಗೆಯೇ ಆ ಗುಡ್ಡಗಳ ಮೇಲುಹೊದಿಕೆಯಂತೆ ದಟ್ಟವಾಗಿ ಹರಡಿಕೊಂಡಿದ್ದ ಅಮೂಲ್ಯ ಔಷಧಿ ಸಸ್ಯ ಸಂಪತ್ತಿನಿಂದಾಗಿ....

ಈಗ್ಗೆ ಹಲವು ವರ್ಷಗಳ ಹಿಂದೆ ಈ ಕಪ್ಪತಗುಡ್ಡದ ಮೇಲಿನ ಬಯಲು ಅರಣ್ಯಕ್ಕೆ ಬೆಂಕಿ ತಗುಲಿ ಬಹುಪಾಲು ಗಿಡಮೂಲಿಕೆಗಳು ನಾಶವಾದಾಗಲೇ ಗದುಗಿನ ಜನಕ್ಕೆ ಇದು ಮಾನವ ನಿರ್ಮಿತ ಅಗ್ನಿ ಅನಾಹುತ ಎಂಬ ಅನುಮಾನ ಕಾಡಿತ್ತು... ಇಂತಹ ಅನುಮಾನಾಸ್ಪದ ವದಂತಿಗಳನ್ನು ದೃಢೀಕರಿಸುವ ರೀತಿಯಲ್ಲೇ ಮುಂದೆ ಅಲ್ಲಿ ಅಸಾಂಪ್ರದಾಯಿಕ ವಿದ್ಯುತ್ ಉತ್ಪಾದನೆ ಹೆಸರಲ್ಲಿ ದೈತ್ಯ ಪವನಯಂತ್ರಗಳು (wind mills) ತಲೆಯೆತ್ತಿದವು...

ಕ್ರಮೇಣ ಕಪ್ಪದಗುಡ್ಡದ ಗರ್ಭದಲ್ಲಿಡಗಿರುವ ಬಂಗಾರದ ಅದಿರಿನ ಸಂಸ್ಕರಣ ಮತ್ತು ಶುದ್ಧೀಕರಣಕ್ಕಾಗಿ ಬಳ್ಳಾರಿಯ ಐರನ್ ಓರ್ ಕುಳ ಬಲ್ದೋಟಾರ್ MSPL ಕಂಪನಿಗೆ ದೀರ್ಘಾವಧಿ ಗುತ್ತಿಗೆ ನೀಡಲಾಯಿತು....

ಪವನಯಂತ್ರಗಳನ್ನು ಸ್ಥಾಪಿಸಿದ ಅಮೆರಿಕಾ ಮೂಲದ ಸುಜ್‌ಲಾನ್ ಕಂಪನಿಯ ವಹಿವಾಟಿನಲ್ಲಿ ಅದು ಹೇಗೋ ಒಳಒಪ್ಪಂದ ಮಾಡಿಕೊಂಡು ಲಾಭದಾಯಕ ಹೊಂದಾಣಿಕೆಯೊಂದಿಗೆ ನುಸುಳಿಬಿಟ್ಟಿತು ಕುಮಾರಣ್ಣನ "ಶಾಕಾಂಬರಿ ಎಂಟರ್‌ಪ್ರೈಸಸ್" ಎಂಬ ಕಂಪನಿ!

SUZLON ಜತೆ 'ಶಾಖಾಂಬರಿ'ಯ ಅ... ಮ್ಯಾರೇಜ್

ಗದುಗಿನ ಕಪ್ಪತಗುಡ್ಡ ಬೆಟ್ಟಗಳ ಸಾಲು ಇಡೀ ಏಷ್ಯಾದಲ್ಲೇ ಪವನಯಂತ್ರಗಳ ಮೂಲಕ ವಿದ್ಯುತ್ ಉತ್ಪಾದನೆಗೆ ಅತ್ಯಂತ ಪ್ರಶಸ್ತವಾದ ಸ್ಥಳವೆಂದು ಅಸಾಂಪ್ರದಾಯಿಕ ವಿದ್ಯುತ್ತಿನ ತಜ್ಞರಿಂದ ಮಾನ್ಯತೆ ಪಡೆದಿತ್ತು...

ಬಹುಶಃ ಇಲ್ಲಿ ವರ್ಷವಿಡೀ ರಭಸದಿಂದ ಬೀಸು... ಬಿರುಗಾಳಿಯಿಂದಾಗಿಯೇ ಗದುಗಿನ ಸುತ್ತಮುತ್ತ ಅಪರೂ... ಕ್ಕಾದರೂ ಮುತ್ತಿಕೊಳ್ಳುವ ಮೋಡಗಳೆಲ್ಲ ಲಾರಿಚಾರ್ಜ್ ಮಾಡಿದಂತೆ ಚದುರಿಹೋಗುತ್ತಿರಬೇಕು... ತತ್ಪರಿಣಾಮವಾಗಿಯೇ ಗದಗು ಶಾಶ್ವತವಾಗಿ ಮಳೆ ಅಭಾವ ಮತ್ತು ಕುಡಿಯುವ ನೀರಿನ ಕೊರತೆಯಿಂದ ತತ್ತರಿಸುವ ಶಾಪಗ್ರಸ್ತ ನಗರವಾಗಿಯೇ ಪ್ರಸಿದ್ಧಿಗೆ ಬಂದಿದೆ!

ಕಪ್ಪತಗುಡ್ಡದ ನಿರಂತರ ಗಾಳಿಯ ಪ್ರತೀತಿಯನ್ನರಿ... ಇಲ್ಲಿ ಸೂಕ್ತ ತಂತ್ರಜ್ಞಾನ ಮತ್ತು ಅಗತ್ಯ ಬಂಡವಾ... ಸಮೇತ ಧಾವಿಸಿ ಬಂತು ಸುಜ್‌ಲಾನ್ ಎಂಬ ಅಮೆರಿಕ... ಕಂಪನಿ. ಇಡೀ ಪ್ರಪಂಚದಲ್ಲಿಯೇ ಅತಿದೊಡ್ಡ ಪವನಶ... ಉತ್ಪಾದಕ ಕಂಪನಿ ಎಂಬ ಹೆಗ್ಗಳಿಕೆಯಿರುವ ಸದರಿ ಬಹುರಾಷ್ಟ್ರೀಯ ಸಂಸ್ಥೆಗೆ ಪರವಾನಗಿ ನೀಡಿದ್ದು 200... ರ ಮೇನಿಂದ 2006 ರ ಫೆಬ್ರವರಿ ಆರಂಭದವರೆಗೂ ಅಸ್ತಿತ್ವದಲ್ಲಿದ್ದ ಧರಂಸಿಂಗ್ ನೇತೃತ್ವದ ಕಾಂಗ್ರೆ-ಜೆಡಿಎಸ್ ಸಮ್ಮಿಶ್ರ ಸರ್ಕಾರ....





ಧರಂಸಿಂಗರ ಸೆಕ್ಯುಲರ್ ರಂಗದ ಸರಕಾರದಿಂದಿಡಿದು ಇವತ್ತಿನ ಕುಮಾರಣ್ಣನ ಅಭಿವೃದ್ಧಿ ರಂಗದ ಸರ್ಕಾರದುದ್ದಕ್ಕೂ ಪಿಡಬ್ಲ್ಯೂಡಿ ಮತ್ತು ಪವರ್‌ಗಳಂತಹ ಹೆವಿವೇಟ್ ಇಲಾಖೆಗಳಿಗೆ ಕ್ಯಾಬಿನೆಟ್ ಸಚಿವನಾಗಿ ನಿರಂತರವಾ... ಮುಂದುವರಿದಿರುವುದು ಹಿರಿಯಣ್ಣ ಎಚ್.ಡಿ. ರೇವಣ್ಣನವರೇ ತಾನೇ....

ಧರ್ಮ ಸರ್ಕಾರ ಪತನಗೊಂಡು ಕುಮಾರ್ ಸರ್ಕಾ... ಬೇರೂರುವ ವರೆಗಿನ ಮಧ್ಯಂತರ ಅವಧಿಯಲ್ಲಿ ಮಾಜಿ ಮಂತ್ರಿ ಎನಿಸಿದ್ದಾಗಲೂ ಅಪ್ಪ-ಅಮ್ಮನೆದುರು ರಚ್ಚೆ ಹಿಡಿದು ರೋಧಿಸಿ ವಿದ್ಯುತ್ ನಿಗಮ (KPCL) ಹಾಗೂ ವಿದ್ಯುತ್ ಮಂಡಲಿಗಳೆರಡಕ್ಕೂ (KPTCL) ತಾನೇ ಚೇರ್ಮನ್ ಎಂದು ನೇಮಿಸಿಕೊಂಡಿದ್ದ ರೇವಣ್ಣ ಪವರ್ ಖಾತೆಯ ಮೇಲಿನ ಹಿಡಿತವನ್ನು ಸಡಿಲಿಸಲೇ ಇಲ್ಲ....

ಅಣ್ಣ ರೇವಣ್ಣನವರ ಭದ್ರಕೋಟೆಯಂತಾದ ಪವರ್ ಖಾತೆಯ ಮೂಲಕವೇ ಈ ಸುಜ್‌ಲಾನ್ ಎಂಬ ಮಲ್ಟಿನ್ಯಾಷನಲ್ ಕಂಪನಿಯು ಕಪ್ಪತಗುಡ್ಡದಲ್ಲಿ ಸ್ಥಾಪಿಸಲು ಹೊರಟ ಪವನ ಯಂತ್ರಗಳ ಉದ್ಯಮದಲ್ಲಿ ಕುಮಾರಣ್ಣನವರ 'ಶಾಖಾಂಬರಿ' ಕಂಪನಿಯ ಅನುಸಂಧಾನ ಸುಲಭವಾಗಿ ಬಿಟ್ಟಿತು.

ಸುಜ್‌ಲಾನ್ ಕಂಪನಿ ನಿರ್ಮಿಸಿದ ಪವನಗೋಪುರಗಳ ಪೈಕಿ 10 ವಿಂಡ್‌ಮಿಲ್‌ಗಳನ್ನು ಶಾಕಾಂಬರಿ ಕಂಪನಿಯ ಸುಪರ್ದಿಗೆ ವಹಿಸಬೇಕೆಂಬ ಅನಧಿಕೃತ ಕರಾರಿನೊಂದಿಗೆ ಆ ಅಮೆರಿಕನ್ ಸಂಸ್ಥೆಗೆ ಪರವಾನಗಿ ನೀಡಲಾಯಿತೆಂಬುದು...

ಸೀಡಿ-ಸ್ಫೋಟ ಸಾಮೂಹಿಕ ರಾಜೀನಾಮೆಗೆ ಕಾಂಗ್ರೆ ತಳಮಳ

ಇದೀಗ ಹಗರಣಗ್ರಸ್ತ ಜೆಡಿಎಸ್‌ನ ರಾಜವಂಶದ ವಿರುದ್ಧ ಕತ್ತಿ ಝಳಪಿಸುತ್ತ, ಬಂದೂಕನ್ನೇರಿಸುತ್ತ ವೀರಾಗ್ರಣಿಗಳಂತೆ ಪೋಜು ಕೊಡುತ್ತಿರುವವರ್‍ಯಾರೂ ಕಾಂಗ್ರೆಸ ಮೂಲ ನಿವಾಸಿಗಳಲ್ಲವೇ ಅಲ್ಲ.... ಅವರೆಲ್ಲ ಮಾಜಿ ಜೆಡಿಎಸ್‌ಗಳೇ... ಅದೂ ದೇವೇಗೌಡರ ಹಳೆಯ ಒಡನಾಡಿಗಳೇ...

ಅಧಿಕಾರ ಕಳೆದುಕೊಂಡು ಖಿನ್ನರಾದ ಮೇಲೂ ಪ್ರತಿಪಕ್ಷ ಸ್ಥಾನದಲ್ಲಿ ಕೂತೇ ತಮ್ಮ ರಾಜಕೀಯ ವರ್ಚಸ್ಸು ಮತ್ತು ಖಾಸಗಿ ವಹಿವಾಟುಗಳನ್ನೆಲ್ಲ ಮ್ಯಾನೇಜು ಮಾಡುತ್ತ ಸುಖವಾಗಿದ್ದ ರಾಜ್ಯ ಕಾಂಗ್ರೆ ನಾಯಕರುಗಳಿಗೀಗ ಭಾರೀ ಧರ್ಮಸಂಕಟ ಎದುರಾದಂತಿದೆ....

ಜನಾರ್ಧನ ರೆಡ್ಡಿಯ ಸಿಡಿಗಳು ದಿಢೀರನೇ ದಿನಪತ್ರಿಕೆಗಳಲ್ಲಿ ಮತ್ತು ಟಿವಿ ಚಾನೆಲ್‌ಗಳಲ್ಲಿ ಪ್ರಸಾರಗೊಳ್ಳುತ್ತಿದ್ದಂತೆಯೇ ಏಕಾಏಕಿ ಅಧಿಕಾರರೂಢ ಜೆಡಿಎಸ್-ಬಿಜೆಪಿ ಮೈತ್ರಿಕೂಟದ ವಿರುದ್ಧ ರಣಕಹಳೆ ಊದಲೇಬೇಕಾಗಿ ಬಂದ ಕಾಂಗ್ರೆಸ್ಸಿಗರಿಗೆ ಅದೇಕೋ ರಣರಂಗಕ್ಕೆ ಧುಮುಕುವಲ್ಲಿ ಕೊಂಚ ಮೀನ-ಮೇಷ, ಅಷ್ಟಿಷ್ಟು ಹಿಂಜರಿಕೆ ಮತ್ತಷ್ಟು ಭಯ-ಆತಂಕಗಳು ಕಾಡುತ್ತಿರುವಂತಿದೆ.

ಪ್ರತಿಪಕ್ಷ ನಾಯಕ ಧರಂಸಿಂಗ್ ಮತ್ತು ಕೆಪಿಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗಳಿಗಂತೂ ವಿರೋಧ ಪಕ್ಷದ ಕಪ್ತಾನುರುಗಳಾಗಿ ಏನಾದ್ರೂ ಮಾಡಲೇ ಬೇಕಾಗಿ ಬಂತಲ್ಲಪ್ಪ ಎಂಬ ಒತ್ತಡದಿಂದಾಗಿ ತತ್ತರಿಸುವಂತಾಗಿಬಿಟ್ಟದೆ... ಅವರ ಸಹಜ ಜಾಯಮಾನವೇ ಅಧಿಕಾರ ಮತ್ತು ಮಂತ್ರಿಗಿರಿಯ ರಾಜವೈಭವನಕ್ಕೆ ಒಗ್ಗಿಹೋಗಿರುವಂತಿರುವಾಗ ಈ ಪ್ರತಿಪಕ್ಷ ರಾಜಕಾರಣದ ದುಸ್ಸಾಹಸಗಳಿಗೆ ಹೊಂದಿಕೊಳ್ಳುವುದೆಂದರೇನೆ, ಪಾಪ, ಇವರುಗಳಿಗೆ ಸಂಕಟವೋ ಸಂಕಟ...

ಇನ್ನು ಜೆಡಿಎಸ್‌ನವರಷ್ಟೇ ಅವಾಂತರಕಾರಿಗಳಾದ ಆರ್.ವಿ. ದೇಶಪಾಂಡೆ ಮತ್ತು ಡಿ.ಕೆ. ಶಿವಕುಮಾರ್‌ಗಳಿಗಿಂತೂ ಎಲ್ಲಿ ಆ ಆರೋಪ ಪ್ರತ್ಯಾರೋಪಗಳ ಸಂಘರ್ಷ ಒಂದು 'ಲಿಮಿಟ್' ದಾಟಿ ಬಿಟ್ಟಲ್ಲಿ ಅದ್ಯಾವಾಗ ಆ ಅಧಿಕಾರಸ್ಥ ತಂದೆ-ಮಕ್ಕಳು ತಮ್ಮ ವಿರುದ್ಧವೇ ತಿರುಗುಬಾಣ ಪ್ರಯೋಗಿಸಿ ಫಜೀತಿಗೀಡು ಮಾಡುತ್ತಾರೋ ಎಂಬ ದುಗುಡ.

ಉಳಿದ ಮುಂಚೂಣಿ ನಾಯಕರ ಪೈಕಿ ವಿಧಾನ ಪರಿಷತ್ತಿನ ಪ್ರತಿಪಕ್ಷ ನಾಯಕ ಎಚ್.ಕೆ. ಪಾಟೀಲ್ ತಮ್ಮ ಸಂಭಾವಿತನದ ಸರ್ಟಿಫಿಕೇಟು ರಕ್ಷಿಸುವುದರಲ್ಲಿಯೇ ತೃಪ್ತಿ ಪಡುತ್ತಾರೆಯೇ ಹೊರತು ಯುದ್ಧ ಭೂಮಿಯಲ್ಲಿ ನಿಂತು ಕಾದಾಡುವ ಧೈರ್ಯವನ್ನೇ ತೋರುತ್ತಿಲ್ಲ.

ಜನಾರ್ಧನ ಪೂಜಾರಿಯವರ ಆರ್ಭಟಗಳಿಗೆ ಸ್ವತಃ ಕಾಂಗ್ರೆಸ್ಸಿಗರೇ ಕ್ಯಾರೆ ಅನ್ನುವುದಿಲ್ಲ... ಕೇಂದ್ರ ಸಚಿವರುಗಳಾದ ಆಸ್ಕರ್, ಎಂ.ವಿ. ರಾಜಶೇಖರನ್‌ಗಳನ್ನೆಲ್ಲ ಅವರ ಪಾರ್ಟಿ ಕಾರ್ಯಕರ್ತರೇ 'ಪುಣ್ಯಕೋಟಿ' ಪಟ್ಟಿಗೆ ಸೇರಿಸಿ ಬಿಟ್ಟಿದ್ದಾರೆ.

ಇದೀಗ ಹಗರಣಗ್ರಸ್ತ ಜೆಡಿಎಸ್‌ನ ರಾಜವಂಶದ ವಿರುದ್ಧ ಕತ್ತಿ ಝಳಪಿಸುತ್ತ, ಬಂದೂಕನ್ನೇರಿಸುತ್ತ ವೀರಾಗ್ರಣಿಗಳಂತೆ ಪೋಜು ಕೊಡುತ್ತಿರುವವರ್‍ಯಾರೂ ಕಾಂಗ್ರೆಸ ಮೂಲ ನಿವಾಸಿಗಳಲ್ಲವೇ ಅಲ್ಲ.... ಅವರೆಲ್ಲ ಮಾಜಿ ಜೆಡಿಎಸ್‌ಗಳೇ... ಅದೂ ದೇವೇಗೌಡರ ಹಳೆಯ ಒಡನಾಡಿಗಳೇ... ಸಿದ್ರಾಮಯ್ಯ, ರಮೇಶ್‌ಕುಮಾರ್...

ಕರ್ನಾಟಕ ರಾಜ್ಯ ವಿದ್ಯುತ್ ನಿಗಮ ಮತ್ತು ಮಂಡಲಿಗಳಲ್ಲೀಗ ಬಹಿರಂಗ ರಹಸ್ಯ!


ಪ್ರತಿ ಗಾಳಿಗೋಪುರದಿಂದ 1.20 ಕೋಟಿ ರೂ. ವಾರ್ಷಿಕ ಲಾಭ!!

ಆಗಿನ್ನೂ ಕುಮಾರಸ್ವಾಮಿ ಕರ್ನಾಟಕದ ಮುಖ್ಯಮಂತ್ರಿಯಾಗಿರಲಿಲ್ಲ... ಜೆಡಿಎಸ್‌ನ ವರ್ಕಿಂಗ್ ಪ್ರೆಸಿಡೆಂಟ್ ಮಾತ್ರ ಆಗಿದ್ದರು. ಆದರೆ ಮೈತ್ರಿಕೂಟದ ಆಳುವ ಪಕ್ಷವೊಂದರ ಅತ್ಯಂತ ಬಲಿಷ್ಠ ಅಧಿಕಾರ ಕೇಂದ್ರವಾಗಿದ್ದರಲ್ಲವೆ?!

ಸುಜ್‌ಲಾನ್ ಕಂಪನಿಯ ಪ್ರತಿಯೊಂದು ಗಾಳಿಗೋಪುರದ ಉತ್ಪಾದನಾ ಸಾಮರ್ಥ್ಯ 3 ಮೆಗಾವ್ಯಾಟ್‌ಗಳು.... ಅಂದರೆ ವಿಶ್ವಾದಲ್ಲೇ ಅತಿಹೆಚ್ಚಿನ ಸಾಮರ್ಥ್ಯವುಳ್ಳ ಯಂತ್ರಗಳಿವು. ಪ್ರತಿಯೊಂದು ಗೋಪುರದಿಂದ ಬರುವ ಮಾಸಿಕ ಆದಾಯ 10 ಲಕ್ಷ ರೂ.ಗಳು.... ಅಂದರೆ ವರ್ಷಕ್ಕೆ ಪ್ರತಿಯೊಂದು ಘಟಕದಿಂದ ಬರುವ ಲಾಭ 1 ಕೋಟಿ 20 ಲಕ್ಷ ರೂ.ಗಳು. ಇನ್ನೊಂದು ವೈಚಿತ್ರ್ಯ ನೋಡಿ: ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿಗೆ ಕರ್ನಾಟಕ ಸರ್ಕಾರವೇ

Date		Particulars	CH.NO.	PAYMENT	RECEIPT
26.12.2005	TO	SHAKAMBARI ENTERPRISE	116446	6250000.00	
14.03.2006	TO	SHAKAMBARI ENTERPRISE	116413	835000.00	
14.03.2006	TO	SHAKAMBARI ENTERPRISE	116422	29500000.00	
03.06.2006	TO	SHAKAMBARI ENTERPRISE	100143	5000000.00	
		TOTAL		41585000.00	

ಬಿಡುವಿನ ವೇಳೆಯಲ್ಲಿ 'ಅಮೋಘ್ ಕೇಬಲ್ ಟಿವಿ' ಹಾಗೂ 'ಕಸ್ತೂರಿ' ಟಿವಿ ಚಾನೆಲ್ ಸ್ಥಾಪನೆ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದ್ದ ಕುಮಾರಣ್ಣನವರ 'ಶಾಕಾಂಬರಿ ಎಂಟರ್‌ಪ್ರೈಸಸ್' ಕಂಪನಿ ಅಸಲಿಗೆ ಯಾವ ಉದ್ಯಮ ವ್ಯಾಪಾರದಲ್ಲಿ ವ್ಯವಹರಿಸುತ್ತಿದೆ ಎಂಬುದೇ ಸ್ಪಷ್ಟವಾಗಿರಲಿಲ್ಲ.



ಇತ್ತೀಚೆಗೆ ಬಿಡುಗಡೆಯಾದ ದಾಖಲೆಗಳ ಪ್ರಕಾರ ಐರನ್ ಓರ್ ಬಿಸಿನೆಸ್ ಮಾಡುವ ಅವರ ಹಿರಿಯ ಸೋದರ ಬಾಲಣ್ಣನವರ ಬಿಎಸ್‌ಕೆ ಟ್ರೇಡಿಂಗ್ ಕಂಪನಿಯಿಂದ 'ಶಾಕಾಂಬರಿ' ಕಂಪನಿಗೆ ಡಿಸೆಂಬರ್ 26, 2005 ರಿಂದ ಜೂನ್ 3, 2006 ರ ವರೆಗಿನ ಅವಧಿಯಲ್ಲಿ ಸುಮಾರು 4 ಕೋಟಿ 16 ಲಕ್ಷ ರೂ. ಗಳಷ್ಟು ಹಣ ವರ್ಗಾವಣೆಯಾಗಿರುವ ಮಾಹಿತಿ ಇತ್ತಷ್ಟೇ.

ಐರನ್‌ಓರ್ ರಫ್ತಿನಷ್ಟೇ ಆಕರ್ಷಕವಾಗಿರುವ ಈ ಪವನಯಂತ್ರಗಳ ವ್ಯವಹಾರದಲ್ಲಿ 'ಶಾಕಾಂಬರಿ' ಕಂಪನಿಯನ್ನು ತೊಡಗಿಸಿದ ಕುಮಾರಣ್ಣನವರ ವ್ಯಾಪಾರಿ ಚತುರತೆ ಸಾಮಾನ್ಯವಾದದ್ದೇನಲ್ಲ... ಪ್ರತಿಯೊಂದು ವಿಂಡ್-ಮಿಲ್ ಗೋಪುರದ ಸ್ಥಾಪನೆಗೆ ಅಗತ್ಯವಿರುವ ಮೂಲ ಬಂಡವಾಳ 6.5 ಕೋಟಿ ರೂಪಾಯಿಗಳು... ಇದು ಅಸಾಂಪ್ರದಾಯಿಕ ವಿದ್ಯುತ್ ಉತ್ಪಾದೆಯಾದ್ದರಿಂದ ಶೇ. 25 ರಷ್ಟು ಬಂಡವಾಳ ಹೂಡಿದಲ್ಲಿ (1.5 ಕೋಟಿ ರೂ.) ಮಿಕ್ಕ ಶೇ. 75 ರಷ್ಟನ್ನು (5 ಕೋಟಿ ರೂ.) ಬ್ಯಾಂಕುಗಳು ಸಾಲವಾಗಿ ನೀಡುತ್ತವೆ.

ಗಿರಾಕಿ! ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (KPCL) ತಾನೇ `buy-back' ಆಧಾರದ ಮೇಲೆ ಇಲ್ಲಿ ಉತ್ಪಾದನೆಯಾಗುವ ಎಲ್ಲ ವಿದ್ಯುತ್ತನ್ನು ಖರೀದಿಸುತ್ತದೆ!!

ದೇವೇಗೌಡರ ಪುತ್ರರುಗಳ ಪೈಕಿಯೆ ಪೂರ್ಣಾವಧಿ ಬಿಸಿನೆಸ್ ವ್ಯವಹಾರಗಳಲ್ಲಿ ನಿಪುಣರಾದ ಕುಮಾರಣ್ಣ ತಮ್ಮ 'ಶಾಕಂಬರಿ' ಕಂಪನಿಗೆ ನಿರಂತರವಾಗಿ ಕೋಟ್ಯಂತರ ರೂಪಾಯಿ ಲಾಭ ತರಬಲ್ಲ ಎಂತಹ ಅದ್ಭುತವಾದ ಆರ್ಥಿಕ ಬುನಾದಿ ಹಾಕಿಕೊಂಡಿದ್ದಾರೆ ನೋಡಿ....

ಕೇವಲ ಹತ್ತೇ ಗಾಳಿಗೋಪುರಗಳು 'ಶಾಕಾಂಬರಿ'ಗೆ ಸೇರಿವೆಯೆಂದಿಟ್ಟುಕೊಂಡರೂ ಪ್ರತಿಯೊಂದರಿಂದ 1.20 ಕೋಟಿ ರೂ.ನಂತೆ ಒಟ್ಟು ನಿವ್ವಳ ಲಾಭ ವರ್ಷಕ್ಕೆ 12 ಕೋಟಿ ರೂ.ಗಳು!! ಇದೆಲ್ಲವೂ ಕುಮಾರಣ್ಣನವರ ಶೈಲಿಯಲ್ಲಿಯೇ ಬಣ್ಣಿಸುವುದಾದಲ್ಲಿ ಸಂಪೂರ್ಣವಾಗಿ 'ಸಾರ್ವಜನಿಕ' ವ್ಯವಹಾರವೇ, ಅಲ್ಲವೆ?....

ಆದರಿಲ್ಲಿ 'ಸುಜ್‌ಲಾನ್' ಕಂಪನಿಯೆ ಸಂಪೂರ್ಣವಾಗಿ ನಿರ್ವಹಣಾ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರೂ ಲಾಭಾಂಶ ಮಾತ್ರ 'ಶಾಕಾಂಬರಿ'ಗೆ ತಪ್ಪದೇ ಸಲ್ಲುವಂತಹ ವ್ಯವಸ್ಥೆ ಹೇಗಾಯಿತೆಂಬುದೇ ವಿಸ್ಮಯಕರವಾಗಿದೆ.....

ಈ ಪವನ-ಶಕ್ತಿಯ ವ್ಯಾಪಾರಕ್ಕೆ ಆರಂಭಿಕ 5 ವರ್ಷಗಳ ವರೆಗೆ ಸಂಪೂರ್ಣ ತೆರಿಗೆ ವಿನಾಯಿತಿ ಬೇರೆ (TAX HOLIDAY)!

-ರವೀಂದ್ರ ರೇಶ್ಮೆ

ಉಗ್ರಪ್ಪ, ಡಿ.ಬಿ. ಚಂದ್ರೇಗೌಡ, ಬಿ.ಎಲ್. ಶಂಕರ್ ಮುಂತಾದ ಮಾಜಿ ದಲಳವಾಯಿಗಳೇ ಇದೀಗ ಕಾಂಗ್ರೆಸ್ಸಿನ ಸೇನಾಪಡೆಯನ್ನು ಗೌಡರ ವಿರುದ್ಧ ಕುರುಕ್ಷೇತ್ರ ಕಾಳಗಕ್ಕೆ ತಾಲೀಮು ಮಾಡಿಸುವಂತಾಗಿದೆ.....

ಆವತ್ತು ಆಗಸ್ಟ್ 23 ರ ಬಳ್ಳಾರಿ ಪತ್ರಿಕಾಗೋಷ್ಠಿಯ ನಂತರ 'ಥಂಡಾ' ಆಗಿಬಿಟ್ಟದ್ದ ಬಿಜೆಪಿ ಬಂಡುಕೋರ ಜನಾರ್ಧನ ರೆಡ್ಡಿಗೆ ಮತ್ತೆ ಧೈರ್ಯ ತುಂಬಿ ಮರುಹೋರಾಟಕ್ಕೆ ಸಿದ್ಧಪಡಿಸಿದ್ದೇ ಶ್ರೀನಿವಾಸಪುರದ ನಾಯಕ ರಮೇಶ್‌ಕುಮಾರ್. ಹೈಕೋರ್ಟಿನಲ್ಲಿ ರೆಡ್ಡಿ ಸಲ್ಲಿಸಿದ್ದ ರಿಟ್ ಅರ್ಜಿಗೆ ಪೂರಕವಾದ ಸಾಕ್ಷಾಧಾರಗಳು, ಪುರಾವೆಗಳು ಮತ್ತು ಸಿಡಿ-ವಿಸಿಡಿಗಳ ಭಂಡಾರವನ್ನೆಲ್ಲ ವಕೀಲರಿಗೆ ಒದಗಿಸಿ ಸೂಕ್ತ ತಂತ್ರಗಾರಿಕೆ ರೂಪಿಸಿದ್ದೂ ರಮೇಶ್‌ಕುಮಾರರೇ....

ಇತ್ತ ಸೆಪ್ಟೆಂಬರ್ 3 ರ ಸೋನಿಯಾ ರ್‍ಯಾಲಿಯ ಮೂಲಕ ಕಾಂಗ್ರೆಸ್‌ನಲ್ಲಿ ಅಧಿಕೃತವಾಗಿ ಪಾದಾರ್ಪಣ ಮಾಡಿದ ಸಿದ್ದ್ರಾಮಯ್ಯನವರೇ ಆರಂಭಿಕ ಸಮರೋತ್ಸಾಹದ ನಂತರ ಕೊಂಚ ಮಂಕಾಗಿದ್ದವರು ಮೊನ್ನಿನ ಸಿಡಿ ಸ್ಫೋಟದ ನಂತರ ಹೆಗಲ ಮೇಲಿನ ಟವಲು ಕೊಡವಿಕೊಂಡು ಎದ್ದು ನಿಂತರು.... ತಮ್ಮ ಚಾಮುಂಡೇಶ್ವರಿ ಕ್ಷೇತ್ರವನ್ನೇ ಟಾರ್ಗೆಟ್ ಮಾಡಿಕೊಂಡು ದಾಳಿ ಶುರು ಮಾಡಿದ್ದ ಮುಖ್ಯಮಂತ್ರಿ ಕುಮಾರಣ್ಣನ ಆಕ್ರಮಣಕ್ಕೆ ಪ್ರತಿಯಾಗಿ ಭಾರೀ ಜನಸಮೂಹದೊಂದಿಗೆ ಕ್ಷೇತ್ರಯಾತ್ರೆ ನಡೆಸಿ ಮೈಸೂರು ಜಿಲ್ಲೆಯ ಕಾಂಗ್ರೆಸ್ಸಿಗರಲ್ಲಿ ರೋಮಾಂಚನವನ್ನುಂಟು ಮಾಡಿದ್ದರು.

ಸಿಡಿಗಳು ಪ್ರಕಟಗೊಳ್ಳುತ್ತಲೇ ನಿಯೋಗ ಕಟ್ಟಿಕೊಂಡು ರಾಜಭವನಕ್ಕೆ ಧಾವಿಸಿ ರಾಜ್ಯಪಾಲರೆದುರು ಕುಮಾರಸ್ವಾಮಿ ಸರ್ಕಾರವನ್ನು ಡಿಸ್‌ಮಿಸ್ ಮಾಡಿ, ಸಿಡಿಗಳ ಬಗ್ಗೆ ಸಿಬಿಐ ತನಿಖೆಗೆ ಶಿಫಾರಸ್ಸು ಮಾಡಿ

ಎಂದು ಗೋಗರೆದರು... ಹಾಗೆಯೇ ಕೆಪಿಸಿಸಿ ಕಚೇರಿಯಲ್ಲಿ ಸಭೆ ನಡೆಸಿ ಹೈಕಮಾಂಡ್ ಬಳಿ ತೆರಳುವ ಪ್ರಸ್ತಾಪನೆಯನ್ನು ಚರ್ಚಿಸಿದರು.

ಪಾರ್ಟಿಯ ಎಲ್ಲ 65 ಮಂದಿ ಎಮ್ಮೆಲ್ಲೆಗಳು ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಿ ಅಸೆಂಬ್ಲಿ ವಿಸರ್ಜನೆಗೆ ದಾರಿ ಸುಗಮಗೊಳಿಸುವಂತೆ ಹೈಕಮಾಂಡನ ಪರವಾನಿಗೆ ಕೋರುವುದೆಂದು ಮಾಡಲಾದ ಸಲಹೆ ಬಂದಾಗ ಮಾತ್ರ ಮೆಜಾರಿಟಿ ನಾಯಕರೆಲ್ಲ ಹಿಂದೇಟು ಹಾಕಿದರು... ಕಳೆದ ಚುನಾವಣೆಯಲ್ಲಿ ಸೋತು ಮನೆಯಲ್ಲಿ ಕೂತಿರುವ ಮಾಜಿ ಮಂತ್ರಿ-ಮಾಜಿ ಶಾಸಕರುಗಳು ಮಾತ್ರ ಈ ಸಲಹೆಯನ್ನು ಭಾರೀ ಉತ್ಸುಕತೆಯಿಂದ ಸ್ವಾಗತಿಸಿದರು....

ತನ್ನ ಮೇಲೆ ನೇರವಾಗಿ ಭೂಕಬಳಿಕೆ ಹಾಗೂ ಅಧಿಕಾರ ದುರಪಯೋಗ ಆರೋಪ ಮಾಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿ ವಿರುದ್ಧ ಮಾಜಿ ಸಚಿವ ಆರ್.ವಿ. ದೇಶಪಾಂಡೆ ಅಷ್ಟೇ ತೀಕ್ಷ್ಣರಾಗಿ ಪ್ರತಿದಾಳಿ ನಡೆಸಿದರು. "ಈ ಮುಖ್ಯಮಂತ್ರಿಯ ವಯಸ್ಸೆಷ್ಟೋ ಅಷ್ಟೂ ವರ್ಷಗಳಿಂದ ಇನ್‌ಕಂ ಟ್ಯಾಕ್ಸ್ ಕಟ್ತಾ ಬಂದಿದೆ ನನ್ನ ಕುಟುಂಬ" ಎಂದರು!


ಗವರ್ನರಿಗೆ ಮನವಿ, ಹೈಕೋರ್ಟಿನಲ್ಲಿ ರಿಟ್ ಅರ್ಜಿ, ಮುಂಬರುವ ಬೆಳಗಾವಿ ಅಸೆಂಬ್ಲಿ ಅಧಿವೇಶನದ ಬಹಿಷ್ಕಾರ ಹಾಗೂ ರಾಜ್ಯದ್ಯಂತ ಪ್ರತಿಭಟನಾ ಚಳವಳಿ.... ಮುಂತಾದ ಹಲವು ಹತ್ತು ಪರ್ಯಾಯ ಸಾಧ್ಯತೆಗಳಿಗಿಂತ ಶಾಸಕರ ಸಾಮೂಹಿಕ ರಾಜೀನಾಮೆಗೆ ಒತ್ತಾಯಿಸುವುದೇ ಅತ್ಯಂತ ಪ್ರಬಲ ತಂತ್ರ ಎಂಬ ತೀರ್ಮಾನಕ್ಕೆ ಶರಣಾಗುತ್ತಿರುವಂತಿದೆ ಬಹುಪಾಲು ಕಾಂಗ್ರೆಸ್ಸಿಗರು....

– ರೇಶ್ಮೆ

ಜನಾಡುವಿನಿಂದ, ದ್ವೀಪಕ್ಕೆ ಮುತ್ತಪ್ಪ ರೈ!

ಮಾಜಿ ಭೂಗತ ದೊರೆ ಮುತ್ತಪ್ಪ ರೈ ಬಗ್ಗೆ ಇತ್ತೀಚೆಗೆ ಒಂದು ಕುತೂಹಲಕಾರಿ ಸುದ್ದಿ ಹಬ್ಬಿದೆ. ಭಾರತವನ್ನು ಬಿಟ್ಟು ದುಬೈನಲ್ಲಿ ನೆಲೆಸಿದ್ದ ರೈ ನಂತರ ಬೆಂಗಳೂರಿಗೆ ಬಂದು ಪರಪ್ಪನ ಅಗ್ರಹಾರ ಜೈಲಿನಲ್ಲೇ ಕುಳಿತು ತನ್ನ ಮೇಲಿದ್ದ ಎಲ್ಲಾ ಮೊಕ್ಕದ್ದಮೆಗಳಿಂದ ಖುಲಾಸೆಯಾಗಿದ್ದು ಎಲ್ಲರಿಗೂ ಗೊತ್ತು. ಆನಂತರ "ಇನ್ನೆಂದಿಗೂ ನಾನು ದೇಶ ಬಿಟ್ಟು ಹೋಗಲಾರೆ" ಎಂದ ರೈ, ಮೈಸೂರು ರಸ್ತೆಯ ಬಿಡದಿ ಗ್ರಾಮದ ಸಮೀಪದಲ್ಲಿರುವ ಜನಾಡು(Xanadu) ರೆಸಾರ್ಟ್‌ನಲ್ಲಿ ಬೀಡುಬಿಟ್ಟರು.

ಈಗ ಹಬ್ಬಿರುವ ಸುದ್ದಿ ಏನೆಂದರೆ ಮುತ್ತಪ್ಪ ರೈ ಜನಾಡು ರೆಸಾರ್ಟನ್ನು ಸದ್ಯದಲ್ಲೇ ಖಾಲಿ ಮಾಡಿ ರಾಜ್ಯದ ಯಾವುದೋ ಕರಾವಳಿಯ ಅಥವಾ ನದಿಯ ಮಧ್ಯದಲ್ಲಿರುವ ದ್ವೀಪದಲ್ಲಿ ನೆಲೆಸಲಿದ್ದಾರಂತೆ. ಆ ದ್ವೀಪದಲ್ಲಿ ಈಗಾಗಲೇ ಸುಸಜ್ಜಿತವಾದ ಮನೆ ನಿರ್ಮಾಣವಾಗಿದ್ದು ಇನ್ನು ಕೆಲವೇ ತಿಂಗಳಲ್ಲಿ ರೈ ಅಲ್ಲಿಗೆ ಶಿಫ್ಟ್ ಆಗಲಿದ್ದಾರಂತೆ. ಈ ಮಾತು ಎಷ್ಟು ಸುಳ್ಳೋ, ನಿಜವೋ ಗೊತ್ತಿಲ್ಲ. ಆದರೆ ಇದಕ್ಕೆ ಪೂರಕವಾದ ಕೆಲವು ಬೆಳವಣಿಗೆಗಳಂತೂ ರೈ ಕ್ಯಾಂಪಿನಲ್ಲಿ ನಡೆದಿವೆ.



ಮುತ್ತಪ್ಪ ರೈ ಮತ್ತು ಮಡಕೇರಿಯ ಸಂಬಂಧ ಇಂದು ನಿನ್ನೆಯದಲ್ಲ. ಇಂತಹ ಮಡಿಕೇರಿಯ ಸಮೀಪದ ತಾವರೆಕೆರೆಯಲ್ಲಿ ಈಗ ಒಂದು ರಿಸಾರ್ಟ್ ನಿರ್ಮಾಣವಾಗುತ್ತಿದೆ. ಈ ರೆಸಾರ್ಟ್‌ನ ಪ್ರದೇಶದಲ್ಲಿ ಒಂದು ವಿಶಾಲವಾದ ಕೆರೆಯೂ ಇದೆ. ಅದರ ಮಧ್ಯದಲ್ಲಿ ಒಂದು ಕಾಟೇಜ್ ಸಹ ನಿರ್ಮಾಣವಾಗುತ್ತಿದೆ. ಸ್ಥಳೀಯರ ಪ್ರಕಾರ ರೆಸಾರ್ಟ್‌ನ ಮಾಲೀಕರು ಮುತ್ತಪ್ಪ ರೈ. ಆದರೆ ಈ ರೆಸಾರ್ಟ್‌ನ ಮಾಲೀಕರು ಯಾರು ಎಂಬ ವಿಷಯ ಯಾರಿಗೂ ಗೊತ್ತಿಲ್ಲ

ಕೆರೆಯ ಮಧ್ಯದಲ್ಲಿ ನಿರ್ಮಾಣವಾಗುತ್ತಿರುವ ಈ ಕಾಟೇಜು ವಿಷಯ ಬಾಯಿಯಿಂದ ಬಾಯಿಗೆ ಹಬ್ಬಿ ದ್ವೀಪವಾಯಿತೇ? ಗೊತ್ತಿಲ್ಲ. ಆದರೆ 'ಜನಾಡು'ವಿನಿಂದ ಶಿಫ್ಟ್ ಆಗುವಂತಹ ಅನಿವಾರ್ಯತೆ ಮುತ್ತಪ್ಪ ರೈಗೆ ಏಕೆ? ಎಂಬುದು ಪ್ರಶ್ನೆ: ಮುತ್ತಪ್ಪ ರೈ ಈಗಿರುವ ಪರಿಸ್ಥಿತಿಯನ್ನು ಗಮನಿಸಿ. ಜನಾಡು ರಿಸಾರ್ಟ್‌ನಲ್ಲಿ ರೈ ಸುಪರ್ದಿಯಲ್ಲಿರುವುದು ನಾಲ್ಕು ಕಾಟೇಜ್‌ಗಳು. ಇದರಲ್ಲಿ ಮೂರು ಕಾಟೇಜ್‌ಗಳು ರೈ ರಕ್ಷಣೆಯ ಜವಾಬ್ದಾರಿ ಹೊತ್ತಿರುವ ಬೆಂಗಾವಲಿನವರ ಕೈಯಲ್ಲಿದೆ. ಅಂಗರಕ್ಷಕರ ಎರಡು ಗುಂಪುಗಳು ಹಗಲು ರಾತ್ರಿ ಕಣ್ಣಲ್ಲಿ ಕಣ್ಣಿಟ್ಟು ಎಚ್ಚರದಿಂದ ಕಾಯುತ್ತಿರುತ್ತವೆ. ಈ ಎರಡು ಗುಂಪುಗಳಲ್ಲಿ ಒಂದು ಉತ್ತರ ಪ್ರದೇಶದವರದ್ದಾದರೆ ಮತ್ತೊಂದು ಗ್ಲೋಬ್ ಡಿಟೆಕ್ಟಿವ್ ಏಜನ್ಸಿಯದು. ಎರಡೂ ಗುಂಪಿನ ಅಂಗರಕ್ಷಕರ ಬಳಿ ಅಧಿಕೃತ ಲೈಸೆನ್ಸ್ ಇರುವ ಶಸ್ತ್ರಾಸ್ತ್ರಗಳಿವೆ.

ಇವರಲ್ಲದೆ ಮಂಗಳೂರು ಮತ್ತು ಮಡಿಕೇರಿಯ ರೈ ನಂಬಿಕಸ್ತ ಹುಡುಗರ ಪಡೆಯೇ ಇಡಿ ಪ್ರದೇಶವನ್ನು ಸುತ್ತುವರಿದಿರುತ್ತದೆ. ಇಷ್ಟು ಬಿಗಿಯಾದ ಕಾವಲಿದ್ದರೂ ಇತ್ತೀಚೆಗೆ ರೈ ಭೇಟಿಯಾಗಲು ಬರುವ ಜನರನ್ನು ತಡೆಯುವುದು ಅಂಗರಕ್ಷಕ ಪಡೆಗೆ ತಲೆನೋವಿನ ಕೆಲಸವಾಗಿದೆ.

ಭೂಗತ ಚಟುವಟಿಕೆಗಳನ್ನು ಬಿಟ್ಟಿದ್ದೇನೆಂದು ಮುತ್ತಪ್ಪ ರೈ ಘೋಷಿಸಿ ಅದರಿಂದ ದೂರವಿರುವುದೇನೋ ನಿಜ. ಆದರೆ ರೈ ಹೆಸರನ್ನು ಬಳಸಿಕೊಳ್ಳುವ ಗ್ಯಾಂಗ್‌ಗಳ ಸಂಖ್ಯೆ ಈಗ ಒಂದಕ್ಕೆರಡಾಗಿದೆ. ರೈ ಇವತ್ತು ಮಾಡುತ್ತಿರುವುದು ರಿಯಲ್ ಎಸ್ಟೇಟ್ ಬಿಸಿನೆಸ್. ದೇವಹನಳ್ಳಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್, ಫೆರಿಫೆರಲ್‌ರಿಂಗ್ ರೋಡ್ ಸೇರಿದಂತೆ ಬೆಂಗಳೂರಿನ ಆಯಕಟ್ಟಿನ ಜಾಗಗಳಲ್ಲಿ ರೈ ಅಥವಾ ಆತನ ಕಡೆಯವರು ಕೋಟಿಗಟ್ಟಲೆ ಹಣವನ್ನು ಜಮೀನಿನ ಮೇಲೆ ತೊಡಗಿಸಿರುವ ಸುದ್ದಿ ಇದೆ.

ಇದಲ್ಲದೆ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ರೈ ಜಮೀನಿನ ಮೇಲೆ ಕೋಟಿಗಟ್ಟಲೆ ಬಂಡವಾಳ ತೊಡಗಿಸಿದ್ದಾರಂತೆ. ಇದೆಲ್ಲಾ ರೈತರಿಗೆ ಸೇರಿದ ಜಮೀನು. ಈ ರೈತರಿಗೆ ಮುತ್ತಪ್ಪ ರೈ ಹಿನ್ನೆಲೆಯ ಅರಿವಿಲ್ಲ. ಅವನ ದಾರಾಳತನ, ವೈಭವ, ಇವನ್ನೆಲ್ಲಾ ಕಂಡು ಬೆರಗಾಗಿರುವ ಇವರು, ಫೈನಲ್ ಸೆಟಲ್‌ಮೆಂಟ್ ಅದು-ಇದು ಅಥವಾ ಬೆಂಗಳೂರಿಗೆ ಬಂದಿದ್ವಿ, ನಿಮ್ಮನ್ನು ನೋಡಿಕೊಂಡು ಹೋಗೋಣ ಅಂತ ಬುದ್ಧಿ" ಅಂತ ನೇರವಾಗಿ 'ಜನಾಡು'ಗೆ ಬಂದುಬಿಡ್ತಾರಂತೆ. ಈ ಮಧ್ಯದಲ್ಲಿ ಅದೆಲ್ಲಿಂದಲೋ 'ಮುತ್ತಪ್ಪ ರೈ ಅಭಿಮಾನಿ ಸಂಘ' ಬೇರೆ ಹುಟ್ಟಿಕೊಂಡಿದೆ.

ಮೇಲ್ನೋಟಕ್ಕೆ ರೈ ಇದಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದಿದ್ದರೂ ಒಳಗೊಳಗೆ ಭಾರಿ ಕಿರಿಕಿರಿಯಾಗುತ್ತಿದೆಯಂತೆ. ಇಷ್ಟಲ್ಲದೆ ರಿಯಲ್ ಎಸ್ಟೇಟ್ ಎಂದು ಹೇಳಿಕೊಂಡು ಓಡಾಡುತ್ತಿರುವ ಪುಡಿ ರೌಡಿಗಳು ಸಹ "ಈಗ ತಾನೇ ಬಿಡದಿಯಿಂದ ಬಂದ್ವಿ, ದೊಡ್ಡವರ ಹತ್ರ ಮಾತನಾಡಿದೀವಿ. ನಿಮ್ಮ ಫೈಲ್‌ನ ಸ್ಟಡಿ ಮಾಡಿದಾರೆ, ನಾಳೆ ನಾಳಿದ್ರಲಿ ಅವರೇ ಇನ್ಸ್‌ಪೆಕ್ಷನ್‌ಗೆ ಬರ್ತಾರೆ, ಆಮೇಲೆ ಸಿಟ್ಟಿಂಗ್ ಕೂರಣ" ಅಂತ ಜಮೀನು ಮಾಲೀಕರ ಬಳಿ ರೀಲು ಸುತ್ತಲು ಆರಂಭಿಸಿರುವುದು ಮುತ್ತಪ್ಪ ರೈ ಗಮನಕ್ಕೆ ಬಂದಿದೆಯಂತೆ.

ಇಂತಹ ತಲೆನೋವುಗಳಿಂದ ತಪ್ಪಿಸಿಕೊಳ್ಳಲು ಬೆಂಗಳೂರಿನಿಂದ ದೂರವಿರುವುದೇ ವಾಸಿ ಎಂಬ ತೀರ್ಮಾನಕ್ಕೆ ರೈ ಬಂದಿರುವಂತಿದೆ. ಇದು ನಿಜವೇ ಆದರೆ ಇನ್ನು ಕೆಲವೇ ತಿಂಗಳಲ್ಲಿ ರೈ 'ಜನಾಡು' ಬಿಡಲಿದ್ದಾರೆ.

-ವರದಿಗಾರ

ನಡುಗಡ್ಡೆಯಲ್ಲಿ ರೈ!

ಇನ್ನೊಂದು ಮೂಲದ ಪ್ರಕಾರ ಮುತ್ತಪ್ಪ ರೈ, ಮೈಸೂರು-ಮಡಿಕೇರಿ ಮಧ್ಯದಲ್ಲಿರುವ ಕುಶಾಲನಗರದ ಹಾರಂಗಿ ಜಲಾಶಯ ಸಮೀಪದ ನಡುಗಡ್ಡೆ (ದ್ವೀಪ)ಯೊಂದನ್ನು ಖರೀದಿಸಿದ್ದಾರಂತೆ. ಸುಮಾರು ಮೂರೂವರೆ ಎಕರೆ ಜಾಗವಿರುವ ಈ ನಡುಗಡ್ಡೆಯಲ್ಲಿ ನಾಯರ್ ಎಂಬುವರು ಜಮೀನು ಮಾಡಿಕೊಂಡು ವಾಸವಾಗಿದ್ದರಂತೆ. ಅವರಿಗೊಂದು ಫ್ಲ್ಯಾಟ್ ಕೊಟ್ಟು ನಡುಗುಡ್ಡೆಯನ್ನು ರೈ ಖರೀದಿಸಿದ್ದಾರೆಂದು ಸುದ್ದಿ.

ಈ ನಡುಗಡ್ಡೆಗೆ ಹೋಗಿ ಬರಬೇಕೆಂದರೆ ಒಂದೋ ನಾಡದೋಣಿ ಇಲ್ಲವೇ ಸ್ಪೀಡ್ ಬೋಟ್ (ಯಾಂತ್ರಿಕೃತ) ಬಳಸಬೇಕು. ಅದಕ್ಕೂ ಹೆಚ್ಚಿನ ಸೌಲಭ್ಯವೆಂದರೆ ಹೆಲಿಕಾಪ್ಟರ್. ಸುದ್ದಿಯೇನೋ ಯಾವುದೋ ಚಲನಚಿತ್ರದ ಸಾರಾಂಶವಿದ್ದಂತಿದೆ. ಆದರೆ ಒಮ್ಮೆ 'ಜನಾಡು' ಮತ್ತು ಅಲ್ಲಿರುವ ರಕ್ಷಣಾ ವ್ಯವಸ್ಥೆಯನ್ನು ನೋಡಿ ಬಂದವರಿಗೆ ಇದ್ಯಾವುದೂ ಅಸಾಧ್ಯವೆನಿಸುವುದಿಲ್ಲ.

ಪೋರ್ಕಿ ಮಂತ್ರಿಯ ತಿರುಬೋಕಿ ಬಯ್ಗುಳ

ಈ ನನ್ ಮಕ್ಳು ಕೇಳಿದ್ರು ಅಂತ ನಮ್ಮಮ್ಮನ್ ತಂದು ಅಡಾ ಇಕ್ಲಾ?

ನಾನೇನೂ ಹಿಂದೆಮುಂದೆ ಹೇಳಿಲ್ಲ...ಮ್ಮನ್ ಕುಮಾರಸ್ವಾಮಿಗೇ ಮುಖಕ್ಕೆ ಹೊಡೆದಂಗೆ ಹೇಳಿದೀನಿ. ಈ ನನ್ ಮಕ್ಳ ಥರ ನಾನು ತಾಯಿಗೆ ಲಾಡಿ ಬಿಟ್ಕೋ ಕೆಲ್ಸ ಮಾಡಿಲ್ಲ!.... ಮ್ಮನ್ ಮೂರೂವರೆ ಕೋಟಿ ಕೊಡೋಕೆ ಬರ್ತಾನೆ? ಈ ನನ್ ಮಕ್ಳು ಹೇಳಿದ ತಕ್ಷಣ ನಮ್ಮಮ್ಮನ್ನ ತಂದು ಅಡಾ ಇಕ್ಲಾ?.... ಏಳು ನೂರೈವತ್ತು ಎಕರೆ ......! ಆ ನನ್ ಮಕ್ಳು ಹಾಳಾಗ್ ಓಗ್ಲಿ ಇವ್ರೂ ಕೋಟಿಗಟ್ಲೆ ಕೇಳ್ತವಲ್ಲ ಯಾರಮ್ಮನ್ ....ಗಿದ್ಳು?

ಸಾರಾಯಿ ಗಡಂಗಿನಲ್ಲೋ, ಚಾಕನಾ ಅಡ್ಡೆಯಲ್ಲೋ ಕುಡುಕನೊಬ್ಬ ಹೀಗೆ ಚಿತ್ತಾಗಿ ಬಯ್ದಾಡುತ್ತಿದ್ದಾನೆಂದು ಭಾವಿಸಿದ್ದೀರಾ? ತಪ್ಪುತಪ್ಪು! ಇದು ಅರಣ್ಯಮಂತ್ರಿ ಚೆನ್ನಿಗಪ್ಪನ ಬಾಯಿಂದ ಬಂದ ಸಂಸ್ಕೃತ ಮಂತ್ರ! ಐನೂರು, ಸಾವಿರದ ನೋಟಿನ ಕಂತೆಗಳ ಮುಂದೆ ಕೂತ ಚೆನ್ನಿಗಪ್ಪನವರ ಒಂದು ಫೋಟೋ, ಜೊತೆಗೆ ಕಂಠಮಟ್ಟ ಕುಡಿದು ದೇವೇಗೌಡರ ಫ್ಯಾಮಿಲಿಯನ್ನು ವಾಚಾಮಗೋಚರ ಬಯ್ದಾಡುತ್ತಿರುವ ಅದೇ ಚೆನ್ನಿಗಪ್ಪನವರ ವೀಡಿಯೋ ಸೀಡಿಯನ್ನು ಕರ್ನಾಟಕದ ಎಲ್ಲಾ ದಿನಪತ್ರಿಕೆಗಳಿಗೆ ತಲುಪಿಸಿದ್ದು ಜನಾರ್ಧನ ರೆಡ್ಡಿಯೋ, ಅವರ ವಕೀಲ ಸಿ.ವಿ. ನಾಗೇಶೋ ಅಥವಾ ಇದು ಡೀಕೇಶಿಯ ಕೈ ಚಳಕವೋ ಬಲ್ಲವರ್ಯಾರು?

ಸೆಪ್ಟೆಂಬರ್ ಹದಿಮೂರರ ಸಂಜೆ ಕೆಲ ಅನಾಮಧೇಯ ವ್ಯಕ್ತಿಗಳು ಬೇರೆಬೇರೆ ಪತ್ರಿಕೆ ಕಚೇರಿಗಳಿಗೆ ಬಂದು ಕೊಟ್ಟ ಮಂತ್ರಿ ಚೆನ್ನಿಗಪ್ಪ ಸೀಡಿಯ ಮರ್ಮವೇನು? ಮುಖ್ಯಮಂತ್ರಿ ಕುಮಾರಸ್ವಾಮಿಯನ್ನೂ ಸೇರಿಸಿ ದೇವೇಗೌಡರ ಇಡೀ ಫ್ಯಾಮಿಲಿಯನ್ನು ಅವರ ಮನೆ ಮಗನಂತಿದ್ದ ಮಂತ್ರಿಯೊಬ್ಬ ವಾಚಾಮಗೋಚರ ಬಯ್ಯುತ್ತಿರುವುದೇಕೆ? ಅದು ಮುಖ್ಯಮಂತ್ರಿ ಕುಮಾರಸ್ವಾಮಿಯಲ್ಲದೇ ಅದಿರುಗಳ್ಳ ಕುಮಾರಸ್ವಾಮಿಯನ್ನು ಬಯ್ಯುತ್ತಿರುವ ಸೀಡಿಯಾ?

ಈ ಬಗ್ಗೆ ಪತ್ರಿಕೆಗಳೆಲ್ಲ ಏಕಾಏಕಿ ತನಿಖೆಯನ್ನು ಸ್ಥಗಿತಗೊಳಿಸಿದ್ದೇಕೆ? ಹಿಂದಿನ ಆರೋಪಗಳ ಬಗ್ಗೆ ವಾರಗಟ್ಟಲೇ ಬರೆದ ಪತ್ರಿಕೆಗಳು ಇದ್ದಕ್ಕಿದ್ದಂತೆ ಮೆದುವಾಗಿದ್ದೇಕೆ?

ಇಂಥ ಪ್ರಶ್ನೆಗಳಿಗೆ ಉತ್ತರ ಸ್ಪಷ್ಟವಾಗಿದೆ. ಸೆಪ್ಟೆಂಬರ್ ಮೂರರಿಂದ ರಾಜ್ಯಮಟ್ಟದ ಪತ್ರಿಕೆಗಳಿಗಷ್ಟೇ ಅಲ್ಲ, ಜಿಲ್ಲಾ ಮಟ್ಟದ ಸಣ್ಣಪುಟ್ಟ ಪತ್ರಿಕೆಗಳಿಗೂ ಸರ್ಕಾರಿ ಜಾಹೀರಾತಿನ ಸುನಾಮಿಯೇ ಹರಿದು ರೆಡ್ಡಿ ಸೀಡಿಯ ವಿರುದ್ಧ ಮಾಧ್ಯಮಗಳಿಗೆ 'ಕೋ-ಜಾ' ಸರ್ಕಾರ ತಿನ್ನಿಸುತ್ತಿರುವ ಬಿರಿಯಾನಿಯ ಮೊತ್ತವೇ ಇಪ್ಪತ್ತೆಂಟು ಕೋಟಿ!



ನೋಟಿನ ರಾಶಿಯ ಮುಂದೆ ಚೆನ್ನಿಗಪ್ಪ



ಸರ್ಕಾರದ ಜಾಹೀರಾತು ಋಣಕ್ಕೆ ಬಿದ್ದ ಮಾಧ್ಯಮಗಳು ಮೊದಲ ದಿನ ಚೆನ್ನಿಗಪ್ಪ ಸೀಡಿಗೆ ಕೊಟ್ಟ ಮಹತ್ವವನ್ನು ಆನಂತರ ಏಕೆ ಕೊಡಲಿಲ್ಲ ಎಂಬುದು ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾದದ್ದು ಮಂತ್ರಿ ಚೆನ್ನಿಗಪ್ಪನಿಗೆ ಗೌಡರ ಫ್ಯಾಮಿಲಿ ಮೇಲೆ ಅಂಥಾ ಸಿಟ್ಟೇಕೆ ಎಂಬುದು?

ಸೀಡಿಯೇ ನಕಲಿ. ಏಕೆಂದರೆ ನಾನು ಯಾವತ್ತೂ ಬಲಗೈಗೆ ವಾಚು ಕಟ್ಟಲ್ಲ, ಅದರಲ್ಲೂ ಎರಡು ಕಡೆ ಜೇಬು ಇರೋ ಶರ್ಟು ಹಾಕೇ ಇಲ್ಲ ಎಂದು ಚೆನ್ನಿಗಪ್ಪ ತಿಪ್ಪೆ ಸಾರಿಸುತ್ತಿರುವುದು ಎಂಥವರಿಗೂ ನಗೆ ಬರಿಸುತ್ತದೆ. ಯಾವತ್ತೂ ಬಲಕ್ಕೆ ಕ್ರಾಪು ಬಿಡುವ ಚೆನ್ನಿಗಪ್ಪ ಆ ಸೀಡಿಯಲ್ಲಿ ಎಡಕ್ಕೆ ಕ್ರಾಪು ಬಿಟ್ಟಿದ್ದಾರೆಂದರೆ ಏನರ್ಥ?

ಅದು ಮಿರರ್ ಇಮೇಜು. ಪಕ್ಕದ ಕನ್ನಡಿಯಲ್ಲಿ ಪ್ರತಿಫಲನಗೊಂಡಿದ್ದನ್ನೇ ಮೊಬೈಲ್ ಕ್ಯಾಮರಾ ಬಳಸಿ ಚಿತ್ರೀಕರಿಸಲಾಗಿದೆ. ಅನೇಕರು ಭಾವಿಸಿದಂತೆ ಅದು ಹೊಸಪೇಟೆಯ ಫಾರೆಸ್ಟ್ ಗೆಸ್ಟ್‌ಹೌಸಿನಲ್ಲಿ ಚಿತ್ರೀಕರಿಸಿದ ಸೀಡಿಯಲ್ಲ. ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಹೋಟೆಲಿನ ಗಣಿ ಧೈತ್ಯ ರಾಹುಲ್ ಬಲ್ಡೋಟನ ಕೋಣೆಯಲ್ಲಿ ಚಿತ್ರೀಕರಿಸಿದ್ದು. ಚೆನ್ನಿಗಪ್ಪ ಮಂತ್ರಿಯಾದ ಹೊಸತರಲ್ಲಿ ದೇವೇಗೌಡರ ಫ್ಯಾಮಿಲಿ ವಿರುದ್ಧ ಕಂಡಕಂಡಲ್ಲಿ ಕಿಡಿಕಾರುತ್ತಿದ್ದ. ಅದಕ್ಕೆ ಕಾರಣಗಳಿದ್ದವು. ಅರಣ್ಯ ಇಲಾಖೆಗೆ ಸೇರಿದ ಏಳುನೂರೈವತ್ತು ಎಕರೆ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಆ ಹೊತ್ತಿಗಾಗಲೇ ಚೆನ್ನಿಗಪ್ಪನ ಗಮನಕ್ಕೆ ಬಂದಿತ್ತು.

ಪ್ರಾರಂಭದಲ್ಲಿ ಬಳ್ಳಾರಿಗೆ ಬಂದು ಸಾಕಷ್ಟು ಟೈಟ್ ಮಾಡಿ ಹೋಗಿದ್ದ ಚೆನ್ನಿಗಪ್ಪ, ಯಾವತ್ತು ಕಳ್ಳ ಗಣಿಗಾರಿಕೆ ಟೈಟ್ ಆಗಿ ಒಬ್ಬೊಬ್ಬರೇ ಅದಿರುಗಳ್ಳರು ಮಂತ್ರಿ ಚೆನ್ನಿಗಪ್ಪನ ಸುತ್ತ ಹಲ್ಲುಗಿಂಜತೊಡಗಿದರೋ ಅದಕ್ಕೆ ತಕ್ಕಂತೆ ಗೌಡರ ಮಕ್ಕಳಾದ ಡಾ. ರಮೇಶ್ ಮತ್ತು ಬಾಲಕೃಷ್ಣೇಗೌಡರ ಮೈನ್ಸ್ ಧಂದೆಗೆ ಹುರುಪು ಸಿಕ್ಕಿದೆ. ಪೋದ್ದಾರ್ ಕದ್ದು ಸಾಗಿಸುತ್ತಿದ್ದ ಏಳೂವರೆ ಕೋಟಿ ರೂಪಾಯಿಗಳ ಮೊತ್ತದ ಅದಿರನ್ನು ಅಧಿಕಾರಿಗಳನ್ನು ಬಿಟ್ಟು ಚೆನ್ನಿಗಪ್ಪನೇ ಜಪ್ತಿ ಮಾಡಿಕೊಂಡರೆ, ಅದಷ್ಟನ್ನೂ ಡಾ. ರಮೇಶ್ ತಮ್ಮ ಬಿಎಸ್‌ಕೆ ಕಂಪನಿಗೆಂದು ಹೊತ್ತೊಯ್ದರು. ಅಧಿಕಾರಿಗಳು ಜಪ್ತಿ ಮಾಡಿದ ಅದಿರನ್ನು ಕಾನೂನು ಪ್ರಕಾರ ಹರಾಜು ಕೂಗಬೇಕು. ಬಂದ ದುಡ್ಡನ್ನು ಬೊಕ್ಕಸಕ್ಕೆ ಕಟ್ಟಬೇಕು. ಆದರೆ ರಮೇಶ್ ಅಣ್ಣ ಬಾಲಕೃಷ್ಣೇಗೌಡನಿಂದ ಚೆನ್ನಿಗಪ್ಪನಿಗೆ ರೋಪು ಹಾಕಿಸಿ ಪೋದ್ದಾರ್‌ನಿಂದ ಜಪ್ತಾಗಿದ್ದ ಸರಿಸುಮಾರು ಐದೂವರೆ ಲಕ್ಷ ಟನ್ ಅದಿರನ್ನು ದುಂಡಾವರ್ತಿಯಿಂದ ಸಾಗಿಸಿಬಿಟ್ಟಿದ್ದ.

ಯಾವ ತನಿಖೆಯಾದರೂ ಇದು ಚೆನ್ನಿಗಪ್ಪನ ತಲೆಗೇ ಬರುತ್ತಿತ್ತು. ತನಗೆ ನಯಾಪೈಸೆ ಕೊಡದೇ ಏಳೂವರೆ ಕೋಟಿ ರೂಪಾಯಿಗಳಷ್ಟು ಮೊತ್ತದ ಸರ್ಕಾರಿ ಅದಿರನ್ನು

ರಾ. ಸೋಮನಾಥ್

ದೋಚಿದ್ದೂ ಅಲ್ಲದೇ ಅಣ್ಣನಿಂದ ವಾಚಾಮಗೋಚರ ಬಯ್ಯಿಸಿದ ರಮೇಶ್ ಮೇಲೆ ಚೆನ್ನಿಗಪ್ಪನಿಗೆ ಸಿಟ್ಟಿತ್ತು. ಸಾಲದ್ದಕ್ಕೆ ಅರಣ್ಯ ಭೂಮಿಯಲ್ಲಿ ದೋಚಿದ ಅದಿರನ್ನೆಲ್ಲ ಗೌಡರ ಮಕ್ಕಳೇ ಖರೀದಿಸುತ್ತಿದ್ದದ್ದು, ಅಂಥ ಅದಿರುಗಳ್ಳರ ಪರವಾಗಿ ಬಾಲಕೃಷ್ಣೇಗೌಡರು ಪದೇಪದೇ ಚೆನ್ನಿಗಪ್ಪನಿಗೆ ಧಮಕಿ ಹಾಕುತ್ತಿದ್ದದ್ದು ಚೆನ್ನಿಗಪ್ಪನ ಅಸಹನೆಗೆ ಕಾರಣವಾಗಿತ್ತು.

ಅದಿರು ಕದಿಯುತ್ತಿದ್ದವರೆಲ್ಲ ನೇರವಾಗಿ ಬಾಲಕೃಷ್ಣೇಗೌಡರನ್ನು ಕಂಡು ಡೀಲು ಕುದುರಿಸುವುದಕ್ಕಿಳಿದಾಗಲೇ ಚೆನ್ನಿಗಪ್ಪನ ಪಿತ್ಥ ನೆತ್ತಿಗೇರಿದ್ದು. ಇದನ್ನೇ ಪ್ಲಾನ್ ಮಾಡಿದ ಕೆ.ಸಿ. ಕೊಂಡಯ್ಯ ಮತ್ತು ಜನಾರ್ಧನರೆಡ್ಡಿ ಉಪಾಯವಾಗಿ ಗಣಿ ಧೈತ್ಯ ರಾಹುಲ್ ಬಲ್ಡೋಟನನ್ನು ಚೆನ್ನಿಗಪ್ಪನ ಬಳಿ ಕಳಿಸಿದ್ದಾರೆ. ಅದಕ್ಕೂ ಮುನ್ನ ಡಾ. ರಮೇಶ್ ಮತ್ತು ಬಾಲಕೃಷ್ಣೇಗೌಡರ ಬಳಿ ಇನ್ನಷ್ಟು ಮಂದಿ ಅದಿರುಗಳ್ಳರನ್ನು ಕಳಿಸಿದ್ದಾರೆ. ಅವರು ಮಾತಾಡಿದ್ದು ಡಾ. ರಮೇಶ್ ಬಾಚಿಕೊಂಡಿದ್ದು ಎಲ್ಲವೂ ಟೇಪಾಗಿದೆ. ಈ ಮಧ್ಯೆ ರಾಹುಲ್ ಬಲ್ಡೋಟ ಚೆನ್ನಿಗಪ್ಪನನ್ನು ತನ್ನ ವಿಂಡ್ಸರ್ ಮೇನರ್ ಕೋಣೆಗೆ ಊಟಕ್ಕೆ ಕರೆದಿದ್ದಾನೆ.

ಪತ್ರಿಕೆಗಳಿಗೆ ಪೊಳ್ಳು ಜಾಹೀರಾತಿನ ಮೃಷ್ಟಾನ್ನ

ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗಲೂ ಪತ್ರಿಕೆಗಳಿಗೆ ಈ ಪಾಟಿ ಸರ್ಕಾರಿ ಜಾಹೀರಾತು ಸಿಕ್ಕಿರಲಿಕ್ಕಿಲ್ಲ. ಇದೇ ಸೆಪ್ಟೆಂಬರ್ ಮೂರರಿಂದ ಇವತ್ತಿನ ತನಕ ಅಂದರೆ 2006 ರ ಸೆಪ್ಟೆಂಬರ್ ಹದಿನೇಳರ ವರೆಗೆ ವಾರ್ತಾ ಇಲಾಖೆಯ ಮೂಲಕ ಪತ್ರಿಕೆಗಳಿಗೆಂದು ಇಪ್ಪತ್ತೆಂಟು ಕೋಟಿ ರೂಪಾಯಿಗಳಷ್ಟು ಸರ್ಕಾರಿ ಜಾಹೀರಾತು ಬಿಡುಗಡೆಯಾಗಿದೆ.

ಪತ್ರಿಕೆಗಳಿಗೆ ಹಬ್ಬವೋ ಹಬ್ಬ. ಯಡ್ಡಿ-ಕುಮಾರ್ ಕೈ ಕೈ ಹಿಡಿದು ನಿಂತ ಇಂಥ ಜಾಹೀರಾತುಗಳಾದರೂ ಎಂಥವು? ಕೇವಲ ಇನ್ನೂರು ದಿನಗಳೊಳಗೆ ಸ್ವರ್ಗವನ್ನೇ ಭೂಮಿಗಿಳಿಸಿದಂತೆ ರೈಲು ಬಿಟ್ಟಿದೆ ಸರ್ಕಾರ. 29 ನೀರಾವರಿ ಯೋಜನೆಗಳಿಗೆಂದು 998 ಕೋಟಿ ಬಿಡುಗಡೆ. ಸಣ್ಣ ನೀರಾವರಿಗೆಂದು ಮತ್ತೆ 672 ಕೋಟಿ. ಭದ್ರ-ತುಂಗಾ ಕಾಲುವೆಗಳ ನವೀಕರಣಕ್ಕೆ 94 ಕೋಟಿ!

ಇದು ಸೆಪ್ಟೆಂಬರ್ ಐದರಂದು ಬಿಡುಗಡೆಯಾದ ಅರ್ಧಪುಟದ ಬಣ್ಣದ ಜಾಹೀರಾತು. ವಿಜಯ ಕರ್ನಾಟಕದಲ್ಲಿ ಕಾಲಂ ಸೆಂಟಿಮೀಟರ್‌ಗೆ ಸಾವಿರದ ಇಪ್ಪತ್ತು ರೂಪಾಯಿಯಂತೆ ಲೆಕ್ಕ ಹಾಕಿದರೂ ಅದು ನಾಲ್ಕು ಲಕ್ಷದ ಎಂಟುಸಾವಿರ ರೂಪಾಯಿಯಾಗುತ್ತದೆ. ಟೈಮ್ಸ್ ಆಫ್ ಇಂಡಿಯಾ ಒಂದಕ್ಕೆ ಮೂರು ಲಕ್ಷದ 84 ಸಾವಿರ ರೂಪಾಯಿಗಳು ಇಂದೊಂದೇ ಜಾಹೀರಾತಿನಿಂದ ಗಿಟ್ಟುತ್ತದೆ.

ಇದು ಆರಂಭ. ಅದರ ಮರುದಿನವೇ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ತಲಾ ಎರಡು ಲಕ್ಷದ ಜಾಹೀರಾತು. ಸೆಪ್ಟೆಂಬರ್ 8 ರಂದು ಅಂತರರಾಷ್ಟ್ರೀಯ ಸಾಕ್ಷರತಾ ದಿನದ ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಅರ್ಧಪುಟದ ಮತ್ತೊಂದು ಬಣ್ಣದ ಜಾಹೀರಾತು. ಅಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ 4359 ಕೋಟಿ, ಗ್ರಾಮ ಪಂಚಾಯ್ತಿಗಳಿಗೆ 2131 ಕೋಟಿ, ಹಿಂದುಳಿದ ತಾಲ್ಲೂಕುಗಳಿಗೆ 510 ಕೋಟಿ ಇತ್ಯಾದಿ ಕಾಲ್ಪನಿಕ ಸಾಧನೆಯನ್ನು ಘೋಷಿಸಲಾಗಿದೆ. ಪತ್ರಿಕೆಯೊಂದಕ್ಕೆ ಇಂಥ ತಲಾ ಜಾಹೀರಾತೊಂದರ ಬೆಲೆ ಕೇವಲ ಎರಡೂವರೆ ಲಕ್ಷ ಮಾತ್ರ. ಇದರ ಮರುದಿನವೇ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ತಲಾ ನಾಲ್ಕು ಲಕ್ಷದ ಅರ್ಧಪುಟದ ಮತ್ತೊಂದು ಬಣ್ಣದ ಜಾಹೀರಾತು ಮಂಜೂರಾಗುತ್ತದೆ. ಸೆಪ್ಟೆಂಬರ್ 11 ರಂದು ಸರ್ವಶಿಕ್ಷಣ ಅಭಿಯಾನಕ್ಕೆ 742 ಕೋಟಿ ಕೊಟ್ಟ ಬಗ್ಗೆ ಶಿಕ್ಷಣ ಇಲಾಖೆಯ ಅರ್ಧಪುಟ. ಅದರ ಮರುದಿನವೇ ಕೈಗಾರಿಕಾ ಇಲಾಖೆಯ ಕಾಲು ಮುಖಪುಟ. ಸೆಪ್ಟೆಂಬರ್ 13 ಕ್ಕೆ ಸಮಾಜ ಕಲ್ಯಾಣಕ್ಕೆಂದು 2 ಸಾವಿರ ಕೊಟ್ಟು ಇನ್ನರ್ಧ ಪುಟ. ಸೆಪ್ಟೆಂಬರ್ 14 ಕ್ಕೆ ಮತ್ತೆ ಅರ್ಧ ಪುಟ. ಸೆಪ್ಟೆಂಬರ್ 15 ಕ್ಕೆ ಕೃಷಿ ಸಾಲವೆಂದು 1776 ಕೋಟಿ ಮಂಜೂರಾದ ಅರ್ಧ ಪುಟ ಮತ್ತು ಸೆ. 17 ರಂದ ಅಲ್ಪಸಂಖ್ಯಾತರ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಸೇರಿ ಕೊಟ್ಟ ಅರ್ಧ ಪುಟ.

ಹೀಗೆ ಬರೀ ಹದಿನೈದು ದಿನಗಳಲ್ಲಿ ತಲಾ ಪತ್ರಿಕೆಯೊಂದಕ್ಕೆ ಅರ್ಧ ಪುಟದಂತೆ ಸರಾಸರಿ ಐವತ್ತು ಲಕ್ಷ ರೂಪಾಯಿಗಳಷ್ಟು ಮೊತ್ತದ ಜಾಹೀರಾತು ಬಿಡುಗಡೆಯಾಗಿದೆ. ಪ್ರಜಾವಾಣಿಯಲ್ಲಿ ಕಾಲಂ ಸೆಂಟಿಮೀಟರ್‌ನ ಬೆಲೆ 800 ರೂಪಾಯಿಗಳಾದರೆ, ವಿಜಯ ಕರ್ನಾಟಕದಲ್ಲಿ 1020 ರೂಪಾಯಿಯಿದೆ. ಕನ್ನಡಪ್ರಭ 220, ಸಂಯುಕ್ತ ಕರ್ನಾಟಕ 360, ಟೈಮ್ಸ್ 960, ಡೆಕ್ಕನ್ ಹೇರಾಲ್ಡ್ 435, ಹಿಂದೂ 220, ವಿಜಯ ಟೈಮ್ಸ್ 335, ಇಂಡಿಯನ್ ಎಕ್ಸ್‌ಪ್ರೆಸ್ 220 ರೂಪಾಯಿಗಳಂತೆ ಕಾಲಂ ಸೆಂಟಿ ಮೀಟರ್ ಜಾಹೀರಾತಿಗೆ ದರ ವಿಧಿಸುತ್ತವೆ. ಮುಖಪುಟಕ್ಕೆ ಇನ್ನೂ 25% ಹೆಚ್ಚಿಗೆ ದರವಿದೆ. ಈ ಪ್ರಕಾರವೇ ಲೆಕ್ಕ ಹಾಕಿದರೆ ಕಳೆದ ಹದಿನೈದು ದಿನಗಳೊಳಗೆ ಸರ್ಕಾರದ

ಜಾಹೀರಾತು ಮೊತ್ತ:

ಪ್ರಜಾವಾಣಿ	68,00,000
ವಿಜಯ ಕರ್ನಾಟಕ	79,00,000
ಉಷಾ ಕಿರಣ	21,00,000
ಉದಯವಾಣಿ	26,00,000
ಕನ್ನಡಪ್ರಭ	15,00,000
ಸಂಯುಕ್ತ ಕರ್ನಾಟಕ	21,00,000
ಆಂದೋಲನ (ಮೈಸೂರು)	10,80,000
ಪ್ರಜಾಪ್ರಗತಿ (ತುಮಕೂರು)	6,00,000
ಟೈಮ್ಸ್ ಆಫ್ ಇಂಡಿಯಾ	57,60,000
ಡೆಕ್ಕನ್ ಹೇರಾಲ್ಡ್	30,00,000
ಇಂಡಿಯನ್ ಎಕ್ಸ್‌ಪ್ರೆಸ್	15,00,000
ವಿಜಯ್ ಟೈಮ್ಸ್	22,00,000
ದಿ ಹಿಂದೂ	22,00,000
ನಾವಿಕ (ಶಿವಮೊಗ್ಗ)	6,00,000

ಇದರ ಹೊರತಾಗಿ ಬಹುತೇಕ ಜಿಲ್ಲಾ ಪತ್ರಿಕೆಗ[illegible]ಗಳು ಮತ್ತು ರಾಷ್ಟ್ರಮಟ್ಟದ ಪತ್ರಿಕೆಗಳಿಗೆಂದು ವಾರ್ತಾ ಇಲಾಖೆಯಿಂದ ಮಂಜೂರಾದ ಒಟ್ಟೂ ಮೊತ್ತ ಇಪ್ಪತ್ತೆಂಟು ಕೋಟಿ. ದುರಂತವೆಂದರೆ ಇಂಥ ಜಾಹೀರಾತನ್ನು ಯಥಾವತ್ತಾಗಿ ಪ್ರಕಟಿಸಿದ ಯಾವುದೇ ಪತ್ರಿಕೆ ಅದರ ಸತ್ಯಾಸತ್ಯತೆಗೆ ಯಾವುದೇ ಗ್ಯಾರಂಟಿ ಕೊಟ್ಟಿಲ್ಲ. ತಮಗೂ ಇದಕ್ಕೂ ಸಂಬಂಧವಿಲ್ಲವೆಂಬ ಸಣ್ಣದೊಂದು ಟಿಪ್ಪಣಿ ಕೂಡ ಜಾಹೀರಾತಿನ ಜೊತೆಗಿಲ್ಲ.

ಇನ್ನು ಚೆನ್ನಿಗಪ್ಪನ ಸೀಡಿ ಕುರಿತು ಇನ್ನೆಂಥಾ ತನಿಖೆ ಸಾಧ್ಯ?

ಮಹಾ ಮನಸ್ಸುಗಳಿಗೆ ಉದ್ದೇಶಗಳಿದ್ದರೆ, ಸಾಧಾರಣರಿಗೆ ಆಶಯಗಳಿರುತ್ತವೆ -ವಾಷಿಂಗ್ಟನ್ ಇರ್ವಿಂಗ್

ಮುಂದಿನ ಸೀಡಿಯಲ್ಲಿ ಡಾ. ರಮೇಶ್?

ಈ ಥರದ ಸೀಡಿಯೊಂದು ರೆಡ್ಡಿಯ ಬಳಿ ಇದೆ ಎಂದು ತುಂಬಾ ಹಿಂದೆಯೇ ವದಂತಿಯಿತ್ತು. ರೆಡ್ಡಿ ನೂರೈವತ್ತು ಕೋಟಿ ಲಂಚದ ಆರೋಪ ಹೊರಿಸಿದಾಗಲೇ ಆತನ ಬಳಿ ಡಾ. ರಮೇಶ್ ಮತ್ತು ಬಾಲಕೃಷ್ಣೇಗೌಡರು ನೋಟಿನ ಕಂತೆಗಳನ್ನು ಸಾಗಿಸುತ್ತಿರುವುದು, ಮಂತ್ರಿ ಚೆನ್ನಿಗಪ್ಪ ದುಡ್ಡು ಬಾಚಿಕೊಳ್ಳುತ್ತಿರುವುದು ಮತ್ತು ಕುಡಿದು ಚಿತ್ತಾಗಿ ಗೌಡರನ್ನೂ ಅವರ ಮಕ್ಕಳನ್ನೂ ವಾಚಾಮಗೋಚರವಾಗಿ ಬೈಯುತ್ತಿದ್ದವನ್ನು ಚಿತ್ರೀಕರಿಸಿದ್ದಾರೆ ಎಂದು ಗುಲ್ಲೆದ್ದಿತ್ತು.

ನೋಟಿನ ಕಂತೆ ಮುಂದೆ ಕೂತ ಚೆನ್ನಿಗಪ್ಪನ ಚಿತ್ರದ ಸತ್ಯಾಸತ್ಯತೆ ಬಗ್ಗೆ ಅನುಮಾನವಿದ್ದರೂ ಕುಡಿದು ಚಿತ್ತಾಗಿ ಗೌಡರ ಫ್ಯಾಮಿಲಿಯನ್ನು ಬಯ್ಯುತ್ತಿರುವುದಂತೂ ಸತ್ಯವಾಗಿದೆ. ಹಾಗಾದರೆ ಡಾ. ರಮೇಶ್ ಮತ್ತು ಬಾಲಕೃಷ್ಣೇಗೌಡರು ಸೇರಿಕೊಂಡು ನೋಟಿನ ಕಂತೆಗಳನ್ನು ಸಾಗಿಸುತ್ತಿರುವ ಇನ್ನೂ ಒಂದು ಸೀಡಿ ರೆಡ್ಡಿ ಬಳಿ ಇದೆಯೇ?

ಅಲ್ಲಿ ಕಂಠಮಟ್ಟ ಕುಡಿದು ಚೆನ್ನಿಗಪ್ಪ ಹಳ್ಳಕ್ಕೆ ಬಿದ್ದಿದ್ದಾನೆ.

ಆವತ್ತು ಕುಡಿದು ಚಿತ್ತಾಗಿ ಚೆನ್ನಿಗಪ್ಪ ಬೈದಿದ್ದು ಗೌಡರ ಮಕ್ಕಳನ್ನು. ಆತನ ಬಾಯಲ್ಲಿ ಏಳುನೂರೈವತ್ತು ಹೆಕ್ಟೇರ್ ಎಂಬುದು ಏಳುನೂರೈವತ್ತು ಎಕರೆಯಾಗಿದೆ. 'ಈ ನನ್ ಮಕ್ಳು ಕೇಳಿದ್ರು ಅಂತ ನನ್ನಮ್ಮನ್ ತಂದು ಅಡಾ ಇಕ್ಲಾ? ಅಮ್ಮನ್ ಯಾರಪ್ಪಂದು? ಈ ನನ್ ಮಕ್ಳ ಥರ ನಾನು ತಾಯಿ ಲಾಡಿ ಬಿಚ್ಚೋ ಕೆಲ್ಸ ಮಾಡಿಲ್ಲ. .....ಮ್ಮನ್ ಮೂರೂವರೆ ಕೋಟಿ ಕೊಡೋಕೇ ಬರ್ತಾನೆ?' ಇತ್ಯಾದಿ ಚೆನ್ನಿಗಪ್ಪನ ಬಾಯಿಂದ ಬಂದ ಬಯ್ಗುಳಕ್ಕೂ ಬಳ್ಳಾರಿಯ ಇನ್ನೊಬ್ಬ ಅದಿರುಗಳ್ಳ ಕುಮಾರಸ್ವಾಮಿಗೂ ಏನೇನೂ ಸಂಬಂಧವಿಲ್ಲ.

ಈ ಕುಮಾರಸ್ವಾಮಿಗೆ ಸಂಡೂರು ಮತ್ತು ಹೊಸಪೇಟೆಯಲ್ಲಿ ಕ್ವಾರಿಗಳಿವೆ. ಆದರೆ ಮೋದಿ, ಬಲ್ಡೋಟ, ಸವಿಯಪ್ಪ, ಸಂತೋಷ್ ಲಾಡ್, ಅನಿಲ್ ಲಾಡ್, ದೀಪಕ್ ಸಿಂಗ್‌ಗಳಿಗೆ ಹೋಲಿಸಿದರೆ ಈತ ಏನೇನೂ ಅಲ್ಲ. ಬಳ್ಳಾರಿಯ ಇಡೀ ಮೈನ್ಸ್ ಜಾಲವನ್ನು ಬಲ್ಲವರೇ ಹೇಳುವಂತೆ ಈತ ಯಾವತ್ತೂ ಚೆನ್ನಿಗಪ್ಪನನ್ನು ಭೇಟಿಯಾಗಿಲ್ಲ. ಮುಖ್ಯಮಂತ್ರಿಗಳಿಗೆ ಅಂತ ಗಣಿ ಖದೀಮರಿಂದ ಕಲೆಕ್ಷನ್‌ಗೆ ಇಳಿದದ್ದು ಪೋದ್ದಾರ್ ಮತ್ತು ಅನಿಲ್ ಲಾಡ್ ಇವರಿಬ್ಬರ ಹೊರತಾಗಿ ಚೆನ್ನಿಗಪ್ಪನ ಜೊತೆ ವ್ಯವಹಾರಕ್ಕಿಳಿದವನು ಬಲ್ಡೋಟ. ಆತ ಇಪ್ಪತ್ತೈದು ಕೋಟಿ ಕಲೆಕ್ಟ್ ಮಾಡಿ ಕೊಡುತ್ತೇನೆಂದು ಪ್ರಾಮಿಸ್ ಮಾಡಿದ್ದನೆ? ಮೊದಲ ಕಂತಾಗಿ ಮೂರೂವರೆ ಕೋಟಿ ಕೊಟ್ಟಿದ್ದನೆ? ಎರಡನೇ ಬಾರಿ ಐದು ಕೋಟಿ ಕೊಟ್ಟಾಗ ಉಳಿದ ಹದಿನೇಳು ಕೋಟಿ ಎಲ್ಲಿ? ಎಂದು ಚೆನ್ನಿಗಪ್ಪ ಕೇಳಿರಬಹುದೇ?

ಅಥವಾ ಗಣಿ ಮಾಲೀಕರಿಂದ ಎತ್ತಿದ ದುಡ್ಡಿನಲ್ಲಿ ತನಗೆ ಬರೇ ಮೂರೂವರೆ ಕೋಟಿ ಕೊಟ್ಟಿದ್ದಕ್ಕೆ ಮುಖ್ಯಮಂತ್ರಿ ಕುಮಾರಸ್ವಾಮಿಯ ಮೇಲೆ ಸಿಟ್ಟೆ? ಇಲ್ಲಿ ಎರಡನೇ ಸಾಧ್ಯತೆಯೇ ಹೆಚ್ಚು. ಎಲ್ಲವನ್ನೂ ಗೌಡರ ಮಕ್ಕಳೇ ಮುಕ್ಕಿ ಅದನ್ನು ತನ್ನ ಬಾಯಿಗೆ ಒರೆಸಿದ್ದಕ್ಕೆ ಚೆನ್ನಿಗಪ್ಪನಿಗೆ ಸಿಟ್ಟಿದೆ. ಅದನ್ನು ಕಲೆಕ್ಷನ್ ಜವಾಬ್ದಾರಿ ಹೊತ್ತುಕೊಂಡ ಬಲ್ಡೋಟನ ಮುಂದೆ ಕಕ್ಕಿದ್ದಾನೆ. ಅದನ್ನು [illegible] ಕ್ಯಾಮರಾ ಚಿತ್ರೀಕರಿಸಿದೆ.

ಮೊಬೈಲ್ ಕ್ಯಾಮರಾದಲ್ಲಿ ಧ್ವನಿ ಸ್ಪಷ್ಟವಾಗಿ ದಾಖಲಾಗುವುದಿಲ್ಲ. ಪಕ್ಕದಲ್ಲಿದ್ದ ಕನ್ನಡಿಯಲ್ಲಿ ಪ್ರತಿಫಲಿಸಿದ್ದನ್ನೇ [illegible] ಸೆರೆಹಿಡಿದಿದೆಯಾದ್ದರಿಂದ ವೀಡಿಯೋ ಕೊಂಚ [illegible]ವಾಗಿದೆ. ಆ ಕಾರಣಕ್ಕೇ ಚೆನ್ನಿಗಪ್ಪ ಬಲಗೈಗೆ [illegible] ಕಟ್ಟಿದಂತೆ, ಅಂಗಿಯ ಜೇಬು ಬಲಕ್ಕಿದ್ದಂತೆ, [illegible] ಬಲಕ್ಕೆ ತೆಗೆಯುತ್ತಿದ್ದ ತಲೆ ಕೂದಲು ಎಡಕ್ಕಿದ್ದಂತೆ [illegible]ತ್ತದೆ.

[illegible]

ಪತ್ರಿಕೆಗಳಲ್ಲಿ ಆರೆಬರೆ ಸುದ್ದಿ, ಕೋ-ಜಾಗಳ ಜಾಹೀರಾತು ಲದ್ದಿ

ಕೆಲವು ಕನ್ನಡ ದಿನಪತ್ರಿಕೆಗಳು ದುಡ್ಡು ಸಿಗುತ್ತದೆ ಎಂದಾದರೆ ಯಾವ ಲೋ-ಲೆವೆಲ್‌ಗಾದರೂ ಹೋಗಲು ರೆಡಿ ಇದ್ದಾರೆ ಎನ್ನಲು ಚೆನ್ನಿಗಪ್ಪನ ಗಣಿ ಲಂಚದ ಸೀಡಿ ಕುರಿತಾದ ಪತ್ರಿಕಾ ವರದಿಗಳೇ ಸಾಕ್ಷಿಯಾಗಿವೆ.

ಬಿಜೆಪಿ ಹಾಗೂ ಜೆಡಿಎಸ್‌ನ ಸಮ್ಮಿಶ್ರ ಕೋ-ಜಾ ಸರ್ಕಾರ ಜನಿಸಿ ಈಗ 200 ದಿನಗಳಾಗಿವೆ ಎಂದು ಹೇಳಿಕೊಂಡು ಎಲ್ಲಾ ಕನ್ನಡ ದಿನಪತ್ರಿಕೆಗಳಲ್ಲೂ ಪ್ರತಿದಿನ ಪುಟಗಟ್ಟಲೆ ಜಾಹೀರಾತುಗಳನ್ನು ಸರ್ಕಾರ ಕೊಡುತ್ತಿದೆ. ಇದಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿದೆ.


ಪ್ರಧಾನವಾಗಿ ಈ ಜಾಹಿರಾತುಗಳ ಪ್ರವಾಹವು ಸೆಪ್ಟೆಂಬರ್ 11 ನೇ ತಾರೀಖಿನಿಂದಾಚೆಗೆ ಶುರುವಾಗಿದೆ ಮತ್ತು ಈಗಲೂ ಮುಂದುವರೆಯುತ್ತಲೇ ಇದೆ. ಆದರೆ ಕುಮಾರಸ್ವಾಮಿ-ಯಡ್ಡಿ ನೇತೃತ್ವದ ಈ ಕಡುಭ್ರಷ್ಟ ಕೋ-ಜಾ ಸರ್ಕಾರ ರಚನೆಯಾಗಿದ್ದು 2006 ರ ಫೆಬ್ರವರಿ 3 ರಂದು. ಆ ಲೆಕ್ಕದಲ್ಲಿ ಈ ಸರ್ಕಾರ 200 ದಿನ ಮುಗಿಸಿದ್ದು ಆಗಸ್ಟ್ 22 ಕ್ಕೆ! ಆದರೆ ಈ 200 ನೇ ದಿನದ ಪತ್ರಿಕಾ ಜಾಹೀರಾತುಗಳು ಸೆಪ್ಟೆಂಬರ್ 11 ರಿಂದಾಚೆಗೆ ಪ್ರಕಟಗೊಳ್ಳಲು ಪ್ರಮುಖ ಕಾರಣವೇ ಜನಾರ್ಧನ ರೆಡ್ಡಿ ಬಳಿ ಇದ್ದ ಹಾಗೂ ಈಗ ಬಹಿರಂಗಗೊಂಡಿರುವ ಸಚಿವ ಚೆನ್ನಿಗಪ್ಪನ ಗಣಿ ಲಂಚದ ಸಿಡಿ ದಾಖಲೆಗಳೆಂದರೆ ತಪ್ಪಾಗಲಾರದು. ಜನರ ಗಮನ ಬೇರೆಡೆಗೆ ತಿರುಗಿಸುವ ಹಾಗೂ ಮೀಡಿಯಾಗಳಿಗೆ ಜಾಹೀರಾತು ಲದ್ದಿ ತಿನ್ನಿಸಿ ಜಾಸ್ತಿ ಬರೆಯದಂತೆ ತೆಪ್ಪಗಾಗಿಸುವ ಸೂಕ್ಷ್ಮ ಡೀಲ್ ಇದು.

ಕುಮಾರಸ್ವಾಮಿ ಹಾಗೂ ಯಡಿಯೂರಪ್ಪ ಪರಸ್ಪರ ಕೈಕೈ ಹಿಡಿದುಕೊಂಡಿರುವ ಫೋಟೋಗಳಿರುವ ಸಹಕಾರ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಕೈಗಾರಿಕಾ ಇಲಾಖೆಗಳ ಸಾಧನೆಗಳ ಪುಟಗಟ್ಟಲೆ ಜಾಹೀರಾತುಗಳು ಕಳೆದ ಒಂದು ವಾರದಲ್ಲಿ ಪ್ರಮುಖ ಕನ್ನಡ ಹಾಗೂ ಇಂಗ್ಲಿಷ್ ಡೈಲಿಗಳಲ್ಲಿ ಕಾಣಿಸಿಕೊಂಡಿವೆ.

ಈ 200 ದಿನಗಳಲ್ಲಿ ತಮ್ಮ ಸರ್ಕಾರದ ಸಾಧನೆ ಏನೆಂಬುದನ್ನು ಕೋ-ಜಾಗಳು ಹೇಳಿಕೊಂಡಿದ್ದಾರಾದರೂ ಅವುಗಳಲ್ಲಿ ಉತ್ಪ್ರೇಕ್ಷೆಯೇ ಜಾಸ್ತಿ ಇದೆ. ಉದಾಹರಣೆಗೆ ಸಹಕಾರ ಇಲಾಖೆ ಮೂಲಕ ಈ 6 ತಿಂಗಳಲ್ಲಿ ರೈತರಿಗೆ 1776 ಕೋಟಿ ರೂ. ಕೃಷಿ ಸಾಲವನ್ನೂ ವಿತರಿಸಲಾಗಿದೆ ಎನ್ನಲಾಗಿದೆ.

ಇದೊಂದು ಹಸೀ ಸುಳ್ಳು.

ಏಕೆಂದರೆ ಮಾರ್ಚಿನಲ್ಲಿ ಯಡ್ಡಿ ಮಂಡಿಸಿದ ಬಜೆಟ್‌ನಲ್ಲಿ ಕೃಷಿ ಸಾಲ ವಿತರಣೆಯ ಬಾಬ್ತಿಗೆಂದು ಮೀಸಲಾಗಿಟ್ಟಿದ್ದ ಮೊತ್ತ ಜುಜುಬಿ 400 ಕೋಟಿ ರೂ.ಗಳು ಮಾತ್ರ. ಸಮಾಜ ಕಲ್ಯಾಣ ಇಲಾಖೆ ಮೂಲಕ ಗಂಗಾ ಕಲ್ಯಾಣ ಯೋಜನೆಯಡಿ ದಲಿತರಿಗೆ ಎಂಟೂವರೆ ಸಾವಿರ ಬೋರ್‌ವೆಲ್ ಕೊರೆಸಿಕೊಡಲಾಗಿದೆ ಎಂದು ಕೋ-ಜಾಗಳು ಹೇಳಿಕೊಂಡಿದ್ದಾರೆ. ಇದೊಂದು ಅತೀ ಉತ್ಪ್ರೇಕ್ಷಿತ ಸಾಧನೆ. ಏಕೆಂದರೆ ಗಂಗಾ ಕಲ್ಯಾಣ ಯೋಜನೆಯು ಈಗಾಗಲೇ ಅರೆ ಜೀವವಾಗಿ ಕೊನೆಯುಸಿರೆಳೆಯುತ್ತಿರುವ ಸ್ಕೀಂ ಆಗಿದೆ. ಇನ್ನೂ ಶಿಕ್ಷಣ ಇಲಾಖೆ ಮೂಲಕ ರಾಜ್ಯಾದ್ಯಂತ ಶಾಲಾ ಬಾಲಕಿಯರಿಗೆ 1.75 ಲಕ್ಷ ಸೈಕಲ್



ವಿತರಿಸುವುದಾಗಿ ಶಭಾಸ್‌ಗಿರಿ ಕೊಟ್ಟುಕೊಂಡಿದ್ದಾರೆ. ಆದರೆ ಇದು ಗುರಿ ಮಾತ್ರ. ಇನ್ನೂ ಸಾಧಿಸಬೇಕಿರುವ ವಿಷಯ.

ಸರ್ಕಾರದ ಈ ಸುಳ್ಳು ಹಾಗೂ ಅತಿರಂಜಕ ಜಾಹೀರಾತುಗಳ ಕತೆ ಒಂದೆಡೆ ಇರಲಿ. ಈ ಜಾಹಿರಾತುಗಳ ಮೂಲಕ ಲಕ್ಷಾಂತರ ರೂಪಾಯಿ ಲಾಭ ಮಾಡಿಕೊಂಡ ದಿನಪತ್ರಿಕೆಗಳು ಚೆನ್ನಿಗಪ್ಪನ ಲಂಚದ ಸೀಡಿ ಹೊರಬಿದ್ದ ನಂತರ ಹೇಗೆ ವರ್ತಿಸಿವೆ ಎಂದು ಗಮನಿಸಿ ನೋಡಿ.

ಸೆಪ್ಟೆಂಬರ್ 13 ನೇ ತಾರೀಖು ಬಹಿರಂಗವಾದ ಸೀಡಿಯಲ್ಲಿ ಸಚಿವ ಚೆನ್ನಿಗಪ್ಪ ರಾಶಿ ರಾಶಿ ನೋಟಿನ ಕಂತೆಗಳ ಎದಿರು ಕುಳಿತಿರುವ ದೃಶ್ಯಗಳಿದ್ದವು.

ಇದಕ್ಕೆ 14.9.2006 ರಂದು ವಿಜಯ ಕರ್ನಾಟಕ 'ನೋಟಿನ ಕಟ್ಟು ಕತೆ' ಎಂದು ಭಂಡತನದ ಹೆಡ್ಡಿಂಗ್ ನೀಡಿದರೆ ಉಷಾ ಕಿರಣ ಕೂಡ ಅದೇ ರಾಗ ಹಾಡಿತು. ದುರಂತವೆಂದರೆ ಪ್ರಜಾವಾಣಿ ಸಹ 'ಆ ವ್ಯಕ್ತಿ ಚೆನ್ನಿಗಪ್ಪನಾ?' ಎಂದು ಅರೆಮನಸ್ಸಿನ ವರದಿ ಪ್ರಕಟಿಸಿತ್ತು.

ಅದರ ಮಾರನೆ ದಿನವೇ ಹೊರಬಿದ್ದ 3 ನೇ ಸಿಡಿಯಲ್ಲಿ ಚೆನ್ನಿಗಪ್ಪನು ಬರಿ ಹಲ್ಕಾ ಮಾತುಗಳಲ್ಲೇ ದೇವೇಗೌಡ, ಕುಮಾರಸ್ವಾಮಿ, ಅದ್ಕ ಅಕ್ಕ ಎಂದೆಲ್ಲಾ ಬೊಗಳಿದ್ದಾನೆ. ಲಂಚದ ದುಡ್ಡಿನ ವಿಚಾರದಲ್ಲಂತೂ ರಾಜಾರೋಷವಾಗೇ ಬಡಬಡಿಸಿದ್ದಾನೆ.

ದುರಂತವೆಂದರೆ ಕೋ-ಜಾ ಸರ್ಕಾರದಿಂದ ಯಥೇಚ್ಛ ಜಾಹೀರಾತುಗಳನ್ನು ಪಡೆಯುತ್ತಿದ್ದ ದಿನಪತ್ರಿಕೆಗಳು ಈ ಸೆನ್ಸೇಷನಲ್ ನ್ಯೂಸ್ ಅನ್ನೂ ದಮನಿಸಿ ತೇಲಿಸಿದಂತೆ ಬರೆದುಬಿಟ್ಟರು. ಅವತ್ತಿನ (15.9.06) ವಿಜಯ ಕರ್ನಾಟಕ ಈ ಲಂಚದ ಸೀಡಿ ಸುದ್ದಿಯನ್ನು ಸಣ್ಣ ಬಾಕ್ಸ್‌ನಲ್ಲಿ ಪ್ರಕಟಿಸಿ ದೂರದ ಜಾರ್ಖಂಡ್ ರಾಜಕೀಯವನ್ನು ಬ್ಯಾನರ್ ಹೆಡ್ಡಿಂಗ್ ಆಗಿ ಪ್ರಕಟಿಸಿತು. ಉಷಾಕಿರಣ ಸೀಡಿಯಲ್ಲಿರೋದು ನಕಲಿ ಚೆನ್ನಿಗಪ್ಪ ಎಂದೇ ಬರೆದು ಸರ್ಕಾರಕ್ಕೆ ತನ್ನ ಗುಲಾಮ ನಿಷ್ಠೆ ತೋರಿಸಿತು.

ಹಾಗೆ ಹೇಳಬೇಕೆಂದರೆ ಜಾಹೀರಾತು ಪಾಡಿಗೆ ಜಾಹೀರಾತು ಗಿಟ್ಟಿಸಿ ವಸ್ತುನಿಷ್ಠ ವರದಿ ಪ್ರಕಟಿಸಿದ್ದು ಕನ್ನಡಪ್ರಭ ಮಾತ್ರ. ಒಂದು ರೀತಿಯಲ್ಲಿ ವಿಜಯ್ ಟೈಮ್ಸ್ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್‌ಗಳು ಪತ್ರಿಕಾ ನೀತಿ ಸಂಹಿತೆ ದಾಟ ರಾಜಿಯಾಗಲಿಲ್ಲ. ಆದರೆ ಅತೀ ಚಿಲ್ಲರೆ ಜರ್ನಲಿಸಂ ಮಾಡಿದ್ದು ಟೈಮ್ಸ್ ಆಫ್ ಇಂಡಿಯಾ. ಇಡೀ ರಾಜ್ಯವನ್ನೇ ಅಲ್ಲೋಲ ಕಲ್ಲೋಲ ಮಾಡುತ್ತಿರುವ ಈ ಸಿಡಿ ಗಲಾಟೆ ಟೈಮ್ಸ್‌ನವರಿಗೆ ಕೇವಲ ಒಂದು ಬಾಕ್ಸ್ ಐಟಂ ಸುದ್ದಿಯಾಯಿತು ಮಾತ್ರ.

ಇದರ ಒಟ್ಟಾರೆ ಸಾರಾಂಶ ಇಷ್ಟೆ.

ಕರ್ನಾಟಕದ ಆಗು ಹೋಗುಗಳು, ನ್ಯಾಯ ಅನ್ಯಾಯಗಳ ವಿಶ್ಲೇಷಣೆಗಳು, ಇನ್ನು ಮುಂದೆ ಕನ್ನಡಿಗರಿಗೆ ಪತ್ರಿಕೆಗಳ ಮೂಲಕ ಸಂಪೂರ್ಣವಾಗಿ ದೊರೆಯುವುದಿಲ್ಲ.

ಒಬ್ಬ ಖದೀಮ, ಫೋರ್ಕಿ ಮನುಷ್ಯ ಮಂತ್ರಿಯಾಗಿ ಲಂಚದ ದುಡ್ಡಿನೆದಿರೇ ಕುಳಿತಿರುವ ದೃಶ್ಯಗಳನ್ನು ತಂದು ತೋರಿಸಿದರೂ ನಮ್ಮ ಪತ್ರಕರ್ತರು, 'ಚೆನ್ನಿಗಪ್ಪ ಬಲಗೈಗೆ ವಾಚ್ ಕಟ್ಟಲ್ಲ, ಶರ್ಟಿಗೆ ಎರಡು ಜೇಬು ಇರ್ತಿರಲಿಲ್ಲ' ಎಂದೆಲ್ಲಾ ಕಿರುಚಿಕೊಳ್ಳುತ್ತಿದ್ದಾರೆ. ಈ ಅವಿವೇಕಿಗಳಿಗೆ ಒಂದು ಸಣ್ಣ ಸೂಕ್ಷ್ಮತೆಯೂ ಇಲ್ಲದಂತಾಗಿದೆ. ಯಾಕೆಂದರೆ ಈ ಸಿಡಿ ಶೂಟ್ ಮಾಡಿರುವುದು ಎದುರಿಗೆ ಕನ್ನಡಿಯಲ್ಲಿ ಕಾಣುತ್ತಿದ್ದ ಚೆನ್ನಿಗಪ್ಪ ಮಿರರ್-ಇಮೇಜ್ ಅನ್ನು!

—ಈಶ

ರಿಫ್ಲೆಕ್ಷನ್ ಆಫ್ ಕರಪ್ಷನ್! ಅಂಗೈ ಹುಣ್ಣಿಗೆ ಕನ್ನಡಿ!

"ನಾನು ಬಲಗೈಗೆ ವಾಚ್ ಕಟ್ಟೋದೇ ಇಲ್ಲ...."

ಚೆನ್ನಿಗಪ್ಪ ಸೀಡಿಯಲ್ಲಿರುವುದೆಲ್ಲ ಸುಳ್ಳು ಎಂದು ಸಾಬೀತುಪಡಿಸಲು ತಿಣುಕಾಡುವ ಪರಿಯಿದು!

ನಿಜಕ್ಕೂ ಮೊಬೈಲ್ ಕ್ಯಾಮರಾ ಚೆನ್ನಿಗಪ್ಪನ ಮೇಲೆ ಫೋಕಸ್ ಮಾಡುವುದಿಲ್ಲ! ಅದು ಚೆನ್ನಿಗಪ್ಪನ ಪ್ರತಿಬಿಂಬದ ಮೇಲೆ ಫೋಕಸ್ ಮಾಡಿದೆ!! ಅದಕ್ಕೇ ಅಲ್ಲಿ ಚೆನ್ನಿಗಪ್ಪ ಬಲಗೈಗೆ ವಾಚು ಕಟ್ಟಿದಂತೆ ಕಾಣುತ್ತದೆ. ಚೆನ್ನಿಗಪ್ಪನೇನು ಅವರಪ್ಪ ಎಡಗೈಗೆ ವಾಚು ಕಟ್ಟಿದ್ದರೂ ಅದು ಬಲಗೈಗೆ ಕಟ್ಟಿದಂತೆ ಕಾಣುತ್ತದೆ! ಏಕೆಂದರೆ ಅದು ಕನ್ನಡಿ! ಅಲ್ಲಿ ಕಾಣುವುದು ಪ್ರತಿಬಿಂಬ....

ಚೆನ್ನಿಗಪ್ಪನ 'ಬಲಗೈಲಿ ವಾಚ್?' ಎಂಬ ಪ್ರಶ್ನೆ ಹಿಡಿದು ಹೊರಟರೆ, ಇನ್ನು ಹಲವಾರು ಪ್ರಶ್ನೆಗಳೆದ್ದು ಕೊನೆಗೆ ಚೆನ್ನಿಗಪ್ಪ ಹೀಗೆ ವಾದ ಮಾಡಬೇಕಾಗುತ್ತದೆ: "ನಾನೇನು ಲೆಫ್ಟ್ ಹ್ಯಾಂಡಾ? ರೊಡ್ಡನಾ? ಎಡಚನಾ?" ಎಂದು! ನೇರವಾಗಿ ಚೆನ್ನಿಗಪ್ಪನ ಮೇಲೆ ಕ್ಯಾಮರಾ ಫೋಕಸ್ ಮಾಡದೇ ಕನ್ನಡಿಯಲ್ಲಿನ ಬಿಂಬವನ್ನು ಶೂಟ್ ಮಾಡಿರುವುದರಿಂದ ಚೆನ್ನಿಗಪ್ಪ ಲೆಫ್ಟ್ ಹ್ಯಾಂಡ್ ಗಿರಾಕಿ ಎನಿಸಿಬಿಡುತ್ತದೆ. ಎಷ್ಟಾದರೂ ಅದು mirror image ಅಲ್ಲವೆ?

ಚೆನ್ನಿಗಪ್ಪ ಬಲಗೈಗೆ ವಾಚು ಕಟ್ಟುತ್ತಾರೆ. ಎಡಬದಿಗೆ ಬೈತಲೆ ತೆಗೆಯುತ್ತಾರೆ. ಬಲಗೈಗೊಂದು ಕೆಂಪುದಾರ ಕಟ್ಟುವುದೂ ಕಾಮನ್... ಹಾಗೆಯೇ ಬಲಗೈನ ಎರಡು ಬೆರಳುಗಳಿಗೆ [illegible] ಈ 'ಚೆನ್ನಿಗಪ್ಪ'ನಿಗೆ!

ಆದರೆ ಈಗ [illegible] ಅವರು ಚೆನ್ನಿಗಪ್ಪ [illegible]ವಲವೇ? ಎಡಗೈಗೆ ವಾಚು, ಬಲಬದಿಗೆ ಬೈತಲೆ, ಎಡಗೈಗೆ ಕೆಂಪುದಾರ, ಎಡಗೈ ಬೆರಳುಗಳಿಗೆ ಉಂಗುರಗಳು!!

[illegible]

ಶೂಟ್ ಮಾಡಿದ್ದಾರೆ ಎಂದು ಪ್ರೂವ್ ಮಾಡಲು!!

ಚೆನ್ನಿಗಪ್ಪ ಈ ಸಿಡಿಯಲ್ಲಿ ಎಡಚ (left-handed) ನಂತೆ ಕಾಣುವುದು ಇದೇ ಕಾರಣಕ್ಕೆ! ಟೈಟಾಗಿ ರೋಷದಿಂದ ಗೌಡರ ಫ್ಯಾಮಿಲಿ ವಿರುದ್ಧ ಬೈಗುಳಗಳ ಸುರಿಮಳೆ ಸುರಿಸುವಾಗ ಚೆನ್ನಿಗಪ್ಪನ ಅಂಗಚೇಷ್ಟೆ ನೋಡಬೇಕು ನೀವು. ಎಡಗೈಯನ್ನು ಎತ್ತುತ್ತ, ಎಡಗೈ ಹಿಂದೆ, ಮುಂದೆ ಮಾಡುತ್ತಾ ಎಗ್ಗಿಲ್ಲದೇ ಮಾತಾಡಿದ್ದು ಸಿಡಿಯಲ್ಲಿದೆ. ಇದರರ್ಥ ಚೆನ್ನಿಗಪ್ಪ ಎಂದಿನಂತೆ ಸಹಜವಾಗಿ ಬಲಗೈ (right hand) ಎತ್ತಿ ಮಾತಾಡಿದ್ದಾರೆ! ಅಂದಂತೆ ಚೆನ್ನಿಗಪ್ಪ ಯಾವ ಕೈಲಿ ಬರೆಯೋದು? ಬಲಗೈಲಿ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಸಿಡಿಯಲ್ಲಿ ಅವರು ಒಂದು ಕೈಯಿಂದ ಇನ್ನೊಂದು ಕೈಯ ಹಸ್ತದ ಮೇಲೆ ಏನೋ ಬರದಂತೆ action ಮಾಡುತ್ತಾರೆ... ಕನ್ನಡಿಯಲ್ಲಿ ಅದು ಎಡಗೈಯಿಂದ ಬಲಗೈ ಹಸ್ತದ ಮೇಲೆ ಬರೆದಂತೆ ಗೋಚರವಾಗುತ್ತದೆ. ಚೆನ್ನಿಗಪ್ಪ ಏನೂ ಎಡಚ (ರೊಡ್ಡ)ನಲ್ಲ... ಅದು ಮಿರರ್ ಇಮೇಜ್ ಆಗಿದ್ದರಿಂದ left hand ನಿಂದ ಬರೆದಂತೆ ಕಾಣುತ್ತದೆ!!



ಆಗಿದಿಷ್ಟೇ... ಇಂದು ಚೆನ್ನಿಗಪ್ಪನ ಜೊತೆ ಕುಳಿತವರು [illegible]

ಶೂಟ್ ಮಾಡುವಾತನಿಗೆ ಅದು ನೇರವಾಗಿ ಕಾಣುವಂತಿರಬೇಕು.... ಅಷ್ಟು ಪರ್‌ಫೆಕ್ಟ್ ಆಗಿ ಸೀಟಿಂಗ್ ವ್ಯವಸ್ಥೆ ಮತ್ತು ಕನ್ನಡಿಯಿರುವ ಪೊಸಿಷನ್ ಮೊದಲೇ ಫಿಕ್ಸ್ ಆಗಿವೆ!

ಖಡ್ಡಾ ಪರ್‌ಫೆಕ್ಟ್ ರೆಡಿ ಇದೆ! ಟೈಟಾದ ಚೆನ್ನಿಗಪ್ಪ ಆವೇಶದಿಂದ, ನಾಲಿಗೆಯನ್ನು ಎತ್ತೆತ್ತಲೋ ಹರಿಬಿಟ್ಟು ಮಾತಾಡಿದ್ದಾರೆ... ಕನ್ನಡಿಯಲ್ಲಿನ ಚೆನ್ನಿಗಪ್ಪನ ಅವತಾರವನ್ನು ಮೊಬೈಲ್ ಕ್ಯಾಮರಾ ಸೆರೆಹಿಡಿಯುತ್ತಲೇ ಹೋಗಿದೆ...

ಚೆನ್ನಿಗಪ್ಪನ ಇನ್ನೊಂದು ವಾದ: "ನಾನು ಎಡಗಡೆ ಜೇಬು ಇರುವ ಶರ್ಟ್ ತೊಡುತ್ತೇನೆ. ಸೀಡಿಯಲ್ಲಿ ಎರಡು ಜೇಬು ಇರುವ ಶರ್ಟು ಇದೆ. ಅದಕ್ಕೇ ಇದು ನಕಲಿ...."

ಹಲೋ ಚೆನ್ನಿಗಪ್ಪ, ಸೀಡಿಯಲ್ಲಿ ಬಲಗಡೆ ಜೇಬು ಕಾಣುವುದು ನಿಜ! ಏಕೆಂದರೆ ಅದು ಕನ್ನಡಿಬಿಂಬ... ಆದರೆ ಅಲ್ಲಿ ಎಡಗಡೆ ಜೇಬು ಕಾಣುವುದಿಲ್ಲ! ಎರಡು ಜೇಬುಗಳಿರುವ ಶರ್ಟು ನೀವು ತೊಡುವುದಿಲ್ಲ, ಅವತ್ತೂ ತೊಟ್ಟಿಲ್ಲ.. ನಿಮ್ಮ ಜೇಬು ಎಡಕ್ಕೇ ಇದೆ... ಅದು ಕನ್ನಡಿಯಲ್ಲಿ ಬಲಕ್ಕೆ ಕಾಣುತ್ತೆ ಅಷ್ಟೇ! ಅಂಗೈ ಹುಣ್ಣಿಗೆ ಕನ್ನಡಿ ಬೇಕಾ ಎಂಬ ಮಾತಿದೆ. ಆದರಿಲ್ಲಿ ಗೌಡ ಫ್ಯಾಮಿಲಿ, ಚೆನ್ನಿಗಪ್ಪ ಎಂಬ ಹುಣ್ಣುಗಳನ್ನು ತೋರಿಸಲು ಕನ್ನಡಿಯೇ ಬೇಕಾಯ್ತು!! ಅಂದಂತೆ ಗೌಡರ ಫ್ಯಾಮಿಲಿ ಪಾಲಿಗೆ ಚೆನ್ನಿಗಪ್ಪ ಅಂಗೆ. ಹುಣ್ಣು! ಚೆನ್ನಿಗಪ್ಪನ ಪಾಲಿಗೆ ಗೌಡರ ಮಕ್ಕಳೇ ಅಂಗೈ ಹುಣ್ಣು.


Totally it is a reflection of corruption of this Government [illegible]

[illegible]

ಕುಬೇರಪ್ಪ & ಸನ್ಸ್!

'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರೀಲಿ ಆಸ್ತಿ ಖರೀದಿಸಿದನಂತೆ' ಎಂದು ಇದೀ ಶಿವಮೊಗ್ಗದ ಜನ ಇವತ್ತು ಮಂತ್ರಿ ಈಶ್ವರಪ್ಪ ಅಂಡ್ ಸನ್ಸ್ ಬಗ್ಗೆ ಗೇಲಿ ಮಾಡುತ್ತಿದ್ದಾರೆ.

ಈ ಮಾತು ಅಕ್ಷರಶಃ ಸತ್ಯ. ಹಾಲಿ ಕೋ-ಜಾ ಸರ್ಕಾರದ ಸಣ್ಣ ನೀರಾವರಿ ಸಚಿವ ಕೆ.ಎಸ್. ಈಶ್ವರಪ್ಪನ ಕುಟುಂಬದವರು ಬೆಂಗಳೂರಿನಲ್ಲಿ ದೇವೇಗೌಡರ ಕುಟುಂಬದವರು ಮಾಡುತ್ತಿರುವಂತೆಯೇ ಶಿವಮೊಗ್ಗಾದಲ್ಲಿ ಸಿಕ್ಕಸಿಕ್ಕ ಆಸ್ತಿಯನ್ನೆಲ್ಲಾ ಖರೀದಿಸುತ್ತಿದ್ದಾರೆ. ಮತ್ತೆ ಇವೆಲ್ಲಾ ಸಣ್ಣಪುಟ್ಟ ಡೀಲ್‌ಗಳಲ್ಲ. ಕೋಟ್ಯಂತರ ರೂಪಾಯಿಗಳ ಆಸ್ತಿಗಳು. ಒಂದು ಕಾಲದಲ್ಲಿ ಖಾಕಿ ಚಡ್ಡಿ ಹಾಕಿಕೊಂಡು ಹಿಂದೂತ್ವದ ಸೈಕಲ್ ಹೊಡೆಯುತ್ತಿದ್ದ ಈಶ್ವರಪ್ಪ ಇವತ್ತು ಕುಬೇರ. ಈತನ ಮಾತು ನಂಬಿ ಹಣೆಗೆ ಕುಂಕುಮ ಬಳಿದುಕೊಂಡು ಗಣೇಶನ ಗಲಾಟೆ, ಮುಸ್ಲಿಮರ ವಿರುದ್ಧ ಹೊಡೆದಾಟಕ್ಕೆ ಇಳಿಯುತ್ತಿದ್ದ ಕೆಳಜಾತಿ ಹುಡುಗರೆಲ್ಲಾ ಈಗಲೂ ಕೋರ್ಟು, ಪೊಲೀಸ್ ಸ್ಟೇಷನ್ನು ಎಂದು ಅಲೆಯುತ್ತಿದ್ದಾರೆ. ಆದರೆ ಈಶ್ವರಪ್ಪ ಅಂಡ್ ಸನ್ಸ್ ಮಾತ್ರ ಕದ್ದಿರುವ ಹಡಬೆ ದುಡ್ಡಿಟ್ಟುಕೊಂಡು ಸೈಟು, ಜಮೀನು, ಬಿಲ್ಡಿಂಗ್ ಖರೀದಿಗೆ ಶಿವಮೊಗ್ಗ ಸುತ್ತಾ ಬೇಟೆ ನಾಯಿಗಳಂತೆ ಗಸ್ತು ತಿರುಗುತ್ತಿದ್ದಾರೆ.


ಮಂತ್ರಿ ಈಶ್ವರಪ್ಪ

ಗಾಜನೂರು ... ಹೆಗಡೆ ... 1 ಕೋಟಿ


ಈಶ್ವರಪ್ಪನ ಲೇಟೆಸ್ಟ್ ಆಸ್ತಿ ಖರೀದಿ ಇದು. ಗಾಜನೂರಿನಲ್ಲಿ ಜಯರಾಂ ಹೆಗಡೆ ಎಂಬುವರ ಹತ್ತಿಕರೆ ಮಜಭೂತಾದ ಅಡಿಕೆ ತೋಟವನ್ನು ಇದೇ ಆಗಸ್ಟ್ ತಿಂಗಳಿನಲ್ಲಿ ಈಶ್ವರಪ್ಪ ಖರೀದಿಸಿದ್ದಾರೆ. ಈ ಆಸ್ತಿಯು ಬೆಲೆ ಕನಿಷ್ಠ ಒಂದು ಕೋಟಿ ರೂಪಾಯಿಗಳಾಗುತ್ತವೆ. ಈಗ್ಗೆ 2 ವರ್ಷಗಳ ಹಿಂದೆಯೇ ತೋಟ ಮಾರುವುದಾಗಿ ಟಾಂಟಾಂ ಹೊಡೆದುಕೊಂಡು ತಿರುಗಿದ್ದ ಹೆಗಡೆ ಅವತ್ತೇ ಒಂದು ಕೋಟಿ ರೂಪಾಯಿ ಬೆಲೆ ಹೇಳುತ್ತಿದ್ದರು. ಹಾಗಾಗಿ ಇವತ್ತು ಈಶ್ವರಪ್ಪ ಅದೇ ತೋಟಕ್ಕೆ ಒಂದೂ ಕಾಲು ಕೋಟಿ ಬಿಸಾಡಿದ್ದರೂ ಆಶ್ಚರ್ಯವಿಲ್ಲ ಎನ್ನುತ್ತಿದ್ದಾರೆ ಗಾಜನೂರಿನ ರೈತರು. ಇಷ್ಟು ದುಡ್ಡು ಜನಸೇವಕ, ಹಿಂದೂ ಹೋರಾಟಗಾರ ಈಶ್ವರಪ್ಪನಿಗೆ ಎಲ್ಲಿಂದ ಬಂತು?

ಶಿವಮೊಗ್ಗ

... ಮನೆ ...

ಉಂಡ ಮನೆ ಜಂತಿ ಎಣಿಸಲು ಹೋಗಿ ಇದೇ ಈಶ್ವರಪ್ಪ ಮುಖಭಂಗ ಅನುಭವಿಸಿದ ಪ್ರಸಂಗ ಇದು.

ಶಿವಮೊಗ್ಗದ ಅಡಿಕೆ ಮಂಡಿ ವ್ಯಾಪಾರಸ್ಥರ ಪೈಕಿ ಕೃಷ್ಣಶಾಸ್ತ್ರಿ ಅಂಡ್ ಕಂಪನಿ ಬಹಳ ಹಳೇ ಹೆಸರು. ದೊಡ್ಡ ವ್ಯಾಪಾರಸ್ಥ ಶ್ರೀಮಂತ ಕುಟುಂಬ ಅವರದು. ಒಂದು ಕಾಲದಲ್ಲಿ ಇದೇ ಈಶ್ವರಪ್ಪನ ತಾಯಿ ಕೃಷ್ಣಶಾಸ್ತ್ರಿಗಳ ಬಳಿ ಅಡಿಕೆ ಸುಲಿಯುವ ಕೂಲಿ ಕೆಲಸಕ್ಕೂ ಹೋಗುತ್ತಿದ್ದರು. ಇಂತಾ ಕೃಷ್ಣಶಾಸ್ತ್ರಿಗಳ ಹತ್ತಿರ ಇತ್ತೀಚೆಗೆ ಹೋಗಿದ್ದ ಈಶ್ವರಪ್ಪ ಬೃಂದಾವನ್ ಹೋಟೆಲ್ ಹತ್ತಿರ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಶಾಸ್ತ್ರಿಗಳ ಹಳೆಯ ದೊಡ್ಡ ಮನೆಯನ್ನು ಖರೀದಿಸುವುದಾಗಿ ಹೇಳಿದ್ದಾರೆ. ಆದರೆ ಮಾರುವ ದರ್ದು ಅಥವಾ ಹಣದ ಅಗತ್ಯ ಇರದಿದ್ದ ಶಾಸ್ತ್ರಿಗಳು ಈಶ್ವರಪ್ಪನ ಧನಮದ ಕಂಡು ಬೈಯ್ದು ಕಳಿಸಿದ್ದಾರೆ. "ನಮ್ಮ ಮನೆಗೆ ಕೂಲಿಗೆ ಬರುತ್ತಿದ್ದ ನಿಮಗೇ ಈಗ ನನ್ನ ಮನೆ ಮೇಲೆ ಕಣ್ಣುಬಿತ್ತಾ, ಅಷ್ಟು ದುಡ್ಡು ಎಲ್ಲಿಂದ ಬಂತು" ಎಂದೂ ಉಗಿದು ಕಳಿಸಿದರೆ ... ಸುದ್ದಿಗಳಿವೆ. ಪಾಪ ಆಯಕಟ್ಟಿನ ಜಾ... ದಲ್ಲಿದ್ದ ಆ ಕಟ್ಟಡ ಗುಳುಂ ಮಾಡ... ಲೆಕ್ಕಾಚಾರ ದಿಂದ ಹಣದ ಥೈಲಿ ಹಿಡಿ... ಹೋಗಿದ್ದ ಸಣ್ಣ ನೀರಾವರಿ ಸಚಿವ ಕೊ... ತಾನೇ ಬೆವರು ನೀರು ಒರೆಸಿಕೊಂ... ಹಿಂತಿರುಗಿದ್ದಾರೆ.


ಖಾದರ್ ಬಾಷಾ

ಸೋನಾ ಟವರ್ಸ್ ಖರೀದಿಯಾಯ್ತು

ಬಿ.ಎಚ್. ರಸ್ತೆಯಲ್ಲಿರುವ ಮೂರಂತ... ಸೋನಾ ಟವರ್ಸ್ ಕೆಂಪು ಕಟ್ಟಡವನ್ನು ಪಕ್ಕದ ಒಂ... ರಿಲಯನ್ಸ್ ಪೆಟ್ರೋಲ್ ಬಂಕ್ ಸಮೇತ ಈಶ್ವ... ನುಂಗಿ ನೀರು ಕುಡಿದಿರುವ ಸುದ್ದಿ ಈಗ ಶಿವಮೊ... ತುಂಬಾ ಹರಿದಾಡುತ್ತಿದೆ. ಈ ಆಸ್ತಿ ಖರೀದಿಯ ವಿಶೇ... ಏನೆಂದರೆ ಇದರ ಮಾಲೀಕರು ಒಂದು ಮು... ಕುಟುಂಬ. ಸೋನಾ ಗ್ರೂಪ್ ಆಫ್ ಫರ್ಮ್ಸ್ ಹಾ...


ಸೋನಾ ಟವರ್

ಬರಲಿದೆ ಇಂಜಿನಿಯರಿಂಗ್ ಕಾಲೇಜ್

ಅಧಿಕಾರ ಎಷ್ಟು ದಿನ ಇರುತ್ತೋ ಏನೋ ಇದ್ದಾಗಲೇ ಚೆನ್ನಾಗಿ ಕಾಸು ಮಾಡಿಕೊಂಡು ಬಿಡಬೇಕೆಂಬ ಧಾವಂತ ಹಾಲಿ ಕೋ-ಜಾ ಸರ್ಕಾರದ ನಾಯಕ ಕುಮಾರಸ್ವಾಮಿಯಿಂದ ಹಿಡಿದು ಎಲ್ಲರಿಗೂ ಬಂದುಬಿಟ್ಟಿದೆ. ಇದೇ ಧೋರಣೆಯ ಈಶ್ವರಪ್ಪ ಒಂದು ಕಡೆ ಆಸ್ತಿ ಖರೀದಿ ಮಾಡುತ್ತಾ ಮತ್ತೊಂದೆಡೆ ಇಂಜಿನಿಯರಿಂಗ್ ಕಾಲೇಜು ಕಟ್ಟಲು ಹೊರಟಿದ್ದಾರೆ.

ನೆದಿಗೆ ಊರಿನ ಹತ್ತಿರ ಅದಕ್ಕೆಂದೇ ಜಮೀನು ಖರೀದಿ ಡೀಲ್‌ಗಳೂ ನಡೆಯುತ್ತಿವೆ. ಜನತಾದಳ ಮುಖಂಡ ವೈ.ಎಚ್. ನಾಗರಾಜ್‌ರಿಗೆ ಸೇರಿದ್ದ ಮೂರೆಕರೆ ಜಮೀನನ್ನು 36 ಲಕ್ಷ ಕೊಟ್ಟು ಈಗಾಗಲೇ ಈಶ್ವರಪ್ಪ ಖರೀದಿಸಿದ್ದಾರೆ. ಅಷ್ಟು ಸಾಲದೆಂಬಂತೆ ಇಂಜಿನಿಯರಿಂಗ್ ಕಾಲೇಜಿಗೆಂದು ಅದರ ಪಕ್ಕದಲ್ಲಿದ್ದ ಆರೆಕರೆಯನ್ನು ಖರೀದಿಗೆ ಕೇಳಿದಾಗ ನಾಗರಾಜ್ 'ಎಕರೆಗೆ 30 ಲಕ್ಷ ಕೊಡಿ' ಅಂದಿದ್ದಾರೆ. ಈ ರೇಟ್ ಕೇಳಿ ಗಾಬರಿಯಾದ ಈಶ್ವರಪ್ಪ 'ಯಾಕ್ರಿ ಇಷ್ಟೊಂದು ರೇಟ್ ಹೇಳ್ತೀರಾ?' ಅಂದಿದ್ದಕ್ಕೆ ನಾಗರಾಜ್ 'ಕೊಡಿ ಸ್ವಾಮಿ, ನೀವೇನು ಕಷ್ಟಪಟ್ಟು ದುಡಿದು ಸಂಪಾದಿಸಿರೊ ಕಾಸಲ್ಲವಲ್ಲ' ಎಂದರಂತೆ.

ಸೂರಿ ಹತ್ಯೆಯ ಹಿಂದೆ ಯಾರ್‍ಯಾರು?

ವಿಕೃತ ಪಾತಕಿ ಕೊರಂಗು ಜೈಲೊಳಗಿದ್ದೇ ತಿಮ್ಮೇನಹಳ್ಳಿಯ ಸೂರಿಗೆ ಮುಹೂರ್ತ ಗೊತ್ತು ಮಾಡಿದ್ದಾನೆ! ಅದಕ್ಕೆ ಮಾರೇನಳ್ಳಿ ಜಗ್ಗ ಫೈನಾನ್ಸ್ ಮಾಡಿದ್ದಾನೆ! ಮತ್ತು ಮಚ್ಚನ ಬಂಟರಾದ ಪೆದ್ದುಗುಂಡ ಮತ್ತು ಟೀಸಿ ರಾಜ ಅದನ್ನು ಅಕ್ಷರಶಃ ಜಾರಿಗೆ ತಂದಿದ್ದಾರೆ!

ಹಾಗೆಂದು ಏಕ ಪಕ್ಷೀಯವಾಗಿ ಪೊಲೀಸರು ತೀರ್ಮಾನಿಸಿದ್ದಾರೆ. ಅಲ್ಲಿಗೆ ತಿಮ್ಮೇನಹಳ್ಳಿ ಸೂರಿ ಮತ್ತು ಆತನ ಸಹಚರ ಟೋನಿಯ ಹತ್ಯೆಯ ತನಿಖೆ ಒಂದು ಹಂತಕ್ಕೆ ಬಂದು ನಿಂತಿದೆ. ಮಚ್ಚನ ನಂತರ ಬೆಂಗಳೂರು ಅಂಡರ್‌ವರ್ಲ್ಡ್ ಕಂಡ ಅತ್ಯಂತ ಭಯಾನಕ ಮತ್ತು ತುಂಬಾ ಪೂರ್ವಯೋಜಿತ ಹತ್ಯಾಕಾಂಡವೆಂದರೆ ಅದು ಸೂರಿ-ಟೋನಿ ಜೋಡಿ ಹತ್ಯೆಯೆ. ಸದ್ಯ ಸಿಸಿಬಿಯ ಡಿಸಿಪಿ ರವಿಕಾಂತೇಗೌಡರ ಪಡೆ ಮಾರೇನಹಳ್ಳಿ ಜಗ್ಗನ ಅಣ್ಣ ಕುಮಾರ್ ಮತ್ತು ಆತನ ಕೆಲ ಸಹಚರರನ್ನು ಎಳೆದೊಯ್ದು ಬಾಯಿಬಿಡಿಸುತ್ತಿದೆ. ಜೊತೆಗೆ ಮಾರೇಹಳ್ಳಿಯ ಕೆಲ ಹುಡುಗರನ್ನೂ ಹಿಡಿದೊಯ್ದಿದೆ. ಜಗ್ಗನ ಅಣ್ಣ ಕುಮಾರ್ ನಿಷ್ಪಾಪಿ. ತನ್ನ ಪಾಡಿಗೆ ತಾನಿದ್ದವನು. ಹಾಗಿದ್ದೂ ಸಿಸಿಬಿ ಪೊಲೀಸರೇಕೆ ಆತನನ್ನು ಎಳೆದೊಯ್ದರು? ಎಂಬ ಪ್ರಶ್ನೆಗೆ ಬರುವ ಉತ್ತರವೇ ಕಾಮಾಕ್ಷಿಪಾಳ್ಯದ ಮಾಜಿ ಕೌನ್ಸಿಲರ್ ಗೋಪಾಲಯ್ಯ.



ತಿಮ್ಮೇನಹಳ್ಳಿ ಸೂರಿ

ಆತನಿಗೆ ಇದೊಂದೇ ನೆಪ ಸಾಕು ಅಳಿದುಳಿದ ಮಚ್ಚನ ಅನುಯಾಯಿಗಳನ್ನು ಮುಗಿಸಿಬಿಡಲು. ಸದ್ಯ ಮುಖ್ಯಮಂತ್ರಿ ಕುಮಾರಸ್ವಾಮಿಯ ಬಗಲಲ್ಲೇ ಠಳಾಯಿಸುವ ಗೋಪಾಲಯ್ಯ ಓರ್ವ ಕ್ರಿಮಿನಲ್ ಎಂದು ಗೊತ್ತಿದ್ದೂ ಕುಮಾರಸ್ವಾಮಿ ಆತನನ್ನು ಜೊತೆಗಿಟ್ಟುಕೊಳ್ಳುತ್ತಾರೆಂದರೆ ಏನರ್ಥ? ಮಂತ್ರಿ ಚೆನ್ನಿಗಪ್ಪನ ಮಗ ಗೌರಿಶಂಕರ್, ಮಾಗಡಿ ಶಾಸಕ ಬಾಲಕೃಷ್ಣರಂಥವರೇ ಗೋಪಾಲಯ್ಯನನ್ನು 'ಅಣ್ಣಾ' ಎಂದು ಸಂಭೋದಿಸುವ ಮಟ್ಟಕ್ಕೆ ಗೋಪಾಲಯ್ಯ ಬೆಳೆದಿದ್ದಾನೆ. ಸೂರಿ ಹತ್ಯೆಯೊಂದನ್ನೇ ನೆಪವಾಗಿಟ್ಟುಕೊಂಡು ಇಡೀ ಮಚ್ಚನ ಹಿಂಡವನ್ನು ಹೊಸಕಿ ಹಾಕುವುದು ಆತನ ಷಡ್ಯಂತ್ರ. [illegible]

ಹಳ್ಳಿ ಜಗ್ಗರನ್ನು ಪೊಲೀಸರನ್ನು ಛೂ ಬಿಟ್ಟು ಹಿಡಿಸಿದ. ಜೈಲಿಗೆ ಹಾಕಿಸಿದ. ಆನಂತರ ತನ್ನ ಹುಟ್ಟೂರು ಕುಣಿಗಲ್ಲಿಗೆ ಬಂದಿದ್ದ ಕಲಗಚ್ಚು ಸೀನನ ಮೇಲೆ ತುಮಕೂರು ಪೊಲೀಸರನ್ನು ಬಿಟ್ಟು ಆತ ತನ್ನನ್ನು ಕೊಲ್ಲಲೆಂದೇ ಬಂದಿದ್ದ ಎಂದು ಮತ್ತೊಂದು ದೂರು ಕೊಟ್ಟ. ಅದಕ್ಕೆಂದು ತುಮಕೂರು ಎಸ್ಪಿ ಹರಿಶೇಖರ್‌ರನ್ನೇ ಬಳಸಿಕೊಂಡ. ಸಾಲದಕ್ಕೆ ಮಚ್ಚನ ಪಕ್ಕಾ ಶಿಷ್ಯ ಕಮಲಾ ನಗರದ ಪೆದ್ದುಗುಂಡ ಆಲಿಯಾಸ್ ವೆಂಕಟಸ್ವಾಮಿಯ ಮೇಲೆ ಇಲ್ಲದ ಕೇಸು ಹಾಕಿಸಿ ಆತ ಗಡಿಪಾರಾಗುವಂತೆ ನೋಡಿಕೊಂಡ.

ಇದೆಲ್ಲವೂ ಹಂತಕ ಗೋಪಾಲಯ್ಯನಿಗಾಗಿ ಪೊಲೀಸರು ಮಾಡಿದ ಮಹಾತ್ಕಾರ್ಯವಾಗಿತ್ತು. ಯಾವತ್ತು ಮಚ್ಚನ ಅವಸಾನವಾಗಿ ಆತನ ಒಬ್ಬೊಬ್ಬರೇ ಬೆಂಬಲಿಗರನ್ನು ಪೊಲೀಸರು ಬೇಟೆಯಾಡಲು ನಿಂತರೋ ಗೋಪಾಲಯ್ಯ ಆಗಷ್ಟೇ ಜೈಲಿಂದ ಹೊರಬದ್ದಿದ್ದ ತಿಮ್ಮೇನಹಳ್ಳಿ ಸೂರಿಯನ್ನು ಜೊತೆ ಹಾಕಿಕೊಂಡ. ಗುರು ತಿಮ್ಮೇನಳ್ಳಿ ಗೋವಿಂದನಷ್ಟು ಹುಷಾರು ಪ್ರಾಣಿಯಲ್ಲ ಸೂರಿ. ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಬಾಡಿಗಾರ್ಡ್‌ನಂತೆ ಪೋಜು ಕೊಟ್ಟು ಓಡಾಡಿದ್ದಾನೆ. ಹಾಗೇ ಸೂರಿಯನ್ನು ಮುಂದಿಟ್ಟುಕೊಂಡೇ ಗೋಪಾಲಯ್ಯ ಮಚ್ಚನ ಕೇಬಲ್ ಧಂದೆಗೆ ಕೈಹಾಕಿದ್ದಾನೆ. ಆತನ ಪತ್ನಿಯ ಮೇಜುವಾನಿಯಲ್ಲಿದ್ದ ಕೇಬಲ್‌ನ ವೈರುಗಳನ್ನೆಲ್ಲ ಹುಡುಗರನ್ನು ಬಿಟ್ಟು ಕೀಳಿಸಿದ್ದಾನೆ.

ಬರೀ ಇದಿಷ್ಟೇ ಆಗಿದ್ದರೆ ಮಚ್ಚನ ತಂಡಕ್ಕೆ ಆಪಾಟ ತಲೆ ಕೆಡುತ್ತಿರಲಿಲ್ಲ. ಮಚ್ಚನ ಹತ್ಯೆಗೆಂದು ಬಂದಿದ್ದ ಹಿಂಡುಗಟ್ಟಲೇ ಹುಡುಗರ ಪೈಕಿ ಕತ್ರಿಗುಪ್ಪೆಯ ಸೈಕಲ್ ರವಿಯ ಇಪ್ಪತ್ತು ಮಂದಿ ಮತ್ತು ಬನಶಂಕರಿ ಅರಸಯ್ಯನ ಕಡೆಯ ಹತ್ತು ಮಂದಿ [illegible] ರಾಮನ ಕಿವಿ ಮುಟ್ಟಿದೆ. ಮಚ್ಚನಿಗೂ ಬನಶಂಕರಿ ಅರಸಯ್ಯನಿಗೂ ಮತ್ತು ಸೈಕಲ್ ರವಿಗೂ ಯಾವ ಜಿದ್ದೂ ಇರಲಿಲ್ಲ. ಜೈಲೊಳಗಿದ್ದುಕೊಂಡೇ ಅವರನ್ನು ಗೋಪಾಲಯ್ಯನಿಗೆ ಜೊತೆ ಮಾಡಿ ಕೊಟ್ಟಿದ್ದು ಸೂರಿ.






ಗೋಪಾಲಯ್ಯ

ಇದೇ ಸೂರಿಯ ಹತ್ಯೆಗೆ ಮೂಲವಾಯಿತು. ಮಚ್ಚನ ಬಂಟರೆಲ್ಲ ಒಬ್ಬೊಬ್ಬರಾಗಿ ಜೈಲು ಪಾಲಾದರೆಂದರೆ ಅಲ್ಲಿಗೆ ತಾನು ಸೇಫು ಎಂದು ಗೋಪಾಲಯ್ಯ ಭಾವಿಸಿದ್ದ. ತಮ್ಮಯ್ಯನ ಶಿಷ್ಯರಿಗೆ ತನಗಿಂತಲೂ ಗೋವಿಂದನೇ ಮೊದಲ ಗುರಿ ಎಂದು ಸೂರಿ ಲೆಕ್ಕ ಹಾಕಿದ. ಗೋವಿಂದನನ್ನು ಕೈಬಿಟ್ಟು ತಾನೇ ಸ್ವತಂತ್ರವಾಗಿ ಬೆಳೆಯಲು ಯೋಚಿಸಿ ತಿಮ್ಮೇನಹಳ್ಳಿಯನ್ನೇ ತೊರೆದ. ಕೆಂಗೇರಿ ಸಮೀಪದ ಶಿಶುನಗರಕ್ಕೆ ಬಂದು ಮನೆ ಮಾಡಿದ. ಯಾವ ಉದ್ದೇಶದಿಂದ ಗೋಪಾಲಯ್ಯ ಇದೆಲ್ಲವನ್ನೂ ಮಾಡಿಕೊಂಡೇ ಬಂದನೋ ಅದೇ ಆತನಿಗೆ ತಿರುಗುಬಾಣವಾಗಿತ್ತು!

ಹಾಗೇ ಹಂಡೆರಾಜನ ಜೊತೆ ಜೈಲು ಸೇರಿಕೊಂಡ ಮಾರೇನಳ್ಳಿ ಜಗ್ಗ ಸುಮ್ಮನೆ ಕೂಡಲಿಲ್ಲ. ಆತನಿಗೂ ಸೂರಿಯೇ ತನಗೆ ಕಂಟಕ ಎಂಬುದು ಗೊತ್ತಾಗಿತ್ತು. ಇಲ್ಲಿಗೆ ವರ್ಷದ ಹಿಂದೆ ಗೋವಿಂದ ಚೆನ್ನಿಗಿದ್ದಾನೆ ಎಂಬ ಒಂದೇ ಕಾರಣಕ್ಕೆ ಜಗ್ಗ ತನ್ನ ಚಿ... ಮುನಿರಾಜನ ಮಗ ಸುರೇಶನನ್ನು ಮರ್ಡರ್ ಮಾಡಿಸಿದ್ದ. ತಿಮ್ಮನೇ... ಮತ್ತು ಮಾರೇನಹಳ್ಳಿಗಳ ಜಿದ್ದಾಜಿ... ಅಣ್ಣ-ತಮ್ಮ ರಕ್ತಸಂಬಂಧಗಳ ಹ... ಇಲ್ಲ!

ತನ್ನನ್ನು ಮುಗಿಸಲು ತನ್ನ ಚಿಕ್ಕಪ್ಪ... ಸೂರಿಗೆ ಸುಪಾರಿ ಕೊಟ್ಟಿದ್ದಾನೆ ಎ... ಮಾಹಿತಿ ಜೈಲಲ್ಲಿದ್ದ ಜಗ್ಗನ ಕಿವಿ ಮು...ವುದು ಎಷ್ಟು ಹೊತ್ತು?

ಅಲ್ಲಿಗೆ ಗೋಪಾಲಯ್ಯ ಊರು ...ಸಿದ್ದ ಮಚ್ಚನ ಶಿಷ್ಯರೆಲ್ಲ ಒಂದು ನಿರ್ಧಾರಕ್ಕೆ ಬಂದಿದ್ದಾ... ಸೂರಿ, ಗೋವಿಂದ ಅಥವಾ ಸೈಕಲ್ ರವಿ, ಮೂವರಲ್ಲಿ ಯಾರೂ ಸಿಕ್ಕರೂ ತೆಗೆದುಬಿಡಬೇ... ಹೇಗೂ ಪೆದ್ದಗುಂಡ ಗಡಿಪಾರಾಗಿದ್ದನಲ್ಲ; ಆತನ ಜ... ತಲೆ ಮರೆಸಿಕೊಂಡಿದ್ದ ಗೋಪಾಲಯ್ಯನ ಕಡುವ... ಮತ್ತು ಬಚ್ಚನ ಶಿಷ್ಯ ಟೀಸಿ ರಾಜ ಅಲಿಯಾ... ಲೋಹಿತರಾಜು ಸೇರಿದ್ದಾನೆ. ಅವರ ಜೊತೆ ಕಾಮ...ಪಾಳ್ಯದ ಮಚ್ಚನ ಕೆಲ ಶಿಷ್ಯರು ಮತ್ತು ಮಾರೇನಹಳ್ಳಿ... ಒಂದಷ್ಟು ಮಂದಿ ಜಗ್ಗನ ಶಿಷ್ಯರು ಜಮೆಯಾಗಿದ್ದಾ... ಕಳೆದ ಒಂದು ತಿಂಗಳಿಂದ ಮೂರು ಟಾಟಾಸುಮೊ...ಗಳಲ್ಲಿ ರೌಂಡಿಂಗ್‌ನಲ್ಲಿದ್ದ ಪೆದ್ದಗುಂಡನ ಹ... ಲೇಟೆಸ್ಟಾಗಿ ಜಮೆಯಾದವನು ಕತ್ರಿಗುಪ್ಪೆಯ ಲಿಂ... ಇಟ್ಟಮಡು ಜಗ್ಗನ ಕೋ... ಕೇಸಿನಲ್ಲಿದ್ದ ಲಿಂಗ ಸೂರಿ... ಹತ್ಯೆಗೆ ಹತ್ತು ದಿನಗಳ ಹಿಂದಷ್ಟೇ ಜಾಮೀನು ಪಡೆದು ಹೊರಬಂದಿದ್ದ. ತನ್ನ ಜೊತೆ ನಾಲ್ಕು ಹುಡುಗರನ್ನು ಹಾಕಿಕೊಂಡು ಪೆದ್ದಗುಂ... ಜೊತೆಯಾದ ಲಿಂಗನ

ಹಾರುವ [illegible]

ಅಜಾದ್ ಗ್ರೂಪ್ ಆಫ್ ಫರ್ಮ್ಸ್ ಎಂಬ ಬ್ಯುಸಿನೆಸ್ ಇರುವ ಈ ಕುಟುಂಬ ಶಿವಮೊಗ್ಗದ ಅತೀ ಶ್ರೀಮಂತ ಮುಸ್ಲಿಂ ಕುಟುಂಬಗಳಲ್ಲೊಂದು. ಜಿಲ್ಲೆಯ ಐಟಿಸಿ ಬ್ರಾಂಡ್ ಸಿಗರೇಟ್ ಡೀಲರ್‌ಶಿಪ್ ಸಹ ಇವರ ಕೈಲಿದೆ. ಈ ಲಾಭದಾಯಕ ವ್ಯವಹಾರವನ್ನು ಸೋನಾ ಬ್ರದರ್ಸ್‌ನಿಂದ ಕಿತ್ತುಕೊಳ್ಳಲು ಶಿವಮೊಗ್ಗದ ಮಾರ್ವಾಡಿಗಳು ಹತ್ತಾರು ವರ್ಷಗಳಿಂದ ಸಂಚು ನಡೆಸುತ್ತಿದ್ದಾರೆ. ಗಣೇಶ ಹಬ್ಬ ಬಂದಾಗೆಲ್ಲಾ, ಹಿಂದೂ ಮುಸ್ಲಿಂ ಗಲಾಟೆಯಾದಾಗೆಲ್ಲಾ ಆರ್‌ಎಸ್‌ಎಸ್ ಹುಡುಗರಿಗೆ ಕಾಸು ಕೊಟ್ಟು, ಸೋನಾ ವಿರುದ್ಧ ದಾಳಿಗೆ ಎತ್ತಿಕಟ್ಟುವ ಕೆಲಸವನ್ನು ಮಾರ್ವಾಡಿಗಳು ಮಾಡುತ್ತಲೇ ಬಂದಿದ್ದರು.

ಬಿಳಿದಾಳೆ ಈಶ

ಈಶ್ವರಪ್ಪನೂ ಆಗ ಅದರ ಫಲಾನುಭವಿಯಾಗಿದ್ದಾನೆ. ಆದರೆ ಈಗ ಪರಿಸ್ಥಿತಿ ಹೇಗೆ ಬದಲಾಗಿದೆ ನೋಡಿ, ಯಾರ ಆಸ್ತಿ ವ್ಯವಹಾರವನ್ನು ಬೆದರಿಕೆ ದೌರ್ಜನ್ಯದ ಮೂಲಕ ಕಿತ್ತುಕೊಳ್ಳಲು ಬಯಸಿದ್ದರೋ ಅದೇ ಆಸ್ತಿಯನ್ನು ಈಗ ಈಶ್ವರಪ್ಪ ಧನಬಲದಿಂದ ಖರೀದಿಸಿ ನುಂಗಿದ್ದಾನೆ.

ಅಷ್ಟೇ ಅಲ್ಲ ಈಶ್ವರಪ್ಪ ಮಂತ್ರಿಯಾದ ನಂತರ ಸೋನಾ ಬ್ರದರ್ಸ್ ಪೈಕಿ ಖಾದರ್ ಬಾಷಾ ಈಶ್ವರಪ್ಪನ ಚೇಲಾಗಿರಿ ಮಾಡಿಕೊಂಡು ತಿರುಗುತ್ತಿದ್ದಾನೆ.

ಒಂದೋ ಇಡೀ ಸೋನಾ ಟವರ್ಸ್ ಖರೀದಿಸಲಾಗಿದೆ ಅಥವಾ ಕಟ್ಟಡದ ಒಂದು ಫ್ಲೋರ್ ಖರೀದಿಯಾಗಿದೆ ಎನ್ನಲಾಗಿದ್ದು ಒಟ್ಟಾರೆ ಈ ಡೀಲಿನ ಮೊತ್ತವು ಒಂದು ಕೋಟಿ ರೂ.ನಷ್ಟಿದೆ.

ಹಿಂದುತ್ವ, ಜೈಶ್ರೀರಾಮ, ಭಾರತಾಂಬೆ ಎಂಬ ಸ್ಲೋಗನ್ ಹಾಕುತ್ತಲೇ ಕುಬೇರನಾಗಿರುವ ಈಶ್ವರಪ್ಪ ನಾಚಿಕೆ ಮಾನ ಮರ್ಯಾದೆ ಎಲ್ಲಾ ಬಿಟ್ಟು ಈಗ ದುಡ್ಡು ಮಾಡಲು ನಿಂತುಬಿಟ್ಟದ್ದಾರೆ.

ಈತನನ್ನು ಆರಿಸಿ ಕಳಿಸಿದ ತಪ್ಪಿಗೆ ಶಿವಮೊಗ್ಗದ ಜನರ ಆಸ್ತಿಪಾಸ್ತಿಗಳನ್ನೇ ಈಶ್ವರಪ್ಪ ಅಂಡ್ ಸನ್ಸ್ ಒಂದೊಂದಾಗಿ ಕಬಳಿಸುತ್ತಾ ಇದ್ದಾರೆ.


'ಇಷ್ಟು ದುಡ್ಡು ಎಲ್ಲಿಂದ ಹೇಗೆ ಬಂತು' ಎಂಬ ಪ್ರಶ್ನೆಯನ್ನು ಜನ ಈಗಲಾದರೂ ಕೇಳಬೇಕಲ್ಲವೆ.

ಇಮೇಲ್‌ನಲ್ಲಿ ಇನ್‌ಲ್ಯಾಂಡು

ಜುಮ್ಮಿ ಚಿಗವ್ವ,

ಇಡೀ ಕ್ಯಾಂಪಸ್‌ನ್ಯಾಗ ನಿನ್ ಹೆಸ್ರು ಇವತ್ತೂ ಫೇಮಸ್ಸು ನೋಡ್ವೆ ಚಿಗವ್ವಾ. ಹೋದ ವಾರ ನೀ ಬಂದು ಇಲ್ಲಿ ಭಾಸಣ, ಚರ್ಚೆ ಮಾಡಿ ಹೋದಾಗಿಂದ ಎಲ್ಲಾರೂ ನಿನ್ ಲೈಕ್ ಮಾಡಾಕಾ ಹತ್ಯಾರ. ನೀ ತೊಗೊಂಡ ಸಬ್ಜೆಕ್ಟ್ ಪವರ್‌ಫುಲ್ ಇತ್ತು....

'ಮಹಿಳಾ ಮೀಸಲು: ಗಂಡಸರ ಹಸ್ತಕ್ಷೇಪ' ಅನ್ನೋ ವಿಷಯದ ಮ್ಯಾಗ ನೀ ಮಾತಾಡ್ದಂಗ ಯಾರೂ ಮಾತಾಡ್ಲಿಲ್ಲ ನೋಡವಾ... "ಗಂಡಸರು ಎಲ್ಲೆಂದರಲ್ಲಿ ಕೈ ಹಾಕೋದಿಂದ್ರ ನಮ್ಗ ಅಭಿವೃದ್ಧಿ ಮಾಡಾಕ ಹ್ಯಾಂಗ ಆಗುತ್ತೆ?" ನೀ ಈ ಪಾಯಿಂಟ್ ಒಗೆದ ಕೂಡ್ಲೇ ಎಷ್ಟ್ ಚಪ್ಪಾಳಿ ಬಿದ್ವು ನೋಡು.... ಅಲ್ಲಾ, ಎಳ್ಳುವಲಿ ನಿಂಗ ಗ್ರಾಮ ಪಂಚಾಯ್ತಿ ಎಕ್ಸ್‌ಪೀರಿಯನ್ಸು ಬ್ಯಾರೆ ಐತಲ್ಲ.... ಎಷ್ಟ್ ಚಂದ ಮಾತಾಡ್ದಿ ಅಂದ್ರ, ಅವತ್ ಅಲ್ಲೇ ಸ್ಟೇಜ್ ಮ್ಯಾಲೆ ಬಂದು ನಿನ್ನಾ ತಬ್ಬಿಕೊಳ್ಳಾಂಗ ಆಗಿಬಿಟ್ಟಿತ್ತು.... ನಿನ್ ಕರೆಸಿದ್ದಕ್ಕ ನನಗೆಲ್ಲಾರೂ ಹೊಗಳಿದ್ದsss ಹೊಗಳಿದ್ದು.... ನಿನ್ ಕಳಿಸಿಕೊಟ್ಟಿದಕ್ಕ ಚಂದ್ರೇಗೌಡರಿಗೆ ಥ್ಯಾಂಕ್ಸವಾ....



ಮತ್ ಈ ಪತ್ರದ ಜೊತಿಗೆ ಟಿ.ಎ, ಡಿ.ಎ. ಚೆಕ್ಕೂ ಕಳಿಸಾಕ ಹತ್ತೇನಿ. ಯುನಿವರ್ಸಿಟಿಯೋರು ಅದ್ನ ಕೊಟ್ಟಾರ... ಆದ್ರ ನಿಂಜೊತೆ ಉಗ್ರಿ ಬಂದಿದ್ದನಲ್ಲ... ಅವ್ನ ಟಿ.ಎ, ಡಿ.ಎ ಬಿಲ್ ನಮ್ ಯೂನಿವರ್ಸಿಟಿ ಕೊಡಂಗಿಲ್ಲಾಂತ... ಯಾಕಂದ್ರ, ಅವತ್ತು ಚರ್ಚಾದಾಗ ಅಡ್ಡಡ್ಡ ಬಾಯಿ ಹಾಕಿ ಏನೇನ ಮಾತಾಡಿಬಿಟ್ಟನಲ್ಲ...ಅದೂ ಅಲ್ದ ಈ ಲಿಂಗಾಯತರ ಯುನಿವರ್ಸಿಟಿಗೆ ಬಂದು ಬಾಡೂಟ ಬೇಕಂತ ಹಟ ಬ್ಯಾರೆ ಮಾಡಿಬಿಟ್ಟನಲ್ಲ... ಅದ್ಕ ಅವ್ನ ಖರ್ಚುವೆಚ್ಚ ಕೊಡಂಗಿಲ್ಲಾಂತ... ಎಲ್ಲಾ ನಿನ್ ತಲಿ ಮ್ಯಾಲೆ ಬತ್ತವಾ.... ಇನ್‌ಮ್ಯಾಲೆ ನೀ ಒಬ್ಬಾಕಿನ ಮೀಟಿಂಗ್‌ಗೆ ಹೋಗು.... ಇಲ್ಲಂದ್ರ, ಪಾಲಿಟಿಕಲಿ ನಿಂಗ ಬೆಳೆಸಿದ ಚಂದ್ರೇಗೌಡರನ್ನು ಕರಕೊಂಡು ಹೋಗು....

ಮತ್ತ ಮುಂದ್ಲ ವರುಸಾನೂ ನೀನಾ ಗೆಸ್ಟು....

ನಿನ್ ಬೆಚ್ಚಗಿರೋ ಕೈಗಳನ್ನು ಮುಟ್ಟೋ ಆಸೆ ಆಗಾಕ ಹತ್ತೈತಿ....

ಪ್ಚ್ ಪ್ಚ್...

ಜಲ್ದು ಲೆಟರು ಹಾಕವಾ....

ಜುಮ್ಮವ್ವ ಚಿಗವ್ವ, ಇನ್ನೊಂದು ಮಾತು:

ಆ ವಾಟಸ್ಸಿಗೆ ಈ ಲೆಟರು ತೋರ್‍ಸಬ್ಯಾಡ ನೋಡು. ಅಂವಾ ಮಂಗ್ಯಾ ಅದಾನ.... ಏನೇನರ ಅಂದುಬಿಡ್ತಾನ.

ನಮಸ್ಕಾರ ಚಿಗವ್ವಾ,

– ಇಂತಿ

ಮುನ್ನಿ (Zero Hour), ಧಾರವಾಡ

ಚಿಪ್ bit ಹಿಟ್!

ಪಿ.ಕೆ. ಮಲ್ಲನಗೌಡರ್

ಒಂದು (ಪ್ರೊ)ಫೈಲು...
(ಸೆ)ಗಣಿಯಲ್ಲಿ ಬಿದ್ದರೂ...



ಕೊರಟಗೆರೆಯ ಮಣ್ಣಿಗೆ ಎಂದು ಖ್ಯಾತರಾಗಿರುವ ಶ್ರೀಯುತ ಚನ್ನಿಗಪ್ಪ ಸದ್ಯ ಕಾಡುಮಂತ್ರಿಯಾಗಿ (ಸೆ)ಗಣಿಯಲ್ಲಿ ಬಿದ್ದಿರಬಹುದು. 'ಜಟ್ಟಿ ಬಿದ್ದರೂ ನಾಲಗೆ ಸೆಗಣಿಯಾಗಲಿಲ್ಲ' ಎಂಬ ಗರ್ವ ಶ್ರೀ ಚನ್ನಿಗಪ್ಪನವರದು. ಚನ್ನಿಗಪ್ಪನವರದು ಗಟ್ಟಿ ಗುಂಡಿಗೆ! ಅವರ ನಾಲಿಗೆಯಂತೂ ಪವರ್‌ಫುಲ್! ಆ ನಾಲಿಗೆ ಬಳಸಿರುವ 'ಸಂಸ್ಕೃತ' ಪದಗಳ ಲೆಕ್ಕ ಹಾಕಿದರೆ ಅದೇ ಒಂದು 'ಗುನ್ನೀಸ್' ರಿಕಾರ್ಡ್ ಆಗಬಲ್ಲದು. ಅವರಿಬ್ಬರು ಪುತ್ರರಂತೂ ಯಾವ ಪರಿ ಪರಿ'ಸರ' ಪ್ರಿಯರೆಂದರೆ ನಿತ್ಯ ಜಂಗಲ್‌ಲಾಡ್ಜ್‌ನಲ್ಲಿ ಟೆಂಟು ಹಾಕಿ ಕಾಡು ಕಾಯುತ್ತಾರೆ.

ಚನ್ನಿಗಪ್ಪ ಈ ಹಿಂದೆ ಕಾನ್ಸ್‌ಟೇಬಲ್ ಆಗಿದ್ದಾಗ ಕೈ ಬಾಯಿ 'ಶುದ್ಧ'ವಾಗಿಟ್ಟುಕೊಂಡಿದ್ದರು. ಜೇಬುಗಳು ಮಾತ್ರ ಗಬ್ಬಾಗಿರುತ್ತಿದ್ದವು. ಪಾಪ, ಬೆವರಿನ ಕಾರಣದಿಂದ! (ಪ್ರೊ)ಲೀಸು ಕೆಲಸದಲ್ಲಿ 'ಲಂಚ್' ಬಾಕ್ಸ್ ಇಟ್ಟುಕೊಂಡೇ ತಿರುಗಿದಂತವರು.

ಶ್ರೀಯುತರು ಸ್ಕೂಲ್‌ನಲ್ಲಿದ್ದಾಗಲೇ ತಮ್ಮ 'ಕೈ' ಚಳಕ ತೋರಿಸುತ್ತಾ ಬಂದಿದ್ದಾರೆ. ಸ್ಕೂಲ್‌ನಲ್ಲೊಮ್ಮೆ ಗಣೇಶ ದಿನಾಚರಣೆಗೆಂದು ಸಂಗ್ರಹಿಸಿದ ಹಣ ಪಟ್ಟಂತಾ (ಮಂಗ) ಮಾಯವಾಗಿತ್ತು. ಎಲ್ಲರೂ ಹೌಹಾರಿ ಕುಳಿತಾಗ 'ಹನುಮ'ನಂತೆ ಹಾರಿ ಬಂದ ಬಾಲಕ ಚನ್ನಿಗಪ್ಪ, "ಗಣೇಶ ಹಾಲು ಕುಡಿಯುವಂತೆ, ದುಡ್ಡನ್ನೂ ತೆಗೆದುಕೊಳ್ಳುತ್ತಾನೆ. ನಾನೇ ಕಣ್ಣಾರೆ ನೋಡಿದೆ" ಎಂದು ಹೇಳಿ ಕಣ್ಕಟ್ ಮಾಡಿ, ಬೆಳೆಯುವ ಪೈರು ಮೊಳಕೆಯಲ್ಲೇ ನೋಡು ಎಂಬುದನ್ನು ಜ್ಞಾಪಿಸಿದ್ದ.

ಇದೀಗ ಯಾರದೋ ಬಡವರ 'ಚಿನ್ನದ ನೆಕ್ಲೆಸ್' ಕಳೆದು ಹೋಗಿದೆ ಎಂಬುದು ಗೊತ್ತಾದ ಕೂಡಲೇ, ಮಾಜಿ ಕಾನ್ಸ್‌ಟೇಬಲ್, ಹಾಲಿ ಸಚಿವ ಚನ್ನಿಗಪ್ಪ ಬೆಂಗಳೂರಿನ ಕಸದ ತೊಟ್ಟಿಗಳಲ್ಲೆಲ್ಲಾ ಆ ಬಡವರ ನೆಕ್ಲೆಸ್ ಶೋಧಿಸುತ್ತಿದ್ದಾರೆ. ಚನ್ನಿಗಪ್ಪನವರು ಬಿಡುವಾದಾಗ, 'ನಾನೊಬ್ಬ ಕಳ್ಳ', 'ಕಳ್ಳರ ಕಳ್ಳ', 'ಅಲಿಬಾಬಾ ಮತ್ತು ಚಾಲೀಸ್ ಚೋರ್' ನಂತಹ ಚಿತ್ರಗಳನ್ನು ನೋಡುತ್ತಾರೆ.

ಕಾಡುಮಂತ್ರಿ, ಚನ್ನಿಗಪ್ಪನವರ ಅಚ್ಚುಮೆಚ್ಚಿನ ಚಿತ್ರ 'ಅಡವಿದೊಂಗ'!

ಒಂದು CD ಗವನ

(ಬಾನ ದಾರಿಯಲ್ಲಿ ಚಂದ್ರ ಧಾಟಿಯಲ್ಲಿ)

ಹಳ್ಳಿ ದಾರಿಯಲ್ಲಿ
ಕಳ್ಳ ತೇಲಿ ಬಂದ....
ಸಿ.ಎಂ. ಪಟಾಲಂ ಅಂದ
ನೋಡು ಎಂತಹ ಮಂದ
ರಾತ್ರಿಯಾಯ್ತು ಮಲಗು
ನನ್ನ ಭ್ರಷ್ಟ ಸಿಎಮ್ಮು
ನನ್ನ ಭ್ರಷ್ಟ ಸಿ.ಎಮ್ಮುsss
ನೀನಾಡೋ ಮಾತೆಲ್ಲ ಸುಳ್ಳಂತೆ
ನೀ ಕದಿಯೋ ಮಾಲೆಲ್ಲ ಆದಿರಿನಂತೆ
ಇಲ್ಲಿವರ್‍ಗೆ ಹೊಡ್ದ ರೊಕ್ಕ ಎಷ್ಟಂತೆ
ನನ್ನ ಭ್ರಷ್ಟ ಸಿ.ಎಮ್ಮು... ನನ್ನ ಭ್ರಷ್ಟ ಸಿಎಮ್ಮು....
ಹಳ್ಳಿ ದಾರಿಯಲ್ಲಿ ಕಳ್ಳ ತೇಲಿ ಬಂದ....

ಒಂದು 'ಗಾದಿ' ಮಾತು

ಒಲ್ಲದ ಚೆಡ್ಡಿಗೆ ಹಸಿರು ಗಿರಿಯಲ್ಲೂ ಮುಳ್ಳು!

ಮೊದಲ ಟಾರ್ಗೆಟ್ ಇದ್ದದ್ದು ಸೈಕಲ್ ರವಿಯ ಮೇಲೆ.

ಆತ ಬನಶಂಕರಿಯಿಂದ ಬಿಡದಿ ಮಧ್ಯೆ ಓಡಾಡಿಕೊಂಡಿದ್ದಾನೆಂಬ ಮಾಹಿತಿ ಪೆದ್ದಗುಂಡನಿಗಿತ್ತು. ಹೇಗೂ ತಲೆಮರೆಸಿಕೊಂಡು ಗಡೀಪಾರಾಗಿದ್ದನಲ್ಲ; ಕೆಂಗೇರಿ ಉಪನಗರ ಬೆಂಗಳೂರು ಗ್ರಾಮಾಂತರಕ್ಕೆ ಒಳಪಡುತ್ತದೆಯೆಂದು ಆ ಸುತ್ತಮುತ್ತಲ ಹಂತಕರ ಗ್ಯಾಂಗ್ ಓಡಾಡಿಕೊಂಡಿತ್ತು. ಈ ಮಧ್ಯೆ ಸೂರಿ ಹತ್ಯೆಯ ಹಿಂದಿನ ರಾತ್ರಿ ತಿಮ್ಮೇನಹಳ್ಳಿ ಗೋವಿಂದ ವಿಜಯನಗರದ ಕೋತಿ ಬಂಡೆಯ ಬಳಿ ಬರುತ್ತಿದ್ದಾನೆಂಬ ಮಾಹಿತಿ ಪೆದ್ದಗುಂಡನ ಪಡೆಗೆ ಸಿಕ್ಕಿತ್ತು. 35 ಕೋಟಿಯ ಯಾವುದೋ ಲ್ಯಾಂಡ್ ಡೀಲ್ ಒಂದನ್ನು ಕುದುರಿಸಲು ಆರ್‌ಪಿಸಿ ಲೇಔಟಿನ ಕೌನ್ಸಿಲರ್ ಮೋಟುಬೆಳ್ ಜೈರಾಮ ಗೋವಿಂದನಿಗೆ ವೀಳ್ಯಕೊಟ್ಟ ಸುದ್ದಿ ಹೇಗೋ ಟೀಸಿ ರಾಜನಿಗೆ ಸಿಕ್ಕಿತ್ತು.

ಅದೃಷ್ಟವಶಾತ್ ಅವತ್ತು ಗೋವಿಂದ ಬರಲೇ ಇಲ್ಲ, ಬಚಾವಾದ. ಆದರೆ ಮರುದಿನ ಬೆಳಿಗ್ಗೆ ಸೂರಿ ವಿಶ್ವರಪಾಳ್ಯಕ್ಕೆ ಬಂದೇ ಬರುತ್ತಾನೆಂಬ ಮಾಹಿತಿ ಸಿಕ್ಕಿದೆ. ಕೊಮ್ಮಗಟ್ಟ ರಸ್ತೆಯ ಹೊಸ ಅಪಾರ್ಟ್‌ಮೆಂಟ್‌ನಲ್ಲಿ ಆತ ಕೇಬಲ್ ಆಫೀಸ್ ಪ್ರಾರಂಭಿಸುತ್ತಿದ್ದಾನೆಂದೂ, ಸೋಮವಾರ ಬೆಳಿಗ್ಗೆ ಅದಕ್ಕೆ ಪೂಜೆ ಇದೆಯೆಂದೂ ಗೊತ್ತಾಗಲೇ ಪೆದ್ದಗುಂಡನ ಪಡೆಗೆ ಖಾತರಿಯಾಯ್ತು. ಕೊಮ್ಮಘಟ್ಟ ರಸ್ತೆಯ ಅಪಾರ್ಟ್‌ಮೆಂಟ ಬಳಿಯಲ್ಲಿಯೇ ಭಾನುವಾರ ಬೆಳಿಗ್ಗೆ ಸೂರಿಯನ್ನು ಕೊಚ್ಚಿ ಬೀಳಿಸಿದ್ದಾರೆ. ವಿಶ್ವರಪಾಳ್ಯದ ಕೌನ್ಸಿಲರ್ ಮುನಿರಾಜು ಮನೆ ಬಳಿ ಮುಗಿಸಿದ್ದಾರೆ.

ಅನ್ಯಾಯವಾಗಿ ಬಲಿಯಾದವನು ಟೋನಿ. ಸೂರಿ ಯಾವಾಗಲೂ ಬಿಡದೆ ಆತನನ್ನು ತನ್ನ ಜೊತೆ ಇಟ್ಟುಕೊಳ್ಳುವುದಕ್ಕೆ ಕಾರಣವಿತ್ತು, ಟೋನಿ ಮತ್ತು ಸೂರಿ ಒಂದೇ ರೀತಿ ಇದ್ದರು. ಒಂದೇ ಬಣ್ಣ ಒಂದೇ ಹೈಟು ಮತ್ತು ಒಂದೇ ರೂಪ! ಟೋನಿಗದು ಗೊತ್ತಾಗಲೇ ಇಲ್ಲ, ...

-ರಾ.ಸೋ.


ಜಡಿ ಎಂಬ ಬ್ಲಡಿಫೆಲೋ ಸೆಟ್ಲ್‌ಮೆಂಟ್ ರೇಪ್ ಕೇಸ್

ಹುಬ್ಬಳ್ಳಿ

14 ವರ್ಷದ ಹುಡುಗಿಯನ್ನು ಹೊಲದಲ್ಲಿನ ಔಟ್‌ಹೌಸ್‌ನಲ್ಲಿ ವಾರ ಕಾಲ ಕೂಡಿ ಹಾಕಿ ರೇಪ್ ಮಾಡಿದನೆ ಬದ್ಮಾಶ್ ಚಂದ್ರಕಾಂತ ಜಡಿ? ತನ್ನ ಮಗಳ ಗೆಳತಿಯಾದ ದೀಪಾ ಶಿಂತ್ರಿಯನ್ನು ಕಲಘಟಗಿ ತಾಲ್ಲೂಕಿನ ಬಾನಗಿತ್ತಿ ಗುಡಿಹಾಳದ ತನ್ನ ಹೊಲಕ್ಕೊಯ್ದು ತನ್ನ ರಾಕ್ಷಸಿತನ ಮೆರೆದಿದ್ದಾನೆಯೆ? ಈ ಕಟುಕ ಮಾಜಿ ಕಾರ್ಪೊರೇಟರ್, ಗೂಂಡಾ ದುರ್ಗಪ್ಪ ಬಿಜವಾಡನ ಅಳಿಯ. ಅದಕ್ಕೇ ಈ ವಿಷಯ ಪತ್ರಿಕೆಗಳಿಗೂ ಗೊತ್ತಾಗಲಿಲ್ಲ.

ಚಂದ್ರಕಾಂತ ಜಡಿ: ನಕಲಿ ಸಾರಾಯಿ ಕಿಂಗ್

ಸೆಟ್ಲ್‌ಮೆಂಟ್ ಎಂಬುದೇ ಕ್ರೈಮ್‌ಗಳ ಕೇಂದ್ರವಾಗತೊಡಗಿದ್ದು ಈ ಜಡಿಯಂತವರಿಂದಲೇ. ಸೆಟ್ಲ್‌ಮೆಂಟ್‌ನಲ್ಲೇ ನಕಲಿ ಸಾರಾಯಿ ಪಾಕೇಟು ತಯಾರಿಸಿ, ವರೂರ ಹತ್ತಿರದ ಪಾಳೆ ಎಂಬ ಗ್ರಾಮದಲ್ಲಿ ಸಂಗ್ರಹಿಸಿಟ್ಟು, ಸುತ್ತಮುತ್ತಲ ಹಳ್ಳಿಗಳಿಗೆ ಸರಬರಾಜು ಮಾಡುವ ಈ ಚಂದ್ರಕಾಂತ ಜಡಿ ಪೊಲೀಸರಿಗೆ ರುಚಿ ತೋರಿಸುತ್ತಲೇ ಬೆಳೆದಿದ್ದಾನೆ. ಸರ್ಕಾರಿ ಸಾರಾಯಿ ಹೆಸರಲ್ಲಿ ಜಡಿಯ ನಕಲಿ ಕಳಪೆ ಸಾರಾಯಿ ಹರಿಯುತ್ತಿದೆ. ಈ ಮನೆಹಾಳನಿಗೆ ಸ್ಪಿರಿಟ್ ಸರಬರಾಜು ಮಾಡುತ್ತಿರುವ ಊರಹಾಳನ ಹೆಸರು ನಾಗರಾಜ ಅಥಣಿ.




ಸಿಪಿಐ ಅಲಮೇಲಕರ್

ಈ ಭಾಗದ ಮಾಜಿ ಕಾರ್ಪೊರೇಟರ್‌ಗಳಾದ ...ಸೂರು ಗುಡಿಹಾಳ, ಪ್ರಕಾಶ ಕ್ಯಾರಕಟ್ಟಿ, ದುರ್ಗಪ್ಪ ಬಿಜವಾಡ, ...ಸೂರ, ... ಇವರೆಲ್ಲರಿಗೂ ರೇಪ್ ... [illegible]

ಈ ಚಂದ್ರಕಾಂತನ ತಮ್ಮ ಸುರೇಶ್ ಜಡಿ 1984ರ ಕೋಮು ಗಲಭೆಯಲ್ಲಿ ಕಿಡಿಗೇಡಿತನ ಮಾಡಲು ಹೋಗಿ ಗೊಟಕ್ ಅಂದಿದ್ದ. ಇನ್ನೊಬ್ಬ ಸಹೋದರ ಶಶಿಧರ ಜಡಿ ಆತ್ಮಹತ್ಯೆ ಮಾಡಿಕೊಂಡ. ಕಾರಣ ಇನ್ನೂ ನಿಗೂಢವೇ!

ಸೆಟ್ಲ್‌ಮೆಂಟ್‌ನಲ್ಲಿ 2500 ರಷ್ಟಿರುವ ಭೋವಿ ಜನಾಂಗದವರ ಮೇಲೆ ಕೊರಮ ಸಮಾಜದ ಕೆಲ ಗೂಂಡಾಗಳಿಂದ ಹಲ್ಲೆ, ನಷ್ಟ ಆಗುತ್ತಲೇ ಇದೆ. ಕೊರಮ ಸಮಾಜದ ನಾಲ್ಕು ಜನ ಕಾರ್ಪೊರೇಟರ್‌ಗಳಾಗಿದ್ದಾರೆ. ಇಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ ಭೋವಿಗಿಂತ ಪ್ರಬಲರಾದ ಕೊರಮ ಸಮಾಜಕ್ಕೆ ಈ ರೇಪಿಸ್ಟ್ ಜಡಿ ಸೇರಿದ್ದಾನೆ.

ಸೆಟ್ಲ್‌ಮೆಂಟ್ ಕ್ರೈಮ್‌ನ ಆಗರ ಆಗುವುದಕ್ಕೆ ನಕಲಿ ಸಾರಾಯಿ ಮತ್ತು ಬಡ್ಡಿ ವ್ಯವಹಾರವೇ ಕಾರಣ. ಕಾಲೇಜು ಹುಡುಗರೂ ಬಡ್ಡಿಯ ಧಂದೆಯಲ್ಲಿ ಪಳಗಿ ಹೋಗಿದಾರೆ. ಅದಕ್ಕೇ ಈ ಏರಿಯಾಕ್ಕೆ '... ...' ಎಂಬ ಅಡ್ಡ ಹೆಸರು ... [illegible]



ಚಂದ್ರಕಾಂತ ಜಡಿ

(ಮುಸ್ಲಿಂರ ಪಂಗಡ) ಹಾಗೂ ಭೋವಿ ಸಮಾಜದವರು ಭಯದ ನೆರಳಲ್ಲೇ ಬದುಕು ಸಾಗಿಸುತ್ತಿದ್ದಾರೆ. ಬೆಂಡಿಗೇರಿ ಪೊಲೀಸ್ ಠಾಣೆ ಮಾತ್ರ ಕಳ್ಳಭಟ್ಟಿಯವರ, ರೇಪಿಸ್ಟ್‌ರ ಪರ ತಾನೆಂದು ಘೋಷಣೆ ಮಾಡಿಬಿಟ್ಟಿದೆ.

ಈಗ ರೇಪ್ ಸುದ್ದಿ ಸೆಟ್ಲ್‌ಮೆಂಟ್ ವೀರಾಪುರ ಓಣಿ, ಯಲ್ಲಾಪುರ ಓಣಿಯಲ್ಲಿ ಮನೆಮಾತಾಗಿದ್ದರೂ ಸಿಪಿಐ ಅಲಮೇಲಕರ್ ಸುಮ್ಮನಿದ್ದಾರೆಂದರೆ ಏನು ಅರ್ಥ?

ರೇಪ್‌ಗೊಳಗಾದಳು ಎನ್ನಲಾದ ದೀಪಾಳ ತಂದೆ ವಾಯರಿಂಗ್ ಕೆಲಸ ಮಾಡಿದರೆ, ತಾಯಿ ನೋಟ್‌ಬುಕ್ ಫ್ಯಾಕ್ಟರಿಯಲ್ಲಿ ದುಡಿಯುತ್ತಾಳೆ. ದೀಪಾ ತಾಯಿ ನ್ಯಾಯ ಕೇಳಲು ಹೋದರೆ ಹೊಡೆದು ಕಳಿಸಿದ್ದಾರಂತೆ.


14 ವರ್ಷದ ಹುಡುಗಿಗಾದ ಅನ್ಯಾಯಕ್ಕೆ ಯಾರು ಹೊಣೆ? ಜಡಿಯಂತವರಿಗೆ ... [illegible]

ಜಿ.ಪಂ: ನುಂಗಣ್ಣ ಅಧಿಕಾರಿಗಳು!

ಒರಿನು ಜಿಲ್ಲಾ ಪಂಚಾಯ್ತಿ ಎಷ್ಟು ಗಬ್ಬೆದ್ದು ಹೋಗಬಲ್ಲದು? ಚಿತ್ರದುರ್ಗದ ಜಿ.ಪಂ. ನೋಡಿದರೆ ಗೊತ್ತಾಗುತ್ತೆ ಎನ್ನುತ್ತೀರಿ. ಉದ್ಯೋಗ ಖಾತ್ರಿ ಯೋಜನೆಯದಿ ಕ್ಕತಾ. ಸ್ವರ್ಣ ಜಯಂತಿ ಗ್ರಾಮ್ ಸ್ವರಾಜ್ ಯೋಜನೆಯಲ್ಲೂ ಭೋಂಗಸ. ಕಂಪ್ಯೂಟರ್ ಖರೀದಿಯಲ್ಲಿ ಗೋಲ್‌ಮಾಲ್. ಕೊನೆಗೆ ಪ್ರಿಂಟಿಂಗ್ ಕೆಲಸದಲ್ಲೂ ಕಬಳಿಕೆ..

ಕೆಲವೇ ತಿಂಗಳುಗಳಲ್ಲಿ ನಿವೃತ್ತಿಯಾಗಲಿರುವ ಸಿಇಓ ನಾರಾಯಣಸ್ವಾಮಿ ಸಿಕ್ಕಿದ್ದನ್ನೆಲ್ಲಾ ಬಾಚಿಕೊಂಡು ಹೋಗುತ್ತಿದ್ದಾನೆ. ಇನ್ನು ಉಳಿದ ಅಧಿಕಾರಿಗಳು ಬಿಟ್ಟಾರೆಯೆ?

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಫಲಾನುಭವಿಗಳ ಜಾಬ್‌ಕಾರ್ಡ್ ಪಡೆದು, ಅವರಿಗೆ ಅಷ್ಟೋ ಇಷ್ಟೋ ರುಚಿ ತೋರಿಸಿ, ದುಡ್ಡು ಲಪಟಾಯಿಸಲಾಗುತ್ತಿದೆ. ಗ್ರಾಮ ಪಂಚಾಯ್ತಿಗಳ ಫಲಾನುಭವಿಗಳ ಆಯ್ಕೆಯಲ್ಲೂ ಮೋಸ... ಹೆಸರಿಗಷ್ಟೇ ಕಾಮಗಾರಿಗಳು ನಡೆದಿವೆ. ಇಲ್ಲೂ ದುಡಿವ ಕೈಗಳ ಬದಲು ಜೆಸಿಬಿಗಳು ಬಂದು ಕುಳಿತಿವೆ. ರೋಸಿ ಹೋದ ಜನ ಪ್ರತಿಭಟನೆಗಳನ್ನು ಆರಂಭಿಸಿದ್ದೇ ತಡ, ಸಿಇಓ ನಾರಾಯಣಸ್ವಾಮಿ ಪತ್ರಿಕಾ ಗೋಷ್ಠಿ ಕರೆದು "ಉದ್ಯೋಗ ಖಾತ್ರಿ ಯೋಜನೆಯಲ್ಲಿ ನಮ್ಮ ಜಿ.ಪಂ. ರಾಜ್ಯಕ್ಕೇ ಫಸ್ಟ್ ರ್‍ಯಾಂಕ್" ಎಂದು ರೀಲು ಬಿಡಲು ನೋಡಿದ. ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಲಾಗದೇ ಪ್ಯಾಲಿಯಾಗಿ ಮನೆಗೆ ಹೋದ. "ನೀವು ಏನೇನೋ ಬರೆದರೆ ಫಲಾನುಭವಿಗಳು ಪರಿತಪಿಸುವಂತಾಗುತ್ತದೆ" ಎಂದು ಚೀರಿದ. "ಫಲಾನುಭವಿಗಳೆಂದರೆ ಕಾಸು ನುಂಗುತ್ತಿರುವ ಅಧಿಕಾರಿಗಳು, ಮಧ್ಯವರ್ತಿಗಳೆ?" ಎಂದಿದ್ದೇ ತಡ ಪೆಚ್ಚು ಮೋರೆ ಹಾಕಿಬಿಟ್ಟ....


ಉಪಾಧ್ಯಕ್ಷ ಗಂಗಾಧರ

ಪ್ರಿಂಟಿಂಗ್ ಕೆಲಸಗಳಲ್ಲೂ ಅಧಿಕಾರಿಗಳು ಮೇವು ತಿನ್ನುತ್ತಲೇ ಇದ್ದಾರೆ. 185 ಗ್ರಾ.ಪಂ.ಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ ಜಾಬ್‌ಕಾರ್ಡ್, ನೋಂದಣಿ ಅರ್ಜಿ, ಮಾಹಿತಿ ಪತ್ರ ಸೇರಿದಂತೆ ಒಟ್ಟು ಆರು ನಮೂನೆಯ ಅರ್ಜಿಗಳ ಮುದ್ರಣಕ್ಕೆಂದು 25 ಲಕ್ಷ ರೂ. ಬಿಡುಗಡೆ ಆಯ್ತು. ಇದು ಎಲ್ಲ ತಾಲ್ಲೂಕು ಪಂಚಾಯ್ತಿಗಳಿಗೆ ಬರಲೇ ಇಲ್ಲ. ಕೇವಲ ಚಿತ್ರದುರ್ಗ ತಾಲ್ಲೂಕ್ ಪಂಚಾಯ್ತಿಗೇ ಪ್ರಿಂಟಿಂಗ್‌ನ ಹಣ ನೀಡಲಾಯ್ತು. ಟೆಂಡರ್ ಇಲ್ಲ ಗಿಂಡರ್ ಇಲ್ಲ... ಬೇಕು ಬೇಕಾದವರಿಗೆ ಮುದ್ರಣ ಕೆಲಸ ನೀಡಿಬಿಟ್ಟಿದ್ದಾರೆ. ಇಲ್ಲೆಲ್ಲಾ ನಾರಾಯಣಸ್ವಾಮಿಯ ನೆರಳೇ ಗೋಚರಿಸುತ್ತಿದೆ.


ಸಿಇಓ ನಾರಾಯಣ ಸ್ವಾಮಿ

ಜಿಲ್ಲೆಯ ಎಲ್ಲ ಗ್ರಾ.ಪಂ.ಗಳಿಗೂ ಕಂಪ್ಯೂಟರ್ ಖರೀದಿಸಲಾಗಿದ್ದು ಗುಣಮಟ್ಟದಲ್ಲಿ ಅವು ಟೈಪ್‌ರೈಟರ್‌ಗಳಂತಿವೆ. ಕೊಟೇಷನ್‌ನಲ್ಲಿ ಹೆಚ್ಚಿನ ಕಾರ್ಯ ಸಾಮರ್ಥ್ಯದ ಕಾನ್‌ಫಿಗರೇಷನ್ ತೋರಿಸಿ, ಕಡಿಮೆ ಸಾಮರ್ಥ್ಯದ ಕಂಪ್ಯೂಟರ್, ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್, ಟೇಬಲ್, ಚೇರ್‌ಗಳನ್ನು ಖರೀದಿಸಿ ಲೂಟಿ ಮಾಡಲಾಗಿದೆ. ಇಂತಹ ಒಂದೊಂದು ಖರೀದಿಗೂ ಒಂದು ಲಕ್ಷ ರೂ. ನೀಡಿದ್ದಾರೆಂದರೆ ಕಮಿಷನ್ ವಾಸನೆ ಬಡಿಯದೇ ಇರುತ್ತಾ?

ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕು ಪಂಚಾಯ್ತಿಯಂತೂ ಈ ವಿಷಯದಲ್ಲಿ ಮಾಡೆಲ್! ಅದರ ಇ.ಓ. ಥೇಟು ಬಂಗಾರಪ್ಪನ ಸ್ಟೈಲಲ್ಲೇ ಕ್ಲಾಸಿಕ್ ಹಗರಣ ಸೃಷ್ಟಿಸಿದ್ದಾನೆ. ಈತನ ಪತ್ರ-ವ್ಯವಹಾರ, ಚಾಕಚಕ್ಯತೆಯ ನುಂಗಾಟಗಳನ್ನು ಸ್ಟೆಪ್ಸ್‌ಗಳಲ್ಲಿ ವಿವರಿಸುವುದೇ ಸೂಕ್ತ.

☛ ಫೆಬ್ರವರಿ 21: ತಾಲ್ಲೂಕಿನ 32 ಗ್ರಾ.ಪಂ.ಗಳಿಗೆ ಕಂಪ್ಯೂಟರ್ ಸರಬರಾಜಿಗೆ ಎಂ.ಎಸ್.ಐ.ಎಲ್.ಗೆ ಆದೇಶ ಮಾಡುತ್ತಾನೆ.

☛ ಮಾರ್ಚ್ 11: ಎಂ.ಎಸ್.ಐ.ಎಲ್.ನ ಡೆಪ್ಯೂಟಿ ಮ್ಯಾನೇಜರ್‌ನಿಂದ ಕಂಪ್ಯೂಟರ್ ಕೊಟೇಷನ್ ಬರುತ್ತದೆ.

☛ ಏಪ್ರಿಲ್ 22: ಸಡನ್ ಆಗಿ ಟರ್ನ್ ಹೊಡೆಯುತ್ತಾನೆ ತಾ.ಪಂ.ನ. ಇ.ಓ.!! ಎಂ.ಎಸ್.ಐ.ಎಲ್.ಗೆ ಪತ್ರ ಬರೆಯುವ ಈತ "32 ಗ್ರಾ.ಪಂ.ಗಳಿಗೆ ಕಂಪ್ಯೂಟರ್ ಸರಬರಾಜು ಮಾಡಲು ಹೇಳಿದ್ದೆವು. 12 ನೇ ಹಣಕಾಸು ಯೋಜನೆಯಲ್ಲಿ ಹಣ ಬಿಡುಗಡೆಯಾಗದ ಕಾರಣ 14 ಗ್ರಾ.ಪಂ.ಗಳಿಗೆ ಕಂಪ್ಯೂಟರ್ ಸರಬರಾಜು ಮಾಡಬೇಡಿ" ಎಂದು ಹೇಳುತ್ತಾನೆ.... ಇದೇ ಆತನ ಟ್ರಿಕ್ಕು....

☛ ಅದೇ ದಿನ (ಏಪ್ರಿಲ್ 22): 14 ಗ್ರಾ.ಪಂ.ಗಳಿಗೆ ಕಂಪ್ಯೂಟರ್ ಸರಬರಾಜು ಮಾಡಿ, ಬಿಲ್‌ನ್ನು ಆಯಾ ಗ್ರಾ.ಪಂ. ಕಾರ್ಯದರ್ಶಿಗಳ ಹೆಸರಿಗೆ ಕಳಿಸಿ ಎಂದು ಬೆಂಗಳೂರಿನ ಸ್ಫೂರ್ತಿ ಇನ್ನೋಟೆಕ್ ಪ್ರೈ. ಲಿಮಿಟೆಡ್‌ಗೆ ಪತ್ರ ಗೀಚುತ್ತದೆ ಈ ಇ.ಓ. ಎಂಬ ಕಿಲಾಡಿ ಕಳ್ಳ!

☛ ಏಪ್ರಿಲ್ 20: ಅಂದರೆ ಸ್ಫೂರ್ತಿ ಕಂಪನಿಗೆ ಪತ್ರ ಬರೆಯುವ ಎರಡು ದಿನ ಮೊದಲು ಸ್ಫೂರ್ತಿ ಕಂಪ್ಯೂಟರ್ಸ್‌ನಿಂದ ಈ ಇ.ಓ.ಗೆ ಕೊಟೇಷನ್ ಬಂದುಬಿಟ್ಟಿರುತ್ತದೆ.

☛ ಪ್ರಶ್ನೆ: ಕಂಪ್ಯೂಟರ್ ಸರಬರಾಜನ್ನು ಸರ್ಕಾರಿ ಸ್ವಾಮ್ಯದ ಎಂ.ಎಸ್.ಐ.ಎಲ್.ಗೆ ತಪ್ಪಿಸಿ ಖಾಸಗಿ ಸಂಸ್ಥೆಗೆ ನೀಡಿದ್ದೇಕೆ? ಎಂ.ಎಸ್.ಐ.ಎಲ್. ಕಂಪ್ಯೂಟರ್ ಒಂದಕ್ಕೆ 51,948 ರೂಪಾಯಿ ಕೇಳಿದ್ದರೆ, ಸ್ಫೂರ್ತಿ ಕಂಪ್ಯೂಟರ್ 51,800 ರೂ. ಕೇಳಿದೆ. ಅಂತಹಾ ಡಿಫರನ್ಸ್ ಏನಿಲ್ಲ. ಹೀಗೆ ಸಡನ್ನಾಗಿ ಪ್ರೈವೇಟ್ ಕಂಪನಿಯಿಂದ ಖರೀದಿಸುವ 'ಸ್ಫೂರ್ತಿ' ಎಲ್ಲಿಂದ ಬಂತು?

ಉತ್ತರ: ಕ್ಲಾಸಿಕ್ ಹಗರಣ ನೆನಪಾಯಿತಲ್ಲವೆ? 'ಸ್ಫೂರ್ತಿ' ಬಂದಿದ್ದು ಕಮಿಷನ್‌ನಲ್ಲಿ...


ಅಧ್ಯಕ್ಷ ತಿಮ್ಮಣ್ಣ

ಇಡೀ ಜಿಲ್ಲೆಯಲ್ಲಿ ಸ್ವರ್ಣ ಜಯಂತಿ ಗ್ರಾಮ್ ಸ್ವರಾಜ್ ಯೋಜನೆ (ಎಸ್.ಜಿ.ಎಸ್.ವೈ.) ಖರಾಬ್ ಎದ್ದು ಹೋಗಿದೆ. ಈ ಯೋಜನೆಯ ರೂಪುರೇಷೆ, ಧ್ಯೇಯೋದ್ದೇಶಗಳನ್ನು ಪ್ರಚಾರ ಮಾಡಲೆಂದು ಮೇ. 30 ರಂದು 13 ಲಕ್ಷ, ಜೂನ್ 1 ರಂದು 18 ಲಕ್ಷ, ಜುಲೈ 7 ರಂದು 16 ಲಕ್ಷ.... ಹೀಗೆ ಒಟ್ಟು 47 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ. ಅದೆಲ್ಲಿ, ಅದೇನು ಪ್ರಚಾರ ಮಾಡಿದೆ ಎಂದು ನೋಡಿದ... ಏನೇನೂ ಇಲ್ಲ, ಪ್ರಚಾರ ಸಾಹಿತ್ಯದ ಟಿನ್ ಬೋ... ಗಳನ್ನೇ ಸಪ್ಲೈ ಮಾಡಲಿಲ್ಲ, ಇಷ್ಟೂ 47 ಲಕ್ಷ ರೂ.ಗ... ಶ್ರೀ ವೆಂಕಟೇಶ್ವರ ರೂರಲ್ ಡೆವಲಪ್‌ಮೆಂ... ಆರ್ಗನೈಜೇಷನ್‌ಗೆ ಬಿಡುಗಡೆ ಮಾಡಿದ್ದಾರೆ. ಒಟ್ಟ... 47 ಲಕ್ಷಕ್ಕೆ ತಿರುಪತಿ ನಾಮ ಹಾಕಿದ್ದಾರೆ. ತಿಮ... ಲಾಡು ಅಧಿಕಾರಿಗಳ ಬಾಯಿ ಸೇರಿದೆ.

ಜಿಲ್ಲಾ ಪಂಚಾಯ್ತಿಯ ಪ್ರತಿ ಸಾಮಾನ್ಯ ಸಭೆಯ... ಯಾವುದಾದರೂ ಇಲಾಖೆಯ ಅಥವಾ ಅಧಿಕಾರಿ... ಅವ್ಯವಹಾರ ಕುರಿತು ಪ್ರಸ್ತಾಪವಾಗುತ್ತದೆ. ಅ... ಲೋಕಲ್ ಪತ್ರಿಕೆಗಳಲ್ಲಿ ಸ್ಕೂಪ್ ನ್ಯೂಸ್! ಮುಂದಿ... ಸಾಮಾನ್ಯ ಸಭೆ ವೇಳೆಗೆ ಈ ಕುರಿತು ಎಲ್ಲರೂ ಗ... ಚುಪ್!! ಎಂತಹ ಸೂಪರ್ಬ್ ಟೆಕ್ನಿಕ್ ನೋಡಿ ಕಳ್ಳರದು! ಕೊನೆಗೆ 'ಎಲ್ಲಾ ಓಕೆ' ಎನ್ನುವ ವ... ರೆಡಿಯಾಗುತ್ತದೆ! ಮತ್ತೆ ಹೊಸ ಅಜೆಂಡಾ, ಹ... ಹಗರಣದ ಪ್ರಸ್ತಾಪ!

ತೆರೆಮರೆಯಲ್ಲಿ ನಡೆಯುವ ಈ ಡೀಲುಗಳಿಂದಾ... ಅಧಿಕಾರಿಗಳನ್ನು ಪ್ರಶ್ನಿಸಬೇಕಾಗಿದ್ದ ಜನಪ್ರತಿನಿಧಿ... ಮೇಲಿನ ವಿಶ್ವಾಸವೇ ಹೊರ... ಹೋಗಿದೆ. ಒಮ್ಮೊಮ್ಮೆ ಪ್ರಶ್ನಿಸುವ... ಸಾಚಾತನವೇ ಸಂಶಯಕ್ಕೊಳಗಾಗುತ್ತಿ... ಜಿ.ಪಂ. ಅಧ್ಯಕ್ಷ ತಿಮ್ಮಣ್ಣ ಉತ್ಸ... ಮೂರ್ತಿ. ಉಪಾಧ್ಯಕ್ಷ ಗಂಗಾಧರ ತು... ಭಿನ್ನ. ಅಧಿಕಾರದ ಗತ್ತು, ಗೈರತ್ತು ಬಲ್ಲ... ಈಗ ಅಧಿಕಾರದ 'ಸವಿ' ಅನುಭ... ಸುತ್ತಿರುವುದೇ ಈ ಗಂಗಾಧರ.

ನಾಲ್ಕು ವರ್ಷಗಳಿಂದ ಹಗ... ರಾತ್ರಿ ಎನ್ನದೇ ಮುಕ್ಕುತ್ತಲೇ ಇರು... ಸಿಇಓ ನಾರಾಯಣಸ್ವಾಮಿ ರಿಟೈ... ಆಗುವ ಹೊತ್ತು ಹತ್ತಿರ ಬರುತ್ತಿ... ಬಹುಕೋಟಿ ಅಭಿವೃದ್ಧಿ ಯೋಜನೆ... ಅನುಷ್ಠಾನಕ್ಕೆ ಇನ್ನಿಲ್ಲದ ವೇಗ ಪ್ರಾಪ್ತಿ... ಗುತ್ತಿದೆ. ರಿಟೈರ್ ಆಗುವ ಮುನ್ನ ಜಿ... ಪಂಚಾಯ್ತನ್ನು, ಅಷ್ಟೇಕೆ ಚಿತ್ರದುರ್ಗದ ಕೋಟೆಯ... ಮಾರಲಿದ್ದಾನೆ ನಾರಾಯಣಸ್ವಾಮಿ!

ಮಾನವಂತರು ಪ್ರಶ್ನಿಸಿದೇ ಹೋದರೆ ಚಿತ್ರದು... ಜಿ.ಪಂ.ನ ಸರ್ವನಾಶ ಖಚಿತ!

-ಅಹೋಬ...

ಕ.ಸಾ.ಪ. ಕಸ 'ವಿಷ ಅನಿಲ್' ವಜಾ!!

ಇದು ಕನ್ನಡ ಸಾಹಿತ್ಯ ಪರಿಷತ್‌ನ ತುಂಡುಗಥೆ! ಇಡೀ ಕ.ಸಾ.ಪ. ರಾಜ್ಯಾದ್ಯಂತ ಗಬ್ಬೆದ್ದು ಹೋಗಿದೆ. ರಾಯಚೂರು ಜಿಲ್ಲಾ ಕ.ಸಾ.ಪ. ಏನೂ ಕಡಿಮೆಯೆ? ಗಬ್ಬು ಜೊತೆ ಮಬ್ಬು ಆವರಿಸಿದ ಪರಿಸರ ಇಲ್ಲಿದೆ!

ವಿಷಾನಿಲವೇ ಈ ಕ.ಸಾ.ಪ.ಗೇ ಶಾಪವಾಗಿತ್ತು. ಸದ್ಯ ಆ ವಿಷಾನಿಲವನ್ನು ಹೊರ ಹಾಕಲಾಗಿದೆ. ಅದು ಮಿ. ಅನಿಲ್‌ಕುಮಾರ್! ಅಂದರೆ ಇನ್ನು ಮುಂದೆ ಕ.ಸಾ.ಪ.ದಲ್ಲಿ ಉಸಿರಾಡುವ ವಾತಾವರಣವೇ ಇರುತ್ತಾ? ನೊ... ನೊ.... ವಿಷಾನಿಲವೇನೋ ಹೋಯ್ತು, ಆದರೆ ದುರ್ಗಂಧ ಬೀರುವ ಹಲವಾರು ಕ್ರಿಮಿಗಳು ಕ.ಸಾ.ಪ.ದಲ್ಲಿ ಇದ್ದೇ ಇವೆ! ಸದ್ಯಕ್ಕೆ ಅನಿಲ್‌ಕುಮಾರ್ ಎಂಬ ಗೂಂಡಾ ಕ.ಸಾ.ಪ.ದಿಂದ ಹೊರಬಿದ್ದಿದೆ ಎಂಬ ಸಂತೋಷವಷ್ಟೇ ರಾಯಚೂರಿನ ಸಾಹಿತ್ಯ ಪ್ರಿಯರಿಗೆ.

ಕ.ಮ.ಪುರದ ರಾಯಚೂರು ಕ.ಸಾ.ಪ. ಅಧ್ಯಕ್ಷನಾದಾಗಿನಿಂದ ಗಬ್ಬ ಗಬ್ಬು ವಾಸನೆಯ ಸುದ್ದಿಗಳು ಕ.ಸಾ.ಪ.ದಿಂದ ಹೊರ ಹೊಮ್ಮುತ್ತಲೇ ಇವೆ. ರಾಯಚೂರಿನ ಟ್ಯಾಗೋರ್ ಸ್ನಾತಕ ಕಾಲೇಜಿನಲ್ಲಿ ಕನ್ನಡ ಕಲಿಸುತ್ತಿದ್ದ ಈ ಪುರದ ಮಾಸ್ತರು ಕ.ಸಾ.ಪ.ಗೆ ವಕ್ಕರಿಸಿದಾಗಿನಿಂದ ತಾಲ್ಲೂಕು ಕ.ಸಾ.ಪ.ಗಳಿಗೆ ಬೇಕಾಬಿಟ್ಟಿಯಾಗಿ ಅಧ್ಯಕ್ಷರನ್ನು ನೇಮಿಸುತ್ತಾ ಹೋದ. ದೇವದುರ್ಗ ಕ.ಸಾ.ಪ.ಕ್ಕೆ ಗುಡದಿನ್ನಿಯನ್ನು ನೇಮಿಸಿದ. ನಂತರ ಸಡನ್ ಆಗಿ ಅವನನ್ನು ಕಿತ್ತೊಗೆದು ಪ್ರಕಾಶ್ ಪೇಟೆದನನ್ನು ನೇಮಿಸಿದ. ಸಿಂಧನೂರಿಗೆ ವೆಂಕನಗೌಡ ಪಾಟೀಲ್ ಅಧ್ಯಕ್ಷ. ಕಳೆದ ವಾರ ಮಹಿಳಾ ಸಾಹಿತ್ಯ ಸಮ್ಮೇಳನ ಮಾಡಿ ಹಳೇ ಪದಕಗಳಿಗೆ ಬಣ್ಣ ಹಚ್ಚಿ ಮರು ವಿತರಣೆ ಮಾಡಿ ರೊಕ್ಕ ಗುಳುಂ ಮಾಡಿದ... ಪುರದನಿಗೆ ಇಂತಹ ಕೆಲಸಗಳೆಂದರೆ ಫುಲ್ ಇಂಟರೆಸ್ಟ್ ಅಂತೆ!


ರಾಯಚೂರು

ಈ ಅನಿಲ್ ಎಂಬುದೇ ಒಂದು ವಿಷಾನಿಲ. ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಪುರದನ ಅಂಧಾದರ್ಬಾರು ಹೇಗಿದೆ ಎಂದರೆ ಕೆಲವು ತಿಂಗಳುಕಾಲ ಮಾನ್ವಿ ತಾಲ್ಲೂಕು ಕ.ಸಾ.ಪ. ಅಧ್ಯಕ್ಷನ್ಯಾರು ಎಂಬುದೇ ಕನ್‌ಫ್ಯೂಸನ್ ಆಗಿಬಿಟ್ಟಿತ್ತು. ಪುರದ ಮೊದಲು ಯಲ್ಲಪ್ಪ ನಿಲೋಗಲ್ ಎಂಬ ತನ್ನ ಚೇಲಾನನ್ನು ಅಧ್ಯಕ್ಷ ಎಂದು ಸಾರಿದ... ಬಡಕ್ಕನೇ ತನ್ನ ನಿರ್ಧಾರ ಬದಲಿಸಿ ಕೆ.ಇ. ನರಸಿಂಹನನ್ನು ಮಾನ್ವಿ ಕ.ಸಾ.ಪ. ಅಧ್ಯಕ್ಷನನ್ನಾಗಿ ಮಾಡಿದ. ನರಸಿಂಹನ ಫೋಟೋಗಳು ಪೇಪರಲ್ಲಿ ಬಂದವು... ಆದರೆ ಮತ್ತೆ ಬಡಕ್ಕನೆ ಅಧ್ಯಕ್ಷಗಿರಿ ಚೇಂಜ್ ಆಯ್ತು. ಆಗ ವಕ್ಕರಿಸಿದವನೇ ಜೆಡಿಎಸ್‌ನ ಗೂಂಡಾ ಅನಿಲ್‌ಕುಮಾರ್!

ಈ ಅನಿಲ್ ಬಂದಿದ್ದೇ ತಡ, ಕ.ಸಾ.ಪ. ಕಸದ ತೊಟ್ಟಿಯಾಗಿ ಹೋಯ್ತು... ರಾಜಕೀಯದ ಗಬ್ಬು ಗಾಳಿ ಕ.ಸಾ.ಪ.ದಿಂದ ಹೊರಬರುವಂತಾಯ್ತು!

ಈ ಅನಿಲ್‌ನ ಹಿನ್ನೆಲೆಯಾದರೂ ಎಂತಹುದು, ಈತ ಕತೆಗಾರನೇ, ಸಾಹಿತಿಯೇ? **Nothing at all.** ಇವನೊಬ್ಬ ಹುಟ್ಟಾ ಹಲಾಲುಕೋರ.... 1996 ರಲ್ಲಿ ಸ್ಥಳೀಯ ಪಾಕ್ಷಿಕ ಪತ್ರಿಕೆಯ ವರದಿಗಾರರೊಬ್ಬರನ್ನು ನಡುರಸ್ತೆಯಲ್ಲಿ ಹಿಗ್ಗಾಮುಗ್ಗಾ ಹೊಡೆದಂತಹ ಮಹಾನ್ ರೌಡಿ ಫೆಲೊ ಈ ಅನಿಲ್.... ಇಂತಹವನಿಂದ ಕ.ಸಾ.ಪ. ಅದ್ದೇಗೆ ಉದ್ಧಾರವಾದೀತು? ಸದ್ಯಕ್ಕೆ ರಾಜಕೀಯ ಕಾರಣಗಳಿಗಾಗಿ ಈ ಪೀಡೆ ಕಸಾಪದಿಂದ ಹೊರಬಿದ್ದಿದೆ ಎಂಬುದೇ ಒಂದಿ... ಸಮಾಧಾನದ ವಿಷಯ.


ತಾಯಪ್ಪ ಹೊಸೂರು


ಅನಿಲ್ ಕುಮಾರ್


ಪುರದ ಮಾಸ್ತರು

ಜೆಡಿಎಸ್ ಪಕ್ಷದ ಕಾರ್ಯಕರ್ತನಾಗಿ ರಾಯಚೂ... ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯನಾದ ಈ ಅನಿ... ಕ.ಸಾ.ಪ.ದ ಹೆಸರಲ್ಲಿ ಸಮಾವೇಶ ಮಾಡುತ್ತಾ ಮು... ಮೋಚಿಬಿಟ್ಟ. ಮಾನ್ವಿ ಮಹಿಳಾ ಸಾಹಿತ್ಯ ಸಮಾವೇ... ಜರುಗಿಸಿದ... ಇದು ತಿನ್ನೋದಕ್ಕೆ ಒಂದು ದಾರಿಯಾ... ತಷ್ಟೇ. ಸಮಾವೇಶದಲ್ಲಿ ಅನಿಲನ ವಿರುದ್ಧ ಪ್ರತಿಭ... ಗಳಾದವು.

ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯ್ತಿಗಳಿಂದ ಎ... 500 ರೂ.ಗಳ ಅಮೌಂಟು ಏನಾಯ್ತು ಎಂದು ಅನಿಲ... ಪ್ರಶ್ನಿಸಲಾಯ್ತು, ಕಳ್ಳ ನನ್ಮಗ ಅನಿಲ್ ಇನ್ನೇನು ಹೇಳ... ಮಾನ್ವಿ ಕ.ಸಾ.ಪ. ಕಾರ್ಯಕ್ರಮಗಳಿಗೆ ಶಾಸಕ ಬೋ... ರಾಜ್ ಸಹಕರಿಸುತ್ತಿಲ್ಲ ಎಂದು ಹೊಸ ತಗಾದೆ ತೆಗೆ... ಅಷ್ಟೇ ಸಾಕಿತ್ತು ಹುಂಬ ಬೋಸರಾಜನ ಬೆಂಬಲಿಗರಿಗ... ಎಲ್ಲ ಅನಿಲನ ವಿರುದ್ಧ ತಿರುಗಿ ಬಿದ್ದರು.

ಶಾಸಕ ಬೋಸರಾಜನಿಗೆ ಸಾಹಿತ್ಯ ಗೀಹಿತ್ಯ ಮು... ವಲ್ಲ, ಆದರೆ ಯಾವಾಗ ಮಾನ್ವಿ ಕ.ಸಾ.ಪ.ದಲ್ಲಿ ಜೆಡಿ... ಪಾಲಿಟಿಕ್ಸ್ ಶುರುವಾಯ್ತೋ ಆಗ ಬೋಸ್‌ರಾ... ಎಚ್ಚರಗೊಂಡ. ಸೀದಾ ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಪುರ... ಮೇಲೆ ಎರಗಿಬಿಟ್ಟ. ಅದರ ಪರಿಣಾಮವೇ ... ಅನಿಲ್‌ನನ್ನು ಮಾನ್ವಿ ಕ.ಸಾ.ಪ. ಅಧ್ಯಕ್ಷ ಸ್ಥಾನದಿ... ಒದ್ದು ಹೊರಹಾಕಲಾಗಿದೆ.

ಆ ಸ್ಥಾನಕ್ಕೆ ತಾಯಪ್ಪ ಹೊಸೂರು ಬಂದು ಕು... ದ್ದಾನೆ.... ಅಂತೂ ಕ.ಸಾ.ಪ.ದಿಂದ ವಿಷಾನಿಲ ಹ... ಬಿದ್ದಿದೆ...

-ಪಿ.ಕೆ. ಮಲ್ಲನಗೌಡ...

ಕಸ ಗುಡಿಸುವುದೂ ಸಹ ಶೇಕ್ಸ್‌ಪಿಯರ್‌ನು ನಾಟಕ ಬರೆಯುವಷ್ಟೇ ಸೊಗಸಾಗಿರಬೇಕು -ಮಾರ್ಟಿನ್ ಲೂಥರ್ ಕಿಂಗ್


ಮಾಟಗಾರ, ಕುಡುಕ, ಕೊಲೆಗಾರ

ಶಿರಸಂಗಿ ಮಠದ ಸ್ವಾಮಿ ಅರೆಸ್ಟ್!

ಮಿಕ ಸಿಕ್ಕಿಬಿದ್ದಿದೆ! ಇದು ಶಿರಸಂಗಿ ಮಠದ ಫಕೀರಪ್ಪ ಸ್ವಾಮಿ ಉರ್ಫ್ ಜಗದೀಶ ಸ್ವಾಮಿ!

ಇದು ಸಾಧಾರಣ ಮಿಕವಲ್ಲ; ಒಂದೂವರೆ ವರ್ಷಗಳ ಹಿಂದೆ ತನ್ನ 2 ನೇ ಹೆಂಡತಿಯನ್ನು ಕೊಂದು, ಸುಟ್ಟು ಹಾಕಿ ಸಾಕ್ಷ್ಯಗಳೇ ಇಲ್ಲದಂತೆ ಮಾಡಿದ 'ಜಾಣ' ಮಿಕ! ಎರಡು ಕಂಟ್ರಿ ಬಂದೂಕುಗಳೂ ದೊರೆತಿವೆ. ಇವನು ಹೆಂಡ್ತಿ ಕೊಂದಿದ್ದೇ ತಲೆಗೆ, ಎದೆಗೆ ಗುಂಡು ಸಿಡಿಸುವುದರ ಮೂಲಕ!

ಹೋಮ-ಹವನ, ಮಾಟ-ಮಂತ್ರ ಎಂದು ಬೆಳಗಾವಿ ಜಿಲ್ಲೆಯ ಅಮಾಯಕ ಭಕ್ತರನ್ನು ವಂಚಿಸುತ್ತಾ, ಸವದತ್ತಿ ತಾಲ್ಲೂಕಿನ ಶಿರಸಂಗಿಯ ಬೆಟ್ಟದ ಮೇಲಿನ ಗವಿಪುರ ಮಠದಲ್ಲಿ ತನ್ನ ಸಾಮ್ರಾಜ್ಯ ಸ್ಥಾಪಿಸಿಕೊಂಡಿದ್ದ ಈ ಸ್ತ್ರೀಲೋಲುಪ, ಲುಚ್ಚಾ ಜಗದೀಶಸ್ವಾಮಿಯನ್ನು ಪೊಲೀಸರೀಗ ಒದ್ದೊಯ್ಯಲೇಬೇಕಾಗಿತ್ತು. ಏಕೆಂದರೆ ಸ್ವತಃ ಗೃಹ ಸಚಿವ ಎಂ.ಪಿ. ಪ್ರಕಾಶರೇ ಈ ಕೊಲೆ ಪ್ರಕರಣದ ಕುರಿತು ತೀವ್ರ ತನಿಖೆ ನಡೆಸಲು ಆದೇಶಿಸಿಬಿಟ್ಟದ್ದರು. ಕೊಲೆಯಾದ ಗೀತಾಳ ತಂದೆ ದೇವೇಂದ್ರಪ್ಪ ಬಡಿಗೇರ ಇತ್ತೀಚೆಗಷ್ಟೇ ಕಂಪ್ಲೇಂಟ್ ಕೊಟ್ಟದ್ದು ಅದೂ ಬೆಳಗಾವಿಯ ದೇವರಾಜ್ ಅರಸ್ ಕಾಲೋನಿಯಲ್ಲಿ ತಮ್ಮ ಮನೆ ಹತ್ತಿರವೇ ಇರುವ, ಕೊಲೆಯಾದ ಗೀತಾಳಿಗೆ ಪರಿಚಯವೂ ಇದ್ದ ಎಂ.ಪಿ. ಪ್ರಕಾಶ್ ಮಗಳು ಸುಮಾರ ವರು ಧೈರ್ಯ ತುಂಬಿದ ಮೇಲೆ! ತನಿಖೆ ಕೈಗೊಂಡ ಸವದತ್ತಿ ಸಿಪಿಐ ನಾಗರಾಜ್ ಫಕೀರಪ್ಪ ಸ್ವಾಮಿ ಅಲಿಯಾಸ್ ಜಗದೀಶಸ್ವಾಮಿಯನ್ನು ಗದರಿಸಿದ್ದೇ ತಡ, ಒಂದೂವರೆ ವರ್ಷದ ಹಿಂದೆ ಮಾಡಿದ ಕೊಲೆಯ ಪಾಪವನ್ನು ಒಪ್ಪಿಗೊಂಡಿದ್ದಾನೆ ಮುತ್ಯಾಳ ಸ್ವಾಮಿ! ಈಗ ಜೈಲಲ್ಲಿ ಹೋಮಹವನ, ಮಾಟಮಂತ್ರ ಮಾಡುತ್ತಾ ಸೆಟೆಯುತ್ತಿರಲಿ ಬಿಡಿ!!







ಗೀತಾಳ ಮಕ್ಕಳು


ಡೇಂಜರ್ ನನ್ಮಗನ ಹಿಸ್ಟರಿ ಫುಲ್ ಮಿಸ್ಟರಿ...

ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಮಾಸನಗಟ್ಟಿಯ ಈ ಆಸಾಮಿ 1995 ರಲ್ಲಿ ಹಿಂದೆ ಶಿರಸಂಗಿಗೆ ವಕ್ಕರಿಸಿತು. ಶಿರಸಂಗಿಯಲ್ಲಿನ ಕಾಳಿಕಾದೇವಿ ಮಠಕ್ಕೆ ಅಪಾರ ಭಕ್ತರು. ಅಲ್ಲಿ ಹೇಗೋ ತೂರಿಕೊಂಡ ಈ ವಂಚಕನನ್ನು ಅಷ್ಟೇ ವೇಗದಲ್ಲಿ ಒದ್ದು ಹೊರಹಾಕಲಾಯ್ತು. ಅಲ್ಲೇ ಬೆಟ್ಟದ ಮೇಲಿರುವ ವೀರಶೈವರ ಗವಿಮಠಕ್ಕೆ ಜಂಪ್ ಮಾಡಿದ ಈ ಫಕೀರಪ್ಪ ಅಲ್ಲಿ 2 ದಿನ ಈಶ್ವರನ ಅನುಷ್ಠಾನ ಮಾಡಿದ. ಗವಿಮಠ ನೋಡಿಕೊಳ್ಳುತ್ತಿದ್ದ ಕಾಂತಾಮಠ ಎನ್ನುವ ಫ್ಯಾಮಿಲಿ 'ಏನೋ ಪೂಜೆ ಮಾಡ್ಕೊಂಡು ಇರ್‍ತಾನ ಬಿಡು' ಎಂದು ಲಫಂಗನಿಗೆ ಗ್ರೀನ್ ಸಿಗ್ನಲ್ ಕೊಟ್ಟದ್ದೇ ತಡ, ಸ್ವಾಮಿ ತನ್ನ ಬ್ಲ್ಯಾಕ್‌ವಿಚ್ ಬುದ್ಧಿಗೆ ಕೆಲಸ ಕೊಡಲು ಆರಂಭಿಸಿದ. ಹಿಂದೆ ತಾನು ಕಲಿತಿದ್ದ ಅರೆಬರೆ ಆಯುರ್ವೇದಿಕ್ ಉಪಚಾರ ಎಂಬ ಹೆಸರಿನ ಗೌಂಟಿ ಚಿಕಿತ್ಸೆ ಆರಂಭಿಸಿದ. ಶಿರಸಂಗಿಯ ಜನ 'ಹೋಗಲೇ, ಇದೆಲ್ಲಾ ನಮ್ ಹತ್ರ ನಡೆಯಲ್ಲ' ಎಂದರು. ಆದರೆ ಹೊರ ಊರ ಭಕ್ತರು ಹೆಚ್ಚುತ್ತಲೇ ಹೋದರು. ಸ್ವಾಮಿ ಪೊಗರಿಬಿಟ್ಟ. ಭಕ್ತರಿಗೆ ಟೋಪಿ ಇಟ್ಟೇ ಬಿಟ್ಟ! ಕಾರು ತೊಗೊಂಡ, ಧಾರವಾಡದಲ್ಲಿ ಆಸ್ತಿ ಮಾಡಿದ... ಫಾರಿನ್ ಡ್ರಿಂಕ್ಸ್, ಕಿಂಗ್ ಸಿಗರೇಟು, ಹೆಂಗಸರ ಖಯಾಲಿ... ಬಪ್ಪರೇ ಮಗನೇ ಸ್ವಾಮಿ! ಈ ಎಲ್ಲ ಹಲ್ಕಾ 'ಹಾಬಿ' ಗಳನ್ನು ನಡೆಸುತ್ತಿದ್ದುದು ಶಿರಸಂಗಿಯಲ್ಲಿ ಅಲ್ಲ; ಹುಬ್ಬಳ್ಳಿ-ಧಾರವಾಡದಲ್ಲಿ! ಧಾರವಾಡ ಹತ್ತಿರದ ತೇಗೂರಲ್ಲಿ ಶನೇಶ್ವರ ದೇವಸ್ಥಾನ ಮಾಡಿಸುತ್ತೇನೆಂದ. ಭಕ್ತರಿಂದ 11 ಎಕರೆ ಎಬ್ಬಿಸಿದ. ರಿಟೈರ್ಡ್ ಇಂಜಿನಿಯರ್ ಬಸವರಾಜಪ್ಪ ಕಿತ್ತೂರು ಈ ಹಲ್ಕಾ ಸ್ವಾಮಿಗೆ 11 ಎಕರೆ ಕೊಟ್ಟರು. ಅಲ್ಲಿ ಗುಡಿ ಎಬ್ಬಿಸಿದ. ಫಕೀರಪ್ಪ ಕುಂಬಾರ [illegible] 7 ಎಕರೆ ಕೊಟ್ಟರು. ಅದ [illegible] ಮಾಡಿ, ಅಲ್ಲೊಂದು ಚಂದದ ಮನೆ ಕಟ್ಟಿ ತನ್ನ ಚಟ ಸಾಮ್ರಾಜ್ಯವನ್ನಾಗಿ ಅದನ್ನು ಪರಿವರ್ತಿಸಿದ. ಗೀತಾಳನ್ನು ಕೊಂದಿದ್ದು ಇಲ್ಲಿಯೇ! ಹಾಗೇ ನೋಡಿದರೆ ತೋಟ, ಮನೆ ಇರುವ ಈ 7 ಎಕರೆ ವಿವಾದಿತ ಭೂಮಿ. ಇದಕ್ಕೆ ನಿಜವಾದ ಮಾಲೀಕರು ಬರಗುದಾಸ ಕಾನಕುಂಚಿಯವರು. ವಿವಾದದಲ್ಲಿದ್ದರೂ ಸ್ವಾಮಿಯೇ ಇಷ್ಟು ದಿನ ಫಲ ಉಂಡ!

ಬೆಳಗಾವಿ

ಗೀತಾ ಹೇಗೆ ತಗುಲಿಕೊಂಡಳು?


ಬೆಳಗಾವಿಯ ದೇವೇಂದ್ರಪ್ಪ ಬಡಿಗೇರರ ಮಗಳು ಗೀತಾಗೆ ಸ್ವಲ್ಪ ಮಾನಸಿಕ ಅಸ್ವಸ್ಥತೆ ಇತ್ತು. ಸದಲಗಾದ ರವಿ ಪತ್ತಾರ್‌ಗೆ ಮದುವೆ ಮಾಡಿ ಕೊಟ್ಟರು. 15 ದಿನ ಸಂಸಾರ ಮಾಡಿದ ಗೀತಾ ಖಾಯಂ ಆಗಿ ತವರಿಗೆ ವಾಪಸ್ಸಾದಳು. ಆಗ ತಂದೆ ದೇವೇಂದ್ರಪ್ಪ ಯಾರದೋ ಮಾತು ಕೇಳಿ ಮಗಳನ್ನು ಶಿರಸಂಗಿ ಗವಿಮಠಕ್ಕೆ ತಂದರು. ಏನೇನೋ ರೀಲು ಬಿಟ್ಟ ಕಳ್ಳಸ್ವಾಮಿ 'ಗೀತಾ ಒಂದೆರ್‍ಡು ತಿಂಗ್ಳು ಇಲ್ಲೇ ಇದ್ರ ಆರೋಗ್ಯವಾಗ್ತಾಳ' ಎಂದು ನಂಬಿಸಿಯೇ ಬಿಟ್ಟ. ಗೀತಾ, ತಾಯಿ ಅಲ್ಲೇ ಉಳಿದರು. ಗೀತಾಳ ತಾಯಿಯನ್ನು ಬೇರೊಂದು ಕೆಲಸಕ್ಕೆ ಬೇರೆ ಊರಿಗೆ ಕಳಿಸಿದ. ತಾಯಿ ತಿರುಗಿ ಬಂದಾಗ ಗೀತಾ ನಾಪತ್ತೆ! ಖದೀಮ ಸ್ವಾಮಿ ಕೈ ತೊಳೆದುಕೊಂಡ. ಗೀತಾ ಮನೆಯವರು ಹುಡುಕಿ ಹುಡುಕಿ ಸುಸ್ತಾದರು. ವರ್ಷದ ನಂತರ ಗೀತಾ ಧಾರವಾಡ ಬಳಿಯ ತೇಗೂರಲ್ಲಿ ಇರುವುದಾಗಿ ತಿಳಿಯಿತು. ತಂದೆ-ತಾಯಿ ಅಲ್ಲಿಗೆ ಹೋದಾಗ ಗಾಬರಿ! ಗೀತಾಗೆ ಒಂದು ಮಗುವಿದೆ!! ಲುಚ್ಚಾ ಸ್ವಾಮಿ ಗೀತಾಳನ್ನು ಲಗ್ನವಾಗಿ, ತಂದೆಯೂ ಆಗಿಬಿಟ್ಟಿದ್ದ. ಏನಾದರಾಗಲಿ ಮಗಳು ಆರಾಮಾಗಿದ್ದಾಳೆ ಎಂದು ತಂದೆತಾಯಿ ವಾಪಸ್ಸಾದರು. ನಂತರದ ದಿನಗಳಲ್ಲಿ ಗೀತಾಗೆ [illegible] ಸ್ವಾಮಿ ಬೇರೆ ಹೆಂಗಸರನ್ನು ಮನೆಗೆ [illegible] ಗೀತಾ ಆಗಾಗ [illegible] ಕಿತ್ತದಲ್ಲಿ ತಂದೆಗೂ ತಿಳಿಸಿದಳು. ವಾಪಸ್ ಬೆಳಗಾವಿಗೆ ತಂದರು. ಮತ್ತೆ ಧೈರ್ಯ ಮಾಡಿದ ಗೀತಾ ಧಾರವಾಡಕ್ಕೆ ಬಂದಳು. ಒಂದಿಷ್ಟು ದಿನ ಹಾಗೇ ಸಾಗಿತು ಮತ್ತೆ ಗೀತಾ ಸ್ವಾಮಿಯ ಲುಚ್ಚಾ ಕೆಲಸಗಳನ್ನು ವಿರೋಧಿಸಿದಳು. ಪ್ಲಾನು ಹಾಕಿದ ಸ್ವಾಮಿ ತನ್ನ ಅಳಿಯ ಶಂಭುಲಿಂಗ, ಡ್ರೈವರ್ ತಿಮ್ಮಪ್ಪ ಇಂಚಲ್‌ನನ್ನು ಸೇರಿಸಿಕೊಂಡ. ಒಂದಿನ ತೋಟದ ಮನೆಯಲ್ಲಿ ಗೀತಾಳಿಗೆ ಗುಂಡಿಟ್ಟೇ ಬಿಟ್ಟ. ಹೆಣವನ್ನು ಸುಟ್ಟು ಹಾಕಿ ಸಾಕ್ಷ್ಯ ಮುಚ್ಚಿದ. ಗೀತಾ ಮನೆಯವರಿಗೆ 'ನಿಮ್ ಮಗ್ಳಿಗೆ ಅಕ್ರಮ ಸಂಬಂಧ ಇತ್ತು, ಯಾರ ಜೊತೆನೋ ಓಡಿ ಹೋಗಿರ್‍ಬೇಕು' ಎಂದು ರೀಲು ಸುತ್ತಿದ. ಮಕ್ಕಳನ್ನು ಶಿಗ್ಗಾವಿಯ ತನ್ನಕ್ಕನ ಮನೇಲಿ ಬಿಟ್ಟು, ಶಿರಸಂಗಿಯ ತನ್ನ ಕಂತ್ರಿ ಮಾಟ ಮಂತ್ರ ಮುಂದುವರೆಸಿ ಶ್ರೀಮಂತನಾಗುತ್ತಲೇ ಹೋದ. ಕೊನೆಗೆ ಎಂ.ಪಿ. ಪ್ರಕಾಶ್ ಮಗಳು ಸುಮಾ ಧೈರ್ಯ ಕೊಟ್ಟ ಮೇಲೆ ದೂರು ದಾಖಲಾಗಿ ಮೊನ್ನೆ 13 ನೇ ತಾರೀಖು ಫಕೀರಪ್ಪ ಸ್ವಾಮಿ ಉರ್ಫ್ ಜಗದೀಶ ಸ್ವಾಮಿ ಎಂಬ ದೋಖಾ ಗಿರಾಕಿ ಜೈಲು ಪಾಲಾಗಿದೆ. ಈ ಮೊದಲು ಇನ್ನೊಂದು ಹುಡುಗಿಯನ್ನು ರೇಪ್ ಮಾಡಿ ಮರ್ಡರ್ ಮಾಡಿದ ಸುದ್ದಿಗಳಿವೆ. ಆ ಹಳೇ ಕೇಸ್‌ನ್ನು ಮುಚ್ಚಿಹಾಕಲು ಪೊಲೀಸರು ಯತ್ನಿಸುತ್ತಿದ್ದಾರಾ?



ಶಿರಸಂಗಿಯ ಗವೀಶ್ವರ ಗುಹಾ ದೇವಾಲಯ

-ಮೇಘರಾಜ್


ಆವತ್ತಿಂದಲೂ ಇವ್ನ ಹಲ್ಕಾನೇ!



ಎಸ್.ಎಸ್.ಎಲ್.ಸಿ. ನಂತರ ಈ ಸ್ವಾಮಿ ಲಕ್ಷ್ಮೇಶ್ವರ ಬಳಿಯ ಮುಕ್ತಿ ಮಂದಿರದಲ್ಲಿ ಒಂದಿಷ್ಟು ಗೌಂಟಿ ಔಷಧಿ ಉಪಚಾರ ಕಲಿತ. ಹುಬ್ಬಳ್ಳಿಯ ಉಣಕಲ್ಲಿಗೆ ವಕ್ಕರಿಸಿ ವಸಂತಾ ಎನ್ನುವವರನ್ನು ಮದುವೆಯಾದ. ಗೌಂಟಿ ಔಷಧ, ಮಂತ್ರ ಮಾಟಗಳಿಂದ ಉಣಕಲ್ ಜನರನ್ನು ಮೋಹಗೊಳಿಸಿದ. ಜನರೆಲ್ಲ ಸೇರಿ ಹೈವೇ ಬಳಿ 2 ಎಕರೆ ಭೂಮಿ ಕೊಟ್ಟರು. ಅಲ್ಲಿ ಸಿದ್ಧರಾಮೇಶ್ವರ ಗುಡಿ ಎಬ್ಬಿಸಿ ತನ್ನ 'ಕೈ ಚಳಕ' ಮುಂದುವರೆಸಿದ. ಹುಟ್ಟಿದ ಮಗನಿಗೆ ಸಿದ್ಧರಾಮ ಎಂದು ಹೆಸರಿಟ್ಟ. ಮೊದಲ ಪತ್ನಿ ವಸಂತಾಳನ್ನು ಮುಗಿಸಿಬಿಟ್ಟದ್ದಾನೇನೊ?

ಖಾಸಗಿ ಆಸ್ಪತ್ರೆ ನಡೆಸುವ ಸರ್ಕಾರಿ ವೈದ್ಯರಿಗೆ ಮತ್ತೆರಡು ಬಲಿ!

ಗದಗೇರಿ ಗ್ರಾಮದ ಎರಡು ಜೀವಗಳನ್ನು ಬಲಿ ತೆಗೆದುಕೊಂಡ ಸರ್ಕಾರಿ ಆಸ್ಪತ್ರೆ ವೈದ್ಯ ರಮೇಶ ಮೂಲಿಮನಿ ಒದೆ ತಿಂದು, ನೌಕರಿಯಿಂದಲೇ ಒದ್ದೋಡಿಸಲ್ಪಟ್ಟ ಘಟನೆ ಕೊಪ್ಪಳದ ಸರ್ಕಾರಿ ಆಸ್ಪತ್ರೆಯ ವೈದ್ಯರುಗಳ ಹಣದಾಹಕ್ಕೆ ಮತ್ತೊಂದು ಸಾಕ್ಷಿಯಾಗಿದೆ.



ಸರ್ಕಾರಿ ವೈದ್ಯರ ಖಾಸಗಿ ಕ್ಲಿನಿಕ್!

ಕೊಪ್ಪಳದ ಜಿಲ್ಲಾ ಆರೋಗ್ಯಾಧಿಕಾರಿ (ಡಿ.ಎಚ್.ಒ) ಮುಲ್ಲಾನೇ ಭಯಂಕರ ಭ್ರಷ್ಟನಾಗಿರುವಾಗ ಆರೋಗ್ಯ ಇಲಾಖೆಯೇ [illegible] ಕೊಟ್ಟಿಯಂತಾಗಿ ವೈದ್ಯರೆಂಬ ಹಂದಿಗಳಿಗೆ ಸ್ವರ್ಗವಾಗಿ ಹೋಗಿದೆ. ಮೊನ್ನೆ ವಿಷಪೂರಿತ ಆಹಾರ [illegible] ಒಂದು ಕುಟುಂಬದ ನಾಲ್ವರು ಆಸ್ಪತ್ರೆಗೆ ಅಡ್ಮಿಟ್ ಆದಾಗ, ಈ ಡಾ. ರಮೇಶ್ ಮೂಲಿಮನಿ [illegible] ಔಷಧಿ ತರಿಸಿ, ನಾಲ್ವರಿಗೂ ಸಲೈನ್ [illegible] ರಾತ್ರಿಯಾದರೂ ನಾಪತ್ತೆ! ಕರೆಯಲು [illegible] ಮಾತು ಬೇರೆ! ಇಪ್ಪತ್ತು ಸಾವಿರ ಕೊಡಿ ಎಂದೂ ಬೊಗಳಿದ್ದಾನೆ. ರೊಚ್ಚಿಗೆದ್ದ ಜನ ಕೇಳಿಯಾರೆ? ಬೆಂಡೆತ್ತಿ ಎಳೆದು ತಂದಿದ್ದಾರೆ. ಅಷ್ಟೊತ್ತಿಗೆ ಮಹಾಬಳೇಶಪ್ಪ ಎನ್ನುವ ರೋಗಿಯ ಜೀವ ಹೋಗಿತ್ತು. ಮಹಾಬಳೇಶಪ್ಪನ ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಗದಗ ಆಸ್ಪತ್ರೆಗೆ ಸಾಗಹಾಕಿ ಓಡಿ ಹೋಗಿದ್ದಾನೆ ಡಾ. ರಮೇಶ್. ಗದಗಿಗೆ ಮುಟ್ಟುವ ಮುನ್ನ ಮಗ ಮಲ್ಲಪ್ಪನ ಪ್ರಾಣವೂ ಹೋಗಿದೆ. ಇನ್ನಿಬ್ಬರು ಹೇಗೋ ಬದುಕುಳಿದಿದ್ದಾರೆ. ಸುದ್ದಿ ತಿಳಿದು ಓಡೋಡಿ ಬಂದ [illegible] ಡಿಎಚ್‌ಓ ಮುಲ್ಲಾ ಒದೆಗಳಿಂದ ಪಾರಾಗಿದ್ದಾನೆ. ಈ ಮುಲ್ಲಾನ ಶಿಷ್ಯ ಡಾ. ರಮೇಶ್ 304 ಕಲಂ ಅಡಿಯಲ್ಲಿ ಅರೆಸ್ಟಾಗಿದ್ದಾನೆ. ಸಚಿವ ಅನ್ಸಾರಿ ಹೆಸರಲ್ಲಿ ಮೆರೆಯುತ್ತಿರುವ ಡಿಎಚ್‌ಓ [illegible] ಶ್ರೀರಕ್ಷೆಯಲ್ಲಿ ಜಿಲ್ಲಾ ಆಸ್ಪತ್ರೆಯ ವೈದ್ಯರೇ ಖಾಸಗಿ ಆಸ್ಪತ್ರೆ ನಡೆಸುತ್ತಾ ಬಡರೋಗಿಗಳನ್ನು ಸುಲಿಯುತ್ತಿದ್ದಾರೆ.

ಕೊಪ್ಪಳ

ಜಿಲ್ಲಾ ಸರ್ಕಾರಿ ಆಸ್ಪತ್ರೆಯಿಂದ 50 ಅಡಿ ದೂರದಲ್ಲಿರುವ ಸ್ವಂತ ಮನೆಯಲ್ಲಿ, ಸೊಸೆ ಹೆಸರಲ್ಲಿ ಪ್ರಾಕ್ಟೀಸು ಮಾಡುವ ಹೃದಯಹೀನನ ಹೆಸರು ಡಾ. ಲಕ್ಷ್ಮಿನಾರಾಯಣ. ಈ 'ಹೃದಯತಜ್ಞ' ಸರ್ಕಾರಿ ಆಸ್ಪತ್ರೆಗೆ ಬಂದ ಹೆರಿಗೆ ಪೇಶಂಟುಗಳನ್ನು ಸೊಸೆ ಕಡೆ, ಶಸ್ತ್ರ ಚಿಕಿತ್ಸೆ ಕೇಸುಗಳನ್ನು ತನ್ನ ಖಾಸಗಿ ಆಸ್ಪತ್ರೆ ಕಡೆ ತಿರುಗಿಸಿಬಿಡುತ್ತಾನೆ. ದೇವರಾಜ್ ಅರಸ್ ಕಾಲೋನಿಯ ಜೈಲರ್‌ನ ಸಾವಿಗೆ ಕಾರಣನಾಗಿ ಒದೆ ತಿನ್ನದೇ ಬಚಾವಾಗಿದ್ದ ಈ ಲಕ್ಷ್ಮಿನಾರಾಯಣ ಮೊನ್ನೆ ಡೆಡ್ ಬಾಡಿಗಳ ಪೋಸ್ಟ್ ಮಾರ್ಟಂಗೂ ರೊಕ್ಕ ಕೇಳಿದಾಗ ಒದೆ ಬೀಳಲಿದ್ದವು.



ಮುಲ್ಲಾ

ಸರ್ಕಾರಿ ಆಸ್ಪತ್ರೆಯ 'ಸಂಡೇ ಡಾಕ್ಟರ್' ಎಂದೇ ಕುಖ್ಯಾತನಾಗಿರುವ ಡಾ. ದಾಸರಡ್ಡಿ ಸರ್ಜರಿ ಕೇಸುಗಳನ್ನು ಡಾ. ರಾಂಪುರ್ ಕಡೆ ಕಳಿಸಿ ಕಮಿಷನ್ ಹೊಡೆಯುತ್ತಾನೆ. ಸದಾ ರೋಗಿಗಳನ್ನು ಹಲಗೇರಿ ಬಾಜಾನಲ್ಲಿರುವ ತನ್ನ ಆಸ್ಪತ್ರೆಗೆ ಎಳೆತಂದು ಸುಲಿದೇ ಕಳಿಸುತ್ತಾನೆ.

ಇದೇ ಸರ್ಕಾರಿ ಆಸ್ಪತ್ರೆಯ ವೈದ್ಯ ಗಿರಿಧರ [illegible] ಡಾ. [illegible] ಹೆರಿಗೆಗೆ ಬಂದ [illegible] ಹೆರಿಗೆ ಪೇಶಂಟುಗಳನ್ನು ತಮಗೆ ಬೇಕಾಗಿರುವ ಹೊಸಪೇಟೆಯಲ್ಲಿನ ಹಾಸ್ಪಿಟಲ್‌ಗೆ ಅಟ್ಟುತ್ತಾರೆ. ಇಂದ್ರಗಿಯ ಡಾ. ಪ್ರಶಾಂತ್ ಬಾಬು ಹಿರೇಬೊಮ್ಮನಾಳದಲ್ಲಿ ನೂರೆಂಟು ಹಗರಣ ಮಾಡಿ ಬಂದಿದ್ದರೆ, ಡಾ. ಬಿಜ್ಜಳ ಸ್ವಲ್ಪದರಲ್ಲೇ ಲೋಕಾಯುಕ್ತರಿಂದ ಪಾರಾಗಿದ್ದಾನೆ.

ಕೆಲವು ಖಾಸಗಿ ಮೆಡಿಕಲ್ ಶಾಪ್‌ಗಳಲ್ಲಿ ಸರ್ಕಾರಿ ಆಸ್ಪತ್ರೆಯ ಔಷಧಿಗಳು ಮಾರಲ್ಪಡುತ್ತವೆ. ಸರ್ಕಾರಿ ಆಸ್ಪತ್ರೆಯ ಎದುರಿನ ಮೆಡಿಕಲ್ ಶಾಪ್ ಮತ್ತು ಲ್ಯಾಬೋರೇಟರಿಗಳು ಭರ್ಜರಿಯಾಗಿ ಮೆರೆಯಲು ಈ ವೈದ್ಯರುಗಳು ಕಾಯಾ ವಾಚಾ ಮನಸಾ ದುಡಿಯುತ್ತಿದ್ದಾರೆ.

ಇಷ್ಟೆಲ್ಲಾ ಆದ್ರೂ ಡಿಎಚ್‌ಓ ಮುಲ್ಲಾ ಏನು ಹರಿತ್ತಿದ್ದಾನಿ? ಎಂದು ಕೇಳಬೇಡಿ. ಆತನೂ ಸಂಜೆ ಎಂಟಕ್ಕೇ ಹಸನ್ ಸರ್ಕಲಿನಲ್ಲಿಯ ತನ್ನ ಅನಧಿಕೃತ ನೊಹೆಲ್ ಆಸ್ಪತ್ರೆಗೆ ವಕ್ಕರಿಸುತ್ತಾನೆ. ಅನ್ಸಾರಿಯ ಈ ಹಿಂಡಗಳ ಕಾಟದಿಂದ ಬಡರೋಗಿಗಳನ್ನು ಕಾಪಾಡುವವರಾರು? ಇವರಿಗೆ [illegible] ಚೂರೋಗಕ್ಕೆ ತುತ್ತಾಗಿರುವಾಗ ಯಾರು [illegible]

-ವರದಿಗಾರ

ತರುಣಿಯರ ಮಾನರಕ್ಷಣೆ-ಉದಯವಾಣಿ ಸ್ಟೈಲ್

ತಾ. 11.9.2006 ರ ಉದಯವಾಣಿ (ಮಣಿಪಾಲ) ಯಲ್ಲಿ ವರದಿಯೊಂದನ್ನು ಬಾಕ್ಸ್ ಮಾಡಿ ಹಾಕಲಾಗಿದೆ. "ಕೆಎಸ್ಸಾರ್ಟಿಸಿ ನಿಲ್ದಾಣದಲ್ಲಿ ವಿದ್ಯಾರ್ಥಿನಿಯರಿಗೆ ಕಿರುಕುಳ?" ಎಂಬ ಶೀರ್ಷಿಕೆಯಡಿ, ದಪ್ಪಕ್ಷರಗಳಲ್ಲಿ, ಓದುಗರ ಗಮನ ಸೆಳೆಯುವಂತೆ ಪ್ರಕಟವಾಗಿರುವ ಈ ವರದಿ ಹೀಗಿದೆ:

"ಪುತ್ತೂರು, ಸೆ. 10: ಪುತ್ತೂರು ನಗರದ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಸಂಜೆ ವೇಳೆ ಕಾಲೇಜು ತರುಣಿಯರಿಗೆ ಕಿರುಕುಳ ನೀಡುವ ಯುವಕರ ತಂಡವೊಂದು ತಲೆ ಎತ್ತಿರುವ ಕುರಿತು ವಿದ್ಯಾರ್ಥಿನಿಯರಿಂದ ದೂರುಗಳು ಬಂದಿವೆ.

ಎರಡು ತಿಂಗಳ ಹಿಂದೆ ಬಸ್ ನಿಲ್ದಾಣದ ಬಳಿ ಕಾಲೇಜು ತರುಣಿಯರನ್ನು ಹಿಂಬಾಲಿಸುತ್ತಿದ್ದ ಇಬ್ಬರು ಯುವಕರಿಗೆ ಹಿಂದೂ ಸಂಘಟನೆಗಳ ಕಾರ್ಯಕರ್ತರು ಗೂಸಾ ನೀಡಿದ ಬಳಿಕ ಉಪಟಳ ಕಡಿಮೆಯಾಗಿತ್ತು. ಆದರೆ ಇದೀಗ ಯುವಕರ ಉಪಟಳ ಆರಂಭಗೊಂಡಿದೆ. ಬಸ್‌ನಿಲ್ದಾಣದಲ್ಲಿ ಲೇಡೀಸ್ ರೂಂನಲ್ಲಿ ಇಣುಕುವುದು, ಚೇಷ್ಟೆ ಮಾಡುವುದು ಮೊದಲಾದ ಕೃತ್ಯಗಳನ್ನು ಈ ಯುವಕರು ಮಾಡುತ್ತಿದ್ದಾರೆ ಎಂಬ ದೂರುಗಳಿವೆ.

ಪುತ್ತೂರು ನಗರ ಪೊಲೀಸರು ಅನುಮಾನಾಸ್ಪದರನ್ನು ಹಿಡಿಯುತ್ತಾರೆಯೇ ಹೊರತು ಕಾಲೇಜು ತರುಣಿಯರಿಗೆ ಉಪಟಳ ನೀಡುವ ಬೀದಿ ಕಾಮಣ್ಣರ ಕಡೆಗೆ ಕಣ್ಣೆತ್ತಿಯೂ ನೋಡುವುದಿಲ್ಲ ಎಂದು ವಿದ್ಯಾರ್ಥಿನಿಯರು ಆರೋಪಿಸಿದ್ದಾರೆ.

ಮೊಬೈಲ್ ಫೋನ್ ಮೂಲಕ ತರುಣಿಯರ ಫೋಟೋಗಳನ್ನು ತೆಗೆಯಲು ಯತ್ನಿಸುವುದು, ಬಸ್ಸಿನಲ್ಲಿ ಹಿಂಬಾಲಿಸುವುದು ಮೊದಲಾದ ಕೃತ್ಯಗಳಿಗೆ ಪೊಲೀಸರು ತಡೆಯೊಡ್ಡದಿದ್ದಲ್ಲಿ ಬೀದಿ ಕಾಮಣ್ಣರ ವಿರುದ್ಧ ನೇರ ಕಾರ್ಯಾಚರಣೆ ನಡೆಸಬೇಕಾದೀತೆಂದು ಪುತ್ತೂರಿನ ಹಿಂದೂ ಪರಿವಾರ ಸಂಘಟನೆಗಳು ಎಚ್ಚರಿಸಿವೆ. ಇದರಿಂದಾಗುವ ಯಾವುದೇ ಪರಿಣಾಮಗಳಿಗೆ ಪೊಲೀಸು ಇಲಾಖೆ ಹೊಣೆಯಾಗಲಿದೆ ಎಂದು ತಿಳಿಸಿವೆ."

(ಉದಯವಾಣಿ (ಮಣಿಪಾಲ) 11.9.06 ಪುಟ 10)

ವೃತ್ತಿಧರ್ಮ ಹಾಗೂ ಕಾಮನ್‌ಸೆನ್ಸ್ ಎರಡೂ ಇಲ್ಲದ ಮೂರ್ಖನೊಬ್ಬನ ವರದಿ ಇದು ಎಂಬುದು ಮೊದಲ ಓದಿಗೇ ಸ್ಪಷ್ಟವಾಗುತ್ತದೆ. ವರದಿಯಲ್ಲಿ ಯಾವ ನಿರ್ದಿಷ್ಟ ಘಟನೆಯನ್ನೂ ಹೇಳಿಲ್ಲ; ಯಾವ ವ್ಯಕ್ತಿಯನ್ನೂ ಹೆಸರಿಸಿಲ್ಲ, ಕಾಲೇಜು ತರುಣಿಯರಿಗೆ ಕಿರುಕುಳ ಕೊಟ್ಟ ಬಗ್ಗೆ ಯಾರು, ಯಾರಿಗೆ, ಯಾವಾಗ ದೂರು ಕೊಟ್ಟರು ಎಂಬ ವಿವರವೂ ಇಲ್ಲ. ಆದರೆ ವರದಿಯಲ್ಲಿ ಹಿಂದೂ ಸಂಘಟನೆಗಳ ಪ್ರಸ್ತಾಪವಿರುವುದರಿಂದ, ಇದರ ಟಾರ್ಗೆಟ್ ಪುತ್ತೂರಿನ ಮುಸ್ಲಿಮ್ ಯುವಕರು ಎಂಬುದನ್ನು ಯಾರಾದರೂ ಊಹಿಸಬಹುದು. ಪುತ್ತೂರಿನ ಪೊಲೀಸರು ದಂಡಪಿಂಡಗಳು; ಹಾಗಾಗಿ ಊರಿನ ಬೀದಿಕಾಮಣ್ಣರನ್ನು "ಗೂಸಾ ಕೊಡುವುದರ" ಮುಖಾಂತರ ಸರಿದಾರಿಗೆ ತರುತ್ತಿರುವುದು ಪುತ್ತೂರಿನ ಹಿಂದೂ ಪರಿವಾರ ಎಂಬ ಮಾಹಿತಿಯನ್ನೂ ಈ ವರದಿ ಕೊಡುತ್ತದೆ. ಪುತ್ತೂರಿನ ಪೊಲೀಸ್ ಸ್ಟೇಷನ್ ಬಸ್‌ಸ್ಟಾಂಡ್ ಸಮೀಪದಲ್ಲಿದೆ. "ಬಸ್‌ಸ್ಟಾಂಡಿನಲ್ಲಿ ಪೊಲೀಸ್ ಸಿಬ್ಬಂದಿ 24 ಗಂಟೆಯೂ ಡ್ಯೂಟಿಯಲ್ಲಿರುತ್ತದೆ; ಆಫೀಸರ್‌ಗಳೂ ಬೀಟ್ ಮಾಡುತ್ತಾರೆ. ನಮ್ಮ ಗಮನಕ್ಕೆ ಬಾರದೆ ಇಂತಹದೆಲ್ಲ ನಡೆಯುವುದು ಸಾಧ್ಯವೇ ಇಲ್ಲ" ಎಂದು ಪುತ್ತೂರು ಪೊಲೀಸ್ ಸ್ಟೇಷನ್‌ನ ಮುಖ್ಯಾಧಿಕಾರಿ ನನಗೆ ತಿಳಿಸಿದರು. "ಯಾವ ವಿದ್ಯಾರ್ಥಿನಿಯಿಂದಲೂ ಇದುವರೆಗೆ ನನಗೆ ಇಂತಹ ಕಿರುಕುಳದ ದೂರು ಬಂದಿಲ್ಲ; ಪುತ್ತೂರು ಬಸ್‌ಸ್ಟಾಂಡ್ ನಾರ್ಮಲ್ ಆಗಿದೆ" ಎಂದು ಅವರು ಒತ್ತಿಒತ್ತಿ ಹೇಳಿದರು (ತಾ. 12.9.06 ರಂದು ಫೋನ್ ಸಂಭಾಷಣೆಯಲ್ಲಿ). ವರದಿಯಲ್ಲಿ ಹೇಳಲಾಗಿರುವ ಕಿರುಕುಳಗಳು ಲೇಡಿಸ್ ರೂಂನಲ್ಲಿ ಇಣುಕುವುದು, ಚೇಷ್ಟೆ ಮಾಡುವುದು, ಮೊಬೈಲ್ ಫೋನ್ ಮುಖಾಂತರ ತರುಣಿಯರ ಫೋಟೋಗಳನ್ನು ತೆಗೆಯಲು ಯತ್ನಿಸುವುದು, ಬಸ್ಸಿನಲ್ಲಿ ಹಿಂಬಾಲಿಸುವುದು(?) ನಿಜವೇ ಆಗಿದ್ದರೂ, ರಾಜ್ಯಮಟ್ಟದ ಪತ್ರಿಕೆಯೊಂದರಲ್ಲಿ ಅದು ಇಷ್ಟು ಮಹತ್ವದ ಸುದ್ದಿಯಾಗಿ ಪ್ರಕಟವಾಗಬೇಕೆ? ಉದಯವಾಣಿ ಮೂರ್ಖ ಪತ್ರಿಕೆಯಷ್ಟೇ ಅಲ್ಲ; ಅದು ಕರಾವಳಿಯ ಹಿಂದೂತ್ವವಾದಿಗಳ ಮನೋರೋಗದ ಒಂದು ಅಭಿವ್ಯಕ್ತಿಯೂ ಹೌದು ಎಂಬುದು ಈ ವರದಿಯಿಂದ ಸ್ಪಷ್ಟವಾಗಿದೆ.

> 10 UDAYAVANI – MANIPAL - 11-9-2006
>
> ## ಕೆಎಸ್ಸಾರ್ಟಿಸಿ ನಿಲ್ದಾಣದಲ್ಲಿ ವಿದ್ಯಾರ್ಥಿನಿಯರಿಗೆ ಕಿರುಕುಳ?
>
> ಪುತ್ತೂರು, ಸೆ.10: ಪುತ್ತೂರು ನಗರದ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಸಂಜೆ ವೇಳೆ ಕಾಲೇಜು ತರುಣಿಯರಿಗೆ ಕಿರುಕುಳ ನೀಡುವ ಯುವಕರ ತಂಡವೊಂದು ತಲೆ ಎತ್ತಿರುವ ಕುರಿತು ವಿದ್ಯಾರ್ಥಿನಿಯರಿಂದ ದೂರುಗಳು ಬಂದಿವೆ.
>
> ಎರಡು ತಿಂಗಳ ಹಿಂದೆ ಬಸ್ ನಿಲ್ದಾಣದ ಬಳಿ ಕಾಲೇಜು ತರುಣಿಯರನ್ನು ಹಿಂಬಾಲಿಸುತ್ತಿದ್ದ ಇಬ್ಬರು ಯುವಕರಿಗೆ ಹಿಂದೂ ಸಂಘಟನೆಗಳ ಕಾರ್ಯಕರ್ತರು ಗೂಸಾ ನೀಡಿದ ಬಳಿಕ ಉಪಟಳ ಕಡಿಮೆಯಾಗಿತ್ತು. ಆದರೆ ಇದೀಗ ಯುವಕರ ಉಪಟಳ ಆರಂಭಗೊಂಡಿದೆ. ಬಸ್ ನಿಲ್ದಾಣದಲ್ಲಿ ಕಾಲೇಜು ತರುಣಿಯರಿಗೆ ಕಿರುಕುಳ ಕೊಡುವುದೇ ಈ ಯುವಕರ 'ವೃತ್ತಿ'ಯಾಗಿದೆ. ಬಸ್ ನಿಲ್ದಾಣದ ಲೇಡೀಸ್ ರೂಂನಲ್ಲಿ ಇಣುಕುವುದು, ಚೇಷ್ಟೆ ಮಾಡುವುದು ಮೊದಲಾದ ಕೃತ್ಯಗಳನ್ನು ಈ ಯುವಕರು ಮಾಡುತ್ತಿದ್ದಾರೆ ಎಂಬ ದೂರುಗಳಿವೆ.
>
> ಪುತ್ತೂರು ನಗರ ಪೊಲೀಸರು ಅನುಮಾನಾಸ್ಪದರನ್ನು ಹಿಡಿಯುತ್ತಾರೆಯೇ ಹೊರತು ಕಾಲೇಜು ತರುಣಿಯರಿಗೆ ಉಪಟಳ ನೀಡುವ ಬೀದಿ ಕಾಮಣ್ಣರ ಕಡೆಗೆ ಕಣ್ಣೆತ್ತಿಯೂ ನೋಡುವುದಿಲ್ಲ ಎಂದು ವಿದ್ಯಾರ್ಥಿನಿಯರು ಆರೋಪಿಸಿದ್ದಾರೆ.
>
> ಮೊಬೈಲ್ ಫೋನ್ ಮೂಲಕ ತರುಣಿಯರ ಫೋಟೋಗಳನ್ನು ತೆಗೆಯಲು ಯತ್ನಿಸುವುದು, ಬಸ್ಸಿನಲ್ಲಿ ಹಿಂಬಾಲಿಸುವುದು ಮೊದಲಾದ ಕೃತ್ಯಗಳಿಗೆ ಪೊಲೀಸರು ತಡೆಯೊಡ್ಡದಿದ್ದಲ್ಲಿ ಬೀದಿ ಕಾಮಣ್ಣರ ವಿರುದ್ಧ ನೇರ ಕಾರ್ಯಾಚರಣೆ ನಡೆಸಬೇಕಾದೀತೆಂದು ಪುತ್ತೂರಿನ ಹಿಂದೂ ಪರಿವಾರ ಸಂಘಟನೆಗಳು ಎಚ್ಚರಿಸಿವೆ. ಇದರಿಂದಾಗುವ ಯಾವುದೇ ಪರಿಣಾಮಗಳಿಗೆ ಪೊಲೀಸ್ ಇಲಾಖೆ ಹೊಣೆಯಾಗಲಿದೆ ಎಂದು ತಿಳಿಸಿವೆ.

ಉದಯವಾಣಿಯಲ್ಲಿ ಈ ಬಗೆಯ ವರದಿ ಪ್ರಕಟವಾಗುತ್ತಿರುವುದು ಇದೇನೂ ಮೊದಲ ಬಾರಿಗೆ ಅಲ್ಲ. ಮುಸ್ಲಿಮರ ಕುರಿತು ಇಲ್ಲಸಲ್ಲದ ಊಹಾಪೋಹಗಳನ್ನು ನೈಜ ಘಟನೆಗಳು ಎಂಬಂತೆ ಚಿತ್ರಿಸುವ ವರದಿಗಳನ್ನು ಉದಯವಾಣಿ ಪ್ರತಿನಿತ್ಯವೆಂಬಂತೆ ಪ್ರಕಟಿಸುತ್ತದೆ. ಮುಸ್ಲಿಮರು ದೇಶದ್ರೋಹಿಗಳು ಮತ್ತು ಭಯೋತ್ಪಾದಕರು ಮಾತ್ರವಲ್ಲ, ಕ್ರಿಮಿನಲ್‌ಗಳೂ ಹೌದು ಎಂಬಂತೆ ಸಾರಾಸಗಟಾಗಿ ಒಂದು ಇಡೀ ಸಮುದಾಯವನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ವರದಿಗಳನ್ನು ಪ್ರಕಟಿಸುವುದರಲ್ಲಿ ಜಿಲ್ಲೆಯ ಇತರ ಪತ್ರಿಕೆಗಳೇನೂ ಹಿಂದೆ ಬಿದ್ದಿಲ್ಲ. ವಾಸ್ತವವಾಗಿ ಈ ವಿಷಯದಲ್ಲಿ ವಿಜಯ ಕರ್ನಾಟಕ ಮತ್ತು ಉದಯವಾಣಿಗಳ ನಡುವೆ ಸ್ಪರ್ಧೆಯೇ ನಡೆದಿದೆ. ಇದಕ್ಕೆ ಸರಿಯಾಗಿ ಕರಾವಳಿಯ ಊರುಊರುಗಳಲ್ಲಿ ಭಜರಂಗದಳ, ಹಿಂದೂ ಯುವಸೇನೆ, ಶ್ರೀರಾಮ ಸೇನೆಗಳಂತಹ ಪರಿವಾರದ ಸಂಘಟನೆಗಳು ಮುಸ್ಲಿಮರ ಮೇಲೆ ವಿನಾಕಾರಣ ಹಲ್ಲೆ ನಡೆಸುತ್ತಿವೆ. ಮುಸ್ಲಿಮರನ್ನು ಸಮಾಜದಿಂದ ಬೇರ್ಪಡಿಸುವ ವ್ಯವಸ್ಥಿತ ಕಾರ್ಯಾಚರಣೆಯಲ್ಲಿ ಇಲ್ಲಿನ ಪತ್ರಿಕೆಗಳು ಮತ್ತು ಹಿಂದೂ ಪರಿವಾರದ ಸಂಘಟನೆಗಳು ಪರಸ್ಪರ ಕೈ ಜೋಡಿಸಿವೆ. ಮೇಲುನೋಟಕ್ಕೆ ಇದರ ಬಲಿಪಶುಗಳು ಮುಸ್ಲಿಮರು ಎಂಬಂತೆ ಕಂಡರೂ, ಇದರ ಹಿಂದೆ ಇನ್ನಷ್ಟು ಕ್ರೂರವಾದ ಫ್ಯಾಸಿಸ್ಟ್ ರಾಜಕೀಯದ ಹುನ್ನಾರವಿದೆ.

ಫ್ಯಾಸಿಸ್ಟ್ ರಾಜಕೀಯ... ಸಮಾಜದ ಹಾಲಿ ಆಸ್ತಿ ಸಂಬಂಧ... ಮತ್ತು ವರ್ಗಗಳ ಅಸಮಾನತೆಯನ್ನು... ಹಾಗೆಯೇ ಉಳಿಸಿಕೊಂಡು... ಜನತೆಯನ್ನು ಸಂಘಟಿಸಲು... ಯತ್ನಿಸುತ್ತದೆ; ಫ್ಯಾಸಿಸ್ಟ್ ಸಿದ್ಧಾಂತ ಜನರಿಗೆ ಅವರ ವರ್ಗಕ್ಕೆ... ಹೊರತಾದ ಒಂದು ವ್ಯಕ್ತಿತ್ವವನ್ನೂ ಅಭಿವ್ಯಕ್ತಿಯನ್ನೂ... ಕಲ್ಪಿಸುತ್ತದೆ ಎಂದು ಖ್ಯಾತ ಚಿಂತಕ ವಾಲ್ಟರ್ ಬೆಂಜಮಿನ್... ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸರ್ಕಾರದ... ಹೊಸ ಆರ್ಥಿಕ ಧೋರಣೆ (ಅದು ಹಿಂದಿನ ಎನ್‌ಡಿಎ... ಸರ್ಕಾರದ ಧೋರಣೆಯೂ ಹೌದು)ಯಿಂದಾಗಿ, ದೇಶಾದ್ಯಂತ... ಜನಸಾಮಾನ್ಯರು, ರೈತರು, ಕಸುಬುಗಾರರು ಮತ್ತು ಇತರ... ದುಡಿಯುವ ಜನ ಸಮುದಾಯಗಳು ದಿವಾಳಿ ಎದ್ದಿವೆ... ಇತ್ತೀಚೆಗೆ ತನ್ನ ಒಂದು ಲೇಖನದಲ್ಲಿ ಪತ್ರಕರ್ತ ಪಿ...

ಸಾವಿನ ಸಮ್ಮುಖದಲ್ಲಿ ಬದುಕಿನ ಅನಾವರಣ

ಜೀವ ಮಿಡಿತದ ಸದ್ದು



'ಮಗು ನೀನು ನನ್ನೊಡಲಲ್ಲಿ
ಮೊಳಕೆಯೊಡೆದ ದಿನ
ಜಗತ್ತಿನ ಯಾವ ಮಗುವೂ
ಅನಾಥವಾಗದಿರಲಿ' ('ವಿಳು ದ್ವೀಪ', ಪುಟ. 52) ಎನ್ನುವ ವಿಭಾ 'ವಸಂತದ ನಗೆ ಹೊದ್ದು' ಕನಸುಗಳ ಕಂಡವಳು; ಕಾಲವನ್ನು 'ಕೊಂಚವೂ ಕದಲದಂತೆ' ಹಿಡಿಯಲೆತ್ನಿಸಿದವಳು; 'ಅಂಗೈ ಅಂಗಳದಲ್ಲಿ' ಭೂಮಿ ಹೊತ್ತವಳು; 'ಇಲ್ಲ'ಗಳ ಮಿತಿಯಲ್ಲಿ ಇರುವನ್ನು ಮನಗಂಡವಳು.

ವಿಭಾ ಕವನಗಳ ಹಿಂದಿನ ಆಸ್ಥೆಗಳು ಎರಡು. ಒಂದು, ಬದುಕಿನ ಬಗೆಗಿನ ಪ್ರೀತಿ; ಎರಡು, ಸಾವಿನ ಬಗೆಗಿನ ಭೀತಿ. ಮಾನವನ ಎಲ್ಲ ಸಾಧನೆ, ಚಟುವಟಿಕೆಗಳ ಹಿಂದಿನ ಪ್ರೇರಣೆಯೂ ಇವೆ ಆಗಿವೆ. ಈ ಆಸ್ಥೆಗಳನ್ನು ಹೊದ್ದ ವಿಭಾ ತನ್ನ ಅಂತರಂಗ ಪ್ರಪಂಚ ಮತ್ತು ಬಾಹ್ಯ ಪ್ರಪಂಚದ ನಡುವೆ ಸಾಧಿಸುವ ಸಮತೋಲನವೆ ಬಹಳ ವಿಶೇಷವಾದದ್ದು. ನಮ್ಮ ಒಳಪ್ರಪಂಚ ಕೆಲಸ ಮಾಡುವುದು ಹೊರಪ್ರಪಂಚದಿಂದ ದೊರಕುವ ಅನುಭವಗಳ ಮೂಲಕವೆ. ಬದುಕಿನ ಅತ್ಯಂತ 'ಸಾಮಾನ್ಯ' ಎನ್ನಬಹುದಾದ ಹುಡುಗಿ ಮೈ ನೆರೆಯುವಿಕೆ, ಅಡುಗೆಮನೆಯ ಚಟುವಟಿಕೆಗಳು, ಭಜನೆಯಂತಹ ಸಂಗತಿಗಳನ್ನೂ ಅನುಭವವಾಗಿಸುವುದು ವಿಭಾಳ ಸೂಕ್ಷ್ಮ, ವಿಶೇಷ ಸಂವೇದನೆಯೇ ಆಗಿದೆ. ಹೀಗೆ ಅನುಭವವಾಗುವ ಸಂಗತಿಗಳು ತಮ್ಮ ಮಿತಿಯಲ್ಲೇ ಬಿಡುಗಡೆಗೆ ತುಡಿಯುವ ನೆಲೆಯಲ್ಲಿ ಕವನಗಳಿಗೆ ಮಾನವೀಯತೆಯ ಪರಧಿಯೊಂದನ್ನು ದಕ್ಕಿಸಿಕೊಡುತ್ತವೆ. ಭಜನೆ ಮಾಡುತ್ತ ಕುಳಿತಿರುವ ಭಕ್ತ ಜನರನ್ನು ನೋಡುತ್ತ ಕುಳಿತ ಹೆಣ್ಣಿನ ಗರ್ಭದಲ್ಲಿರುವ ಕೂಸಿಗೆ ಆಕೆ ಹೇಳುವ ಉತ್ತರ ಇದು:

ಮಗು ಏನು ಹೇಳಲಿ?
ಹೊರಗೆ ಬರುವವರೆಗಾದರೂ
ನಿಶ್ಚಿಂತವಾಗಿರು ಆಮೇಲೆ
ಬದುಕು ಕಳೆಯಬೇಕು
ಇಂಥ ಸದ್ದುಗಳಲ್ಲಿ!
('ಸದ್ದು', ಪುಟ 48)

ಕ್ಷಣಕ್ಷಣದ ಬದುಕನ್ನೂ ಅನುಭವಿಸ ಬಯಸುವ ವಿಭಾಳ ಉತ್ಕಟ ಜೀವನ ಪ್ರೀತಿಯ ತೆಕ್ಕೆಯಲ್ಲಿ ಇಡೀ ಸಮಾಜ ಅವಿಚ್ಛಿನ್ನವಾಗಿ ಹೊಂದಿಬಿಟ್ಟದೆ. 'ಸರಹದ್ದು', 'ಆ ಗಳಿಗೆಯ ಸತ್ಯ', 'ಬೊಗಸೆಯಲ್ಲಿದೆ ಭೂಮಿ', 'ಕದ್ದರೆಂದು' ಕವನಗಳು ಲೇಖಕಿಯ ಒಳ-ಹೊರ ಪ್ರಪಂಚಗಳ ನಡುವಿನ ಸಮರ್ಥ ಸಮತೋಲನವನ್ನು ಬಿಂಬಿಸುವ ಕವನಗಳು. ಈ ಕವನಗಳಲ್ಲಿ ಕಳೆದು ಹೋದದ್ದಕ್ಕೆ ಬೇಸರವಿಲ್ಲ, ದಕ್ಕದ್ದಕ್ಕೆ ಹತಾಶೆಯಿಲ್ಲ; ಭಾವಗಳು ಆಳದ ಗರಿಷ್ಟತೆಗಿಳಿದಷ್ಟೇ ಬೇಗ ಎತ್ತರದ ಪರಾಕಾಷ್ಠೆಗೂ ಏರುತ್ತವೆ, ಅಷ್ಟೇ ಸರಳವಾಗಿ, ಸುಲಭವಾಗಿ ಎರಡೂ ಪರಾಕಾಷ್ಠೆಗಳ ನಡುವೆ ತನ್ನನ್ನು ತಾನು ಸ್ವತಂತ್ರವಾಗಿ ನಿಲ್ಲಿಸಿಕೊಳ್ಳುತ್ತವೆ. ಇದು ವಿಭಾ ಬದುಕಿನ ದೃಷ್ಟಿ ಕೂಡ.

ಎಷ್ಟು ಎತ್ತರ ನೋಡಿದರೂ,
ಎಷ್ಟೊಂದು ಆಳ ತಡಕಾಡಿದರೂ,
ಸಣ್ಣವಾಗುತ್ತಿದೆ
ಬದುಕು
ನನ್ನ ಕಣ್ಣ ಕಿಟಕಿಯ
ಒಳಗೂ ತೂರಿ
ಬಂದು ('ದೃಷ್ಟಿ', ಪು. 43)
ಹಾಗೆಯೇ
ಕೋಣೆಯ
ಭದ್ರಬಾಗಿಲುಗಳೊಳಗೆ
ಕಿಟಕಿಯ ಕಿಂಡಿಯಲ್ಲಿ ದೃಷ್ಟಿ
ನೆಟ್ಟು
ಅಭದ್ರ ಜೀವ ಮಿಡಿತದ ನಾನು
ನೋಡುತ್ತಲೇ ಇದ್ದೇನೆ;
ಮನುಷ್ಯರು ಕಟ್ಟಿಕೊಂಡ
ಜೀವ ನುಂಗಿದ ಸರಹದ್ದನೊಮ್ಮೆ
ಬೇಸತ್ತ ಬದುಕಿಗೆ ಜೀವ
ತುಂಬಲು
ಹಾಡುವ ಹಕ್ಕಿ ಹಾರಿಹೋದ
ಹಾದಿಯನೊಮ್ಮೆ. ('ಸರಹದ್ದು', ಪುಟ. 47)

'ತೂರಿ' ಬರುವ ಬದುಕು, ಹಕ್ಕಿ 'ಹಾರಿ ಹೋದ ಹಾದಿ' ಜೀವ ತುಂಬುವಂತದ್ದೇ ಆದರೂ ತನ್ನ ಅಭದ್ರ ಜೀವಮಿಡಿತದ ಅರಿವು ವಾಸ್ತವತೆಯ ಅರಿವನ್ನು ಉಂಟು ಮಾಡುವಂತಹದ್ದೇ ಆಗಿದೆ.

ಹೊರಗಿನ ಸಂಗತಿಗಳ ಮೂಲಕ ಒಳಗನ್ನು ಶೋಧಿಸುತ್ತಾ ಹೋಗುವುದು ವಿಭಾ ಕವನಗಳ ವೈಶಿಷ್ಟತೆ. ಸೃಷ್ಟಿಯ ಯಾವುದೇ ಸಂಗತಿಯೂ (ಹರಿಯುವ ನದಿ', 'ಉಕ್ಕುವ ಕಡಲು', 'ವಿಶಾಲ ಬಾನು' ಇತ್ಯಾದಿ) ಅದರ ಗರಿಷ್ಟತೆಯಲ್ಲೇ ಅನಾವರಣಗೊಳ್ಳುವುದರ ಮೂಲಕ ಕವನಗಳಿಗೆ ದೊಡ್ಡ ಚೌಕಟ್ಟನ್ನು ಒದಗಿಸುತ್ತವೆ. ಆದರೆ ಈ ದೊಡ್ಡ ಚೌಕಟ್ಟಿನ ಕೇಂದ್ರದಲ್ಲಿ ವಿಭಾ ಚಿತ್ತ ಧ್ಯಾನಗೊಳ್ಳುವ ರೀತಿಯೇ ಅನನ್ಯವಾದದ್ದು:

ನಾನು ನಿನ್ನ ಬಗ್ಗೆ
ಯೋಚಿಸಬೇಕೆಂದರೆ
ಮೊದಲಿಗೆ ನೀನು ನಿನ್ನ
ಎಲ್ಲ ದೌರ್ಬಲ್ಯಗಳ ಪಟ್ಟಿ ಮಾಡಿಕೊಡು

ಅವ ಹೇಳಿದ;
ನನ್ನ ಏಕಮಾತ್ರ
ದೌರ್ಬಲ್ಯವೆಂದರೆ ನೀನು


ನನಗೀಗ ಬರೀ
ಅವನದೇ ಧ್ಯಾನ..... ('ಧ್ಯಾನ', ಪು. 18)

ವಿಭಾಳ ಅರಸುವಿಕೆಯ ಹಿಂದಿನ ಆಸ್ಥೆ ವಸ್ತುಗಳಲ್ಲ ಆದರೆ ಚೈತನ್ಯ ಎಂಬುದು ಇಲ್ಲಿ ಸರಳವಾಗಿ ವಿದಿತ. ತನ್ನಷ್ಟಕ್ಕೆ ತಾನೆ ಮೆಲುದನಿಯಲ್ಲಿ ಮಾತನಾಡಿಕೊಳ್ಳುವ ಗುಣ ಇಲ್ಲಿನ ಪದ್ಯಗಳದ್ದು. ಆ ದನಿಗೆ ತಾಯ್ತನದ... ತುಂಬು ಗುಣವಿದೆ, ಅಕ್ಕನ ಆಪ್ತತೆಯಿದೆ, ಗೆಳತಿಯ... ಸ್ನೇಹ ಹಸ್ತವಿದೆ, ಮಗುವಿನ ಮುಗ್ಧತೆಯಿದೆ, ಜಗವನ್ನು... ತಬ್ಬುವ ದಿಟ್ಟತೆಯಿದೆ, ಹಾಗೆಂದೇ ತನ್ನದೆಲ್ಲವನ್ನು... ಇಡಿಯಾಗಿ ಒಪ್ಪಿಸಿಕೊಂಡುಬಿಡುವ ಹುಚ್ಚು ಪ್ರೀತಿಯಿದೆ... ಪ್ರೀತಿಯ ಹಲವು ಮಗ್ಗುಲುಗಳ ಅನುಭವವೆ ಕವನಗಳಿಗೆ... ವಿಶಾಲ ಅರ್ಥವ್ಯಾಪ್ತಿಯನ್ನೊದಗಿಸುತ್ತದೆ. ಇಲ್ಲಿನ... ಕವನಗಳಲ್ಲಿ ಪ್ರೀತಿಯ ಹೊರತು ಬದುಕಿಲ್ಲ; ಪ್ರೀತಿಯ... ನಿರಾಕರಣೆ ಬದುಕಿನ ನಿರಾಕರಣೆಯೂ ಹೌದು... ಪ್ರೀತಿಯಿಲ್ಲದ ಬದುಕು ಸಾವೆ ಆಗಿದೆ.

ಒಮ್ಮೊಮ್ಮೆ ಹೀಗೂ ಅನ್ನಿಸುತ್ತದೆ
ಗೆಳೆಯಾ–
ನೀನಿಲ್ಲವೆಂದರೆ
ನಿನ್ನ ಹಾಡುಗಳೂ ಬೇಡ
ನಿನ್ನ ಹಾಡುಗಳೇ ನನ್ನ
ಜೀವದುಸಿರು ನಿಜ.
ಆದರೂ ಕ್ಷಮಿಸು–
ನಾನೀಗ ಉಸಿರಿಲ್ಲದ ಜೀವ!...
('ನೀನಿಲ್ಲವೆಂದರೆ', ಪು. 21)

ಹೀಗೆ ಪ್ರೀತಿಯ ತುಂಬ ತುಂಬಿಕೊಂಡು ವಿಭಾ... ಸರಿಯಲಿಚ್ಛಿಸುವುದು ಅಕ್ಕ, ರಾಧೆ, ಮೀರರ ಜಗತ್ತಿಗೆ...

ಪುಸ್ತಕ ಲೋಕ



ಸಂಚಯ ಪ್ರಕಾಶನ
ನಂ.3, 2ನೇ ಮೇನ್, ಆರನೇ ಬ್ಲಾಕ್,
ಮೂರನೇ ಫೇಸ್, ಮೂರನೇ ಸ್ಟೇಜ್,
ಬನಶಂಕರಿ, ಬೆಂಗಳೂರು
ಬೆಲೆ: ರೂ. 50 ಪುಟ: 12+68

ಸಫಲತೆ ಅಥವಾ ವಿಫಲತೆ ನಿರ್ಧಾರವಾಗುವುದು ಸಮಸ್ಯೆಯ ಕಡೆಗಿನ ನಮ್ಮ ಮನೋಭಾವದಿಂದಲೇ-ಎಸ್.ವಿ. ಶೀಲಿ

ಸಾಯಿನಾಥ್. ಮಹಾರಾಷ್ಟ್ರದ ರೈತರ ಆತ್ಮಹತ್ಯೆಗಳ ಬಗ್ಗೆ ಬರೆಯುತ್ತ ಮುಂಬಯಿ ಮತ್ತು ಪೂನಾ ಶಹರುಗಳನ್ನು ಬಿಟ್ಟರೆ, ಮಹಾರಾಷ್ಟ್ರ ರಾಜ್ಯ ಇನ್ನೊಂದು ಬಿಹಾರವೇ ಸರಿ ಎಂದು ಬರೆದರು. ಮಹಾರಾಷ್ಟ್ರ ಮಾತ್ರವಲ್ಲ, ದೇಶದ ಯಾವ ಭಾಗಕ್ಕೂ ಈ ಮಾತು ಒಪ್ಪುತ್ತದೆ. 'ಮುಂದುವರಿದ ಪ್ರದೇಶ' ಎನ್ನಿಸಿಕೊಂಡಿರುವ ಕರ್ನಾಟಕದ ಕರಾವಳಿಯ ಜಿಲ್ಲೆಗಳ ಹಳ್ಳಿಗಳೂ ಈಗ ಬಿಹಾರದ ಪ್ರತಿರೂಪಗಳಾಗುತ್ತಿವೆ. ಇಲ್ಲಿನ ಪಟ್ಟಣಗಳಿಗೆ ಅತಿ ಸಮೀಪದಲ್ಲಿರುವ ಹಳ್ಳಿಗಳಲ್ಲೂ ಬಹುತೇಕ ಬಡವರ ಸ್ಥಿತಿ ಈಗ ದಾರುಣವಾಗಿದೆ. ಅದರಲ್ಲೂ ಮಳೆಗಾಲದ ಮೂರು ತಿಂಗಳುಗಳು ಆಷಾಢ, ಶ್ರಾವಣ, ಭಾದ್ರಪದ-ನಮ್ಮ ಹಳ್ಳಿಗಳ ಕೆಳಜಾತಿಗಳ ಬಡವರಿಗೆ ನಿರಂತರ ನಿರುದ್ಯೋಗ ಮತ್ತು ಹಸಿವಿನ ಕರಾಳ ದಿನಗಳು. ಕನ್ನಡದ ಮೂರ್ಖ ಪತ್ರಿಕೆಗಳು "ಹಬ್ಬಗಳ ಋತು" ಎಂದು ಪ್ರತಿ ವರ್ಷವೂ ಬರೆದದ್ದನ್ನೇ ಬರೆಯುವ ಈ ತಿಂಗಳುಗಳಲ್ಲಿಯೇ ಕರ್ನಾಟಕದ ಹಳ್ಳಿಗಳ ಹೆಚ್ಚಿನ ಮನೆಗಳಲ್ಲಿ ಮನೆಗಳವರು ಸರದಿಯಲ್ಲಿ ಉಣ್ಣುವುದು. ಇದೂ ಸಾಲದ್ದಕ್ಕೆ ಈ ಋತುವಿನಲ್ಲೇ ಈ ಸಮಾಜದ ಅದೃಷ್ಟಶಾಲಿಗಳ ಮಕ್ಕಳು ಭಾರಿ ಶುಲ್ಕ ತೆತ್ತು ಒಳ್ಳೊಳ್ಳೆ ಶಾಲೆ ಕಾಲೇಜುಗಳಿಗೆ ಸೇರುವುದನ್ನೂ ಈ ಬಡವರು ಕಣ್ಣುಬಾಯಿ ಬಿಟ್ಟುಕೊಂಡು ನೋಡಬೇಕು. ಶಿಕ್ಷಣವನ್ನು ಲಾಭದಾಯಕ ದಂಧೆಯಾಗಿ ಮೊತ್ತ ಮೊದಲ ಬಾರಿಗೆ ಮಾರ್ಪಡಿಸಿದ ಹಿರಿಮೆ ನಮ್ಮ ಕರಾವಳಿಯ ದ.ಕ. ಜಿಲ್ಲೆಯದ್ದು. ಈಗ ದಂಧೆ ಕರ್ನಾಟಕದ ಹಳ್ಳಿಗಳಿಗೂ ವ್ಯಾಪಿಸಿದೆ. ಆದರೆ ಸಂಘ ಪರಿವಾರಕ್ಕಾಗಲೀ, ಅದರ ಪ್ರಚಾರದ ಹೊಣೆ ಹೊತ್ತಿರುವ ಉದಯವಾಣಿಗಾಗಲೀ ಜನರ ದೈನಂದಿನ ಬದುಕಿನ ದುಃಖದುಮ್ಮಾನಗಳ ಬಗ್ಗೆ ಕಾಳಜಿ ಇಲ್ಲ. ಹಿಂದೂಗಳ ಒಗ್ಗಟ್ಟನ್ನು ಇವು ಬಯಸುವುದು ಕೇವಲ ಒಂದು ಉದ್ದೇಶಕ್ಕೆ ಮಾತ್ರ-ಮುಸ್ಲಿಮರ ತಲೆ ಒಡೆಯುವುದಕ್ಕೆ. ಉದಯವಾಣಿಯಂತಹ ಪತ್ರಿಕೆ ವೃತ್ತಿ ಧರ್ಮ ಪಾಲಿಸಬೇಕು ಎಂದು ನಿರೀಕ್ಷಿಸುವುದೇ ಹುಚ್ಚುತನ. ಉದಯವಾಣಿ ಅಸ್ತಿತ್ವಕ್ಕೆ ಬಂದಿರುವುದೇ ಅದರ ಮಾಲೀಕರ ವರ್ಗಹಿತ ರಕ್ಷಿಸುವುದಕ್ಕೆ ಹಾಗೂ ಸುಳ್ಳುಹೇಳಿ ಜನರ ದಿಕ್ಕುತಪ್ಪಿಸಲಿಕ್ಕೆ. ಈಗ ಅದು ಫ್ಯಾಸಿಸ್ಟರ ಬದಿಗೆಯಾಗಿ ಮಾರ್ಪಟ್ಟಿರುವುದು ವರ್ಗ ರಾಜಕೀಯದ ಒಂದು ತಾರ್ಕಿಕ ಬೆಳವಣಿಗೆ.

-ಜಿ. ರಾಜಶೇಖರ್

ಜಗದ ಜನರೇ
ನಾನು ನಗಲಿಲ್ಲ, ಅಳಲಿಲ್ಲ
......
ಲೋಕವೆಳೆದ ಗೆರೆಗಳನ್ನೆಲ್ಲ ದಾಟಿ ಬಂದ
ನನ್ನ ಸಾಂಗತ್ಯಕ್ಕೀಗ
ಅಕ್ಕ, ಮೀರಾ, ರಾಧೆಯರ ಜಗತ್ತಿದೆ...
('ಲೋಕನಿಂದಿತಳ ಅಂತರಂಗ' ಪು. 14)

ವಿರಹದ ಉತ್ಕಟತೆಯಲ್ಲಷ್ಟೇ ಪ್ರೀತಿಯ ಅನುಭವವೆಂಬ ಅರಿವೇ ತಾನೆ ಅಕ್ಕ, ಮೀರ, ರಾಧೆಯರು ನಮಗೆ ನೀಡಿದ್ದು? ಇಂತಹ ಉತ್ಕಟತೆಯಲ್ಲಿ ಜಾತಿ, ಭಾಷೆ, ಧರ್ಮದ ಕಟ್ಟುಪಾಡುಗಳಿರುವುದಿಲ್ಲ. ಅಹಂಕಾರ ಅಳಿದ ಮೇಲೆ ಉಳಿಯುವುದು ಪ್ರೀತಿ ಮಾತ್ರವೆಂಬ ಸರಳ ಸತ್ಯವನ್ನು ವಿಭಾ ಕಟ್ಟಿಕೊಡುವುದು ಹೀಗೆ.

ಒಂದು ರೊಟ್ಟಿ
ಒಂದು ಕವಿತೆ
ಕೇಳಲೊಂದಿಷ್ಟು ಸಂಗೀತ-
ವಿದ್ದರೆ ಸಾಕು
ಈ ಸೂರಿನಡಿ ಒಬ್ಬಳೇ
ಇದ್ದು ಬಿಡುವೆ ಎಂಬ
ಜಂಬವಿತ್ತಲ್ಲ,
ಹಾಗಾದರೆ, ಈ ಸಂಜೆ
ಏಕಾಂತಕ್ಕೆ ಜೀವ
ತುಂಬಲು ನೀನು ಬೇಕು
ಅಂತ ಯಾಕನ್ನಿಸಬೇಕು?
('ಏಕಾಂತ ಸಂಜೆ', ಪು. 17)

ವಿಭಾ ಸಾವಿನ ಸಮ್ಮುಖದಲ್ಲೇ ಬದುಕನ್ನು ಅಪ್ಪಾಗಿ ಅಪ್ಪಿದಳು; ನಿಜಾರ್ಥದಲ್ಲಿ ಸಾವಿನೊಡನೆ ಸೆಣಸಿ ಕವನಗಳ ಮೂಲಕ ಬದುಕಿನ ವ್ಯಾಪ್ತಿಯನ್ನು ವಿಸ್ತಾರಗೊಳಿಸಿದಳು; ಬದುಕುವುದೆಂದರೆ ಸಾವನ್ನು ಎದಿರು ನೋಡುವುದೆ ಎಂಬ ಸತ್ಯವನ್ನು ಸರಳವಾಗಿ ನಿರೂಪಿಸಿದಳು, ಅವಳ ನಿರೂಪಣೆಯ ರೀತಿ ಎಂದಿಗೂ ಪ್ರಸ್ತುತವೆ:

ನೀನಿಲ್ಲದ ನೀರವತೆಯನ್ನು
ಯಾರು ತುಂಬಬೇಕು?
ಆ ನಿಷ್ಕರುಣಿ ಕಾಲ ನನ್ನ ಬಗ್ಗೆ
ಯಾಕೆ ಯೋಚಿಸಲಿಲ್ಲ?
(..... ಹರಿದ ಕೆಲವು ತುಣುಕುಗಳು', ಪು. 8-9)

-ಜ.ನಾ. ತೇಜಶ್ರೀ

ರಮ್ಯಾ ಫೋನ್: ಎಲ್ಲಾ ಕಡೆ ರಕ್ಷಿತಾ ಒಳ್ಳೇ ಪರ್‌ಫಾರ್ಮರ್ ಅಂತೀರಾ... ನಾನೊಳ್ಳೆಯವಳಲ್ವಾ?'

ರಕ್ಷಿತಾ ಎಸ್.ಎಂ.ಎಸ್: 'ಏನ್ ಕವಿತಾ, ಎಲ್ಲ ಪೇಪರಿನಲ್ಲೂ ರಮ್ಯಾ ಸ್ಟಿಲ್‌ಗಳೇ ಹೆಚ್ಚು ಬರ್‍ತಿವೆಯಲ್ಲ?'

ಏನು ಹೇಳುವುದು? ಅವಳ ಫೋಟೋ ಹೆಚ್ಚು ಬಂದರೆ ಇವಳಿಗೆ, ಇವಳ ಫೋಟೋ ಹೆಚ್ಚು ಬಂದರೆ ಅವಳಿಗೆ ಮುನಿಸು! ನಾವು ಸಿನಿಮಾದ ನೂರೆಂಟು ಸ್ಟಿಲ್‌ಗಳನ್ನು ಪತ್ರಿಕೆಗಳಿಗೆ ಕಳಿಸಿರುತ್ತೇವೆ. ಅವರಿಷ್ಟದಂತೆ ಅವರು ಸ್ಟಿಲ್ ಹಾಕುತ್ತಾರೆ. ಇಂತಹ ಸಣ್ಣ ಪುಟ್ಟ ಕಿರಿಕಿರಿಗಳೊಂದಿಗೆ ಚಿತ್ರೀಕರಣ ಪೂರ್ತಿಗೊಂಡಿದೆ.

ಶ್ಯಾಮ್ ಹಿಂದಿ ಚಿತ್ರವೊಂದರ ಶೂಟಿಂಗ್‌ಗೆಂದು ಕೆನಡಾಕ್ಕೆ ಹೋಗಿ ಅಲ್ಲೇ ಸಿಕ್ಕುಹಾಕಿಕೊಂಡಿದ್ದರಿಂದ ಇಲ್ಲಿ ನಿರ್ಮಾಪಕ ಸುರೇಶ್‌ಗೆ ಟೆನ್ಷನ್! ಅಲ್ಲೋಲಕಲ್ಲೋಲ! ಬಂಡವಾಳ ಸುರಿದ ನಿರ್ಮಾಪಕರ ಕಷ್ಟ ಯುವಜನರಿಗೆ ತಿಳೀಬೇಕಲ್ಲವೇ? ಶ್ಯಾಮ್ ಬಂದ ನಂತರ ಚಿಕ್ಕಮಗಳೂರಿಗೆ ಎಲ್ಲ ಸೇರಿ ಒಂದು ಜಾಯಿಂಟ್ ಫ್ಯಾಮಿಲಿ ತರಹ ಹೋಗಿ ಚಿತ್ರೀಕರಣಕ್ಕೆ 'The End' ಎಂದು ಬಂದೆವು.

12 ವರ್ಷಗಳಿಗೊಮ್ಮೆ ಅರಳುವ 'ಕುರಿಂಜಿ' ಹೂಗಳು ಎಷ್ಟು ಚೆಂದ? ಕೇರಳದಲ್ಲಿ ಜನವರಿಯಲ್ಲಿ ಅರಳಲು ಶುರುಮಾಡುವ ಇವು ಆಗಸ್ಟ್-ಸೆಪ್ಟಂಬರ್ ಹೊತ್ತಿಗೆ ನಮ್ಮ ಚಿಕ್ಕಮಗಳೂರಿನ ಬೆಟ್ಟಗಳ ತುಂಬಾ ಕಂಗೊಳಿಸ ತೊಡಗುತ್ತವೆ. ಹಾಡೊಂದರ ಚಿತ್ರೀಕರಣಕ್ಕಾಗಿ ಕೇರಳಕ್ಕೆ ಹೋಗಲೇಬೇಕಿತ್ತು. ಅಲ್ಲಾಗ ಮುಂಗಾರಿನ ಆಗಮನದ ಹೊತ್ತು. ನಿರ್ಮಾಪಕರಿಗೆ ಇನ್ನೊಂದಿಷ್ಟು ಟೆನ್ಷನ್ ಕೊಡೋದು ಬೇಡ ಎಂದು ಕೈಬಿಟ್ಟೆವು. ಹೆಚ್ಚಿಗೆ ಕಾಯ್ದಷ್ಟು ನಿರ್ಮಾಪಕರ ಇನ್‌ವೆಸ್ಟ್‌ಮೆಂಟೂ, ಟೆನ್ಷನ್ನೂ ಎರಡೂ ಉಲ್ಬಣಗೊಳ್ಳುತ್ತದೆಂದು ಇತರ ವಿಭಿನ್ನ ಲೊಕೇಷನ್‌ಗಳನ್ನು ಹುಡುಕಿ ಶೂಟಿಂಗ್ ಮುಗಿಸಿದೆವು.

ತನನಂ ತನನಂ



ತೇಲಿ ಬಂದ ದಾರಿ 8 ಕವಿತಾ ಲಂಕೇಶ್

'ನೀವು ತಿಳಿಬರಿಬರಿ' ಎಂದು ಹಲವಾರು ಸಲ ಏನೇನೋ ಹೇಳಿದ ರಮ್ಯಳನ್ನು ನೋಡಿ ನಾವೆಲ್ಲ ನಕ್ಕಿದ್ದೇ ನಕ್ಕಿದ್ದು!

ರಕ್ಷಿತಾದು ಹಾಗಲ್ಲ; ಸೊಂಟ ಬಳುಕಿದಷ್ಟೇ easy ಆಗಿ ಡಬ್ಬಿಂಗ್ ಮುಗಿಸಿದ್ಲು. ಗಿರೀಶ್ ಕಾರ್ನಾಡರ ವಾಯ್ಸ್ ಅಂತೂ ಸೂಪರ್ಬ್! ಸಂಪ್ರದಾಯಸ್ಥನ ಪಾತ್ರಕ್ಕೆ ಹೇಳಿ ಮಾಡಿಸಿದಂತಹ ಗಂಭೀರ ಧ್ವನಿ... ಸ್ಪಷ್ಟ ಡೈಲಾಗ್‌ಗಳು...



ಈಗ ನಿನಗೇನು ಕೊರತೆ? ಎಂಬ ಡೈಲಾಗಿತ್ತು ಗಿರೀಶರಿಗೆ. ನಮ್ಮ ಅಸಿಸ್ಟಂಟ್ ಡೈರೆಕ್ಟರ್ ಸಾವಂತ್ "ಮೇಡಂ ಈ 'ಕೊರತೆ' ಅನ್ನೋದಕ್ಕಿಂತ 'ಕಡಿಮೆ' ಎಂದರೆ ಜನರಿಗೆ ರೀಚ್ ಆಗುತ್ತೆ" ಎಂದರು. ನಾನು ಹೇಳಿದೆ : "ಗಿರೀಶರ ಧ್ವನಿಯಲ್ಲಿ ಅದು ಹೇಗೆ ಮೂಡಿ ಬರುತ್ತೆ ನೋಡಿ". ಗಿರೀಶ್ ಆ ಡೈಲಾಗ್ ಹೇಳಿದಾಗ ಅದೆಷ್ಟು ನ್ಯಾಚುರಲ್ ಆಗಿತ್ತೆಂದರೆ ಸಾಮಾನ್ಯ ಪ್ರೇಕ್ಷಕರೆಲ್ಲರಿಗೂ ಅದು ಕೂಡಲೇ ರೀಚ್ ಆಗುವಂತಿದೆ. ಅದು bookish ಎನಿಸದೇ ಸಹಜವಾಗಿ ಕೇಳಿಸುತ್ತದೆ.

ನಮ್ಮ ನಿರ್ದೇಶಕರುಗಳು ಪುಟ್ಟ ಹುಡುಗರ ಪಾತ್ರಗಳಿಗೆ ಹಿರಿಯ ಕಲಾವಿದೆಯರಿಂದ ಡಬ್ಬಿಂಗ್ ಮಾಡಿಸಿ ಹಾಸ್ಯಾಸ್ಪದರಾಗುತ್ತಾರೆ. ಒಮ್ಮೊಮ್ಮೆ ಪುಟ್ಟ ಬಾಲಕರಿಗೆ ಎಸ್. ಜಾನಕಿ ಧ್ವನಿ ನೀಡಿದ್ದೂ ಇದೆ!

ನಮ್ಮ 'ದೇವೀರಿ'ಯ ಕ್ಯಾತನ ಪಾತ್ರಧಾರಿ ಮಂಜ ಓದು, ಬರಹ ಗೊತ್ತಿಲ್ಲದ ಹುಡುಗ. ಆತನದು ಒಡಕು ಮತ್ತು ಒರಟು ಧ್ವನಿಯಾಗಿದ್ದುದು ಆ ಪಾತ್ರಕ್ಕೆ ಹೊಂದುತ್ತಿದ್ದುದ್ದರಿಂದ ಮಂಜನಿಂದಲೇ ಡಬ್ ಮಾಡಿಸಿದೆ. ಯಾವಾಗ ಡಬ್ಬಿಂಗ್ ಆರಂಭಿಸ ಬೇಕೆಂದು ಎದುರಿಗೆ ಕಾಣುವ ನಂಬರ್ (ಟೈಂ ಕೋಡ್) ನೋಡಿ ತಿಳಿಯಬೇಕು. ಅಥವಾ ಹಿಂದಿನಿಂದ ಯಾರಾದರೂ ತಿವಿದಾಗ ಡೈಲಾಗ್ ಆರಂಭಿಸುತ್ತಾರೆ. ನಮ್ಮ ಅಸಿಸ್ಟೆಂಟ್ ಡೈರೆಕ್ಟರ್ ಮಂಜನಿಗೆ ತಿವಿದಾಗ ಆತ ಡೈಲಾಗ್ ಆರಂಭಿಸುತ್ತಿದ್ದ. ಸ್ವಲ್ಪ ಹೊತ್ತಾದ ಮೇಲೆ 'ಸಾರ್. ನೀವು ತಿವಿಯೋದೆಲ್ಲಾ ಬೇಡ. ನನ್ಗೆ ಗೊತ್ತಾಗತ್ತೆ ಯಾವಾಗ ಹೇಳ್ಬೇಕು ಅಂತ, ನೀವು ಸುಮ್ನೆ ಕೂತ್ಕೊಳ್ಳಿ ಸಾಕು' ಎಂದು ಹೇಳಿದ ಮಂಜ ಪಟಾಪಟ್ ಡೈಲಾಗ್ ಹೇಳ ತೊಡಗಿದ. ಒಂದೆರಡು ದಿನವಾದ ಮೇಲೆ ಬೇರೆಯವರಿಗೆ 'ಏನು ನೀವು ಎಷ್ಟೊಂದು ಟೈಂ ತೆಗೆದುಕೊಳ್ತೀರಲ್ಲ ಡೈಲಾಗ್ ಹೇಳೋಕೆ' ಎನ್ನುತ್ತಿದ್ದ ಚೂಟಿ, ಪ್ರತಿಭಾವಂತ ಮಂಜ. ವಿಷ್ಣು ಅನಂತ್ ನಾಗ್‌ರಂಥವರು ಎರಡರಿಂದ ಮೂರು ಪೇಜ್ ಡೈಲಾಗ್‌ಅನ್ನು ಒಂದೇ ಸಲಕ್ಕೆ ಹೇಳಬಲ್ಲರು.

ಹಾಲಿವುಡ್‌ನಲ್ಲಿ ಈ ಡಬ್ಬಿಂಗ್ ಕಾನ್ಸೆಪ್ಟೇ ಇಲ್ಲ! ನಮ್ಮ 'ಲಗಾನ್', 'ಹೇರಾಮ್'ನಲ್ಲಿ ಮಾಡಿದಂತೆ ಶೂಟಿಂಗ್ ಸ್ಪಾಟ್‌ನಲ್ಲೇ ಡೈಲಾಗ್‌ಗಳ ಸಮೇತ ಚಿತ್ರೀಕರಣ ನಡೆಯುತ್ತದೆ. ಇದಕ್ಕೆ Synch Sound (Synchronised sound) ಎನ್ನುತ್ತಾರೆ. ಇದು ನ್ಯಾಚುರಲ್ ಆಗಿರುತ್ತೆ. ನಮ್ಮಲ್ಲಿ ಬೆಡ್ ರೂಮ್ ದೃಶ್ಯಗಳಲ್ಲಿ ಜೋರಾಗಿ ಮಾತು ಕೇಳಿ ಬರುತ್ತದೆ. ಆದರೆ ಅದೇ ಹಾಲಿವುಡ್ ಚಿತ್ರಗಳಲ್ಲಿ ನ್ಯಾಚುರಲ್ ಆದ ಬಿಸಿಯುಸಿರಿನ ಪಿಸುಮಾತು ಕೇಳಿ ಬರುತ್ತವೆ. ಇಲ್ಲಿ Synch Soundಗೆ ಬೇಕಾದ ದುಬಾರಿ ಉಪಕರಣ ಗಳಿಲ್ಲ ಹಾಗೂ ಔಟ್‌ಡೋರ್ ಶೂಟಿಂಗ್‌ನಲ್ಲಿ ಗದ್ದಲ, crowd ನಿಯಂತ್ರಿಸೋದು ಕಷ್ಟವೇ! ಆದರೆ ಇಲ್ಲಿ ನಮ್ಮ ಡಬ್ಬಿಂಗ್ ಕಲಾವಿದರು ಅನುಭವದಿಂದ ಪರ್ಫೆಕ್ಟ್ ಆಗಿಬಿಟ್ಟದ್ದಾರೆ...

ಮೋಹಕ ದೃಶ್ಯಗಳು, ಸಂಗೀತದ ರಸದೌತಣ ಪುಳಕದ ಸಾಹಿತ್ಯವಿರುವ 'ತನನಂ ತನನಂ' ಬೊಂಬಾಟ್ ಆಗಿ ಮೂಡಿಬಂದಿದೆ.

ನೆನಪಿರಲಿ: ಧ್ವನಿ ಇಲ್ಲಿ ಪ್ರಮುಖ ಪಾತ್ರದಲ್ಲಿದೆ. ಏನು ಅಂತಾ ಪಾತ್ರ ಧ್ವನಿಗೆ ಅಂತೀರಾ? ಮುಂದಿನ ವಾರ ಸಿಗೋಣ!

ನಿರೂಪಣೆ: ಪಿ.ಕೆ. ಮಲ್ಲನಗೌಡರ್

ಧ್ವನಿಯೂ ಪ್ರಮುಖ ಪಾತ್ರವೇ.... ಈ ಚಿತ್ರವೂ ನಿಮ್ಮ ಪ್ರೀತಿಗೆ ಪಾತ್ರವೇ...

ನಮ್ಮ ಚಿತ್ರದ ಡಬ್ಬಿಂಗ್ ಕಾರ್ಯ ನಡೆಯುವಾಗ ಹಲವಾರು ಮಜವಾದ ಪ್ರಸಂಗಗಳು ನಡೆದವು. ಇಂಟರೆಸ್ಟಿಂಗ್ ಇವೆ. ಓದ್ತಾ ಹೋಗಿ...

ಈ ಚಿತ್ರದಲ್ಲಿ voice (ಧ್ವನಿ) ಸಹಾ ಒಂದು ಪಾತ್ರವೇ!

ಆಶ್ಚರ್ಯವೇ? ಈ ಚಿತ್ರದಲ್ಲಿ ಕಣ್ಣುಗಳೂ ಒಂದು ಪಾತ್ರ ಎಂದು ಹೇಳಿದ್ದೇನಲ್ಲ... ಹಾಗೆಯೇ ಧ್ವನಿ ಸಹ ಇಲ್ಲಿ ಒಂದು ಪ್ರಮುಖ ಪಾತ್ರವೇ! 'ಬೆಳದಿಂಗಳ ಬಾಲೆ'ಯಲ್ಲಿ ಮಂಜುಳಾ ಗುರುರಾಜ್ ಧ್ವನಿ ಸಹ ಒಂದು ಪಾತ್ರವೇ ಆಗಿತ್ತಲ್ಲ? ಇಲ್ಲಿ 'ತನನಂ ತನನಂ'ನಲ್ಲಿ ಧ್ವನಿ ಇನ್ನೂ ವಿಭಿನ್ನ ತರಹದ ಪಾತ್ರ ವಹಿಸಿದೆ. ಸಸ್ಪೆನ್ಸ್! ಸಿನಿಮಾ ನೋಡಿದಾಗಲೇ ಅದರ ಅರ್ಥಪೂರ್ಣತೆ ಗೊತ್ತಾಗೋದು!

'ತನನಂ ತನನಂ'ಗೂ ಮೊದಲು ರಮ್ಯ 'ಜ್ಯೂಲಿ' ಯೊಂದರಲ್ಲಿ ಮಾತ್ರ ಡಬ್ಬಿಂಗ್ ಮಾಡಿದ್ದಳು. ಅವಳ ಉಳಿದ ಚಿತ್ರಗಳಲ್ಲಿ ಯಾರ್‍ಯಾರೋ ಧ್ವನಿ ನೀಡಿದ್ದರಿಂದ ಅವಳ ಭಾವ, ಧ್ವನಿಗೆ ಸಂಪರ್ಕ ತಪ್ಪಿದಂತಿತ್ತು, ಇಲ್ಲಿ ನಾನು ರಮ್ಯಳೇ ಡಬ್ಬಿಂಗ್ ಮಾಡಬೇಕೆಂದು insist ಮಾಡಿದೆ. ಮೊದಮೊದಲು ಸ್ವಲ್ಪ ತಡವರಿಸಿದ ರಮ್ಯ ನಂತರ ಚೆನ್ನಾಗಿಯೇ ಡಬ್ಬಿಂಗ್‌ನಲ್ಲಿ ಪಾಲ್ಗೊಂಡಳು. ಮೊದಲಿಗೆ ಅವಳು ಅನುಭವಿಸಿದ ತೊಂದರೆ ನೋಡಿ. ಒಂದು ಸೀನ್‌ನಲ್ಲಿ ರಾಜ-ರಾಣಿಯರ ಸ್ಟೈಲಿನಲ್ಲಿ ಮಾತಾಡುವುದಿದೆ. ಆಗ 'ನೀವು ತಿಳಿದಿರುವಿರಿ' ಎಂದು ಹೇಳುವಾಗ

ಶ್ಯಾಮ್‌ನ ವಾಯ್ಸ್ ಅದ್ಭುತವಾಗಿದೆ. ಆದರೆ ಆತ ಶಿವಾಜಿನಗರದ ಕನ್ನಡದಲ್ಲಿ 'ನಾಯಿ ಬರ್ತಾರೆ ನೋಡಿ', 'ಕಾಗೆ ಕೂಗ್ತಾರೆ ನೋಡಿ' ಎನ್ನುತ್ತಿದ್ದ. ಹಲವರ ಮೂಲಕ ಹದಿನೈದು ಟಿವಿ ಕಲಾವಿದರ ಧ್ವನಿ ಪರೀಕ್ಷಿಸಿ ಅರವಿಂದ್ ಕೌಶಿಕ್ ಎಂಬುವವರಿಂದ ಡಬ್ ಮಾಡಿಸಿದೆವು. ಅರವಿಂದ್‌ಗೆ ಮಧ್ಯದಲ್ಲಿ ಕೋಲ್ಡ್ ಆಗಿದ್ದರಿಂದ ಧ್ವನಿ ಡಿಫರೆಂಟಾಗಿ ಕೇಳತೊಡಗಿತು. 'ದೇವೀರಿ'ಯಲ್ಲಿ ನಂದಿತಾ ದಾಸ್‌ಗೆ ಚಂಪಾ ಎನ್ನುವ ಕಲಾವಿದೆ ಡಬ್ ಮಾಡುವಾಗಲೂ ಹೀಗೇ ಆಗಿತ್ತು. ಆರಂಭದಲ್ಲಿ ಚಂಪಾಳ ಒರಿಜಿನಲ್ ವಾಯ್ಸ್, ಕೋಲ್ಡಾದಾಗ ಇನ್ನೊಂದು ಬಗೆಯ ಧ್ವನಿ, ಕೋಲ್ಡ್ ಕ್ಲಿಯರ್ ಆಗುತ್ತಿದ್ದಂತೇ ಮತ್ತೆ ಒರಿಜಿನಲ್ ಧ್ವನಿ. ಹೀಗೆ ಒಬ್ಬ ನಟಿಗೆ ಮೂರು ರೀತಿಯ ಧ್ವನಿಗಳಾದರೆ ಅದು ನ್ಯಾಚುರಲ್ ಅನಿಸುವುದಿಲ್ಲ. ಕೋಲ್ಡ್ ಬರಿಸೋಕೆ, ಹೋಗಿಸೋಕೆ ಮೆಡಿಸನ್ ಇಲ್ಲ. ಆದರೆ atleast ಧ್ವನಿಯನ್ನು sustain ಮಾಡೋಕಾದ್ರೂ ಒಂದು ಮೆಡಿಸಿನ್ ಇದ್ದಿದ್ರೆ, ಡಬ್ಬಿಂಗ್ ಮಾಡೋರಿಗೆ easy ಆಗೋದು.



ಸಫಲತೆಗೆ ಕೀಲಿಕೈ ನನಗೆ ತಿಳಿಯದು. ಆದರೆ ವಿಫಲತೆಯ ಕೀಲಿಕೈ ಎಲ್ಲರನ್ನು ಮೆಚ್ಚಿಸಲು ಪ್ರಯತ್ನಿಸುವುದು-ಬಿಲ್ ಕೋಸ್ಬಿ

ಮುಖ್ಯಮಂತ್ರಿಯವರ ಹಳ್ಳಿ ವಾಸ್ತವ್ಯದ ಕಥಾನಕವು

ಊರಿನವರ ಯಾರ ಬಾಯಲ್ಲಿ ಕೇಳಿದರೂ ಅದೇ ಸುದ್ದಿ-'ಮುಖ್ಯಮಂತ್ರಿ ಬರ್‍ತಾರಂತೆ!'

ಎಲ್ಲಿ ನೋಡಿದರೂ ಕುತೂಹಲ, ಸಡಗರ, ಸಂಭ್ರಮ. ಇದೂ ನ್ಯಾಯವೇ. ರಾಜ್ಯದ ಮುಖ್ಯಮಂತ್ರಿ ಕುಗ್ರಾಮಕ್ಕೆ ಚಿತ್ತೈಸುತ್ತಿದ್ದಾರೆಂದರೆ ಸಾಮಾನ್ಯ ವಿಷಯವೇ! ದೇವರಾಜ ಅರಸ್ ಮುಖ್ಯಮಂತ್ರಿ ಆಗಿದ್ದಾಗ, ಮೈಸೂರು ಜಿಲ್ಲೆಗೆ ಪ್ರವಾಸ ಬಂದಾಗಲೆಲ್ಲ ತಂಗುತ್ತಿದ್ದುದು ಅವರ ಹಳ್ಳಿ ಕಲ್ಲಹಳ್ಳಿಯಲ್ಲೇ. ಅದು ಸಹಜವಾಗಿ ನಡೆದು ಹೋಗುತ್ತಿತ್ತು, ಪತ್ರಿಕೆಗಳಿಗೆ ಇದು ಸುದ್ದಿಯೇ ಆಗುತ್ತಿರಲಿಲ್ಲ, ಅದು ಆ ಕಾಲ. ಈಗ ಮುಖ್ಯಮಂತ್ರಿಗಳು ಅರೆಬೆತ್ತಲೆ ನಡೆದಾಡಿದ ಸಂಗತಿ, ಮಲಗಿದ ವೈಖರಿ, ಊಟ ಮಾಡುತ್ತಿದ್ದ ಶೈಲಿ ಇಂತಹವೆಲ್ಲ ಚಿತ್ರ ಸಮೇತ ವರದಿಯಾಗುತ್ತವೆ. ಇದು ಈ ಕಾಲ. ಅಲ್ಲದೆ ನಮ್ಮ ಊರಿನ ಹೆಸರು ಮಾಧ್ಯಮಗಳಲ್ಲಿ ಮಿಂಚುತ್ತೆ ಅನ್ನುವುದೇನು ಸಾಮಾನ್ಯ ಸಂಗತಿಯೇ.

ಇಬ್ಬರು ಸಂಧಿಸಿದರೆ ಸಾಕು. ಅದೇ ಮಾತು.

'ಇದೇನು ನಿಜವ್ವಾ... ಸಿಎಂ ಬರೋದು'

'ಬರೋದೇನು ಕಂಡೇನೀನು... ಇಲ್ಲೇ ತಂಗಾರಂತೆ.'

'ರಾತ್ರೀನೂ ಇಲ್ಲೇ ಇದ್ದಾರಾ? ಯಾರ ಮಲ್ಲಿ ಉಳ್ತಾರಂತೆ'


'ಅದೇನೋ ಹೊಲೇರಟ್ಟೀಲಿ ಅಂತಿದ್ರಪ್ಪ'

ಸಡಗರ, ಸಂಭ್ರಮ, ಸಂತೋಷ ಮಸಿ ಮಾಸಿ ದಂಗಾಯ್ತು, 'ನಮ್ಮೋರೇನು ಸತ್ತಿದೀವಂತ' ಎಂಬ ಗೊಣಗಾಟ ಕೇಳಿಬಂತು.

ಕುಮಾರಸ್ವಾಮಿಯವರದ್ದೇನೂ ಇದರಲ್ಲಿ ಅಪರಾಧ ಇಲ್ಲ, ಮೊದಲು ಲಿಂಗಾಯತರ ಮನೆ ಆಯಿತು. ನಂತರ ಒಕ್ಕಲಿಗರ ಮನೆಗೆ ಶಿಫ್ಟ್ ಮಾಡಿದರು. ಈಗ ದಲಿತರ ಮನೆ ಆಯ್ಕೆ ಮಾಡಿಕೊಂಡಿದಾರೆ. ವಾಸ್ತವ್ಯ ಹೂಡುವುದಕ್ಕೂ ಒಂದು ರೀತಿ ರೋಸ್ಟರ್ ಸಿಸ್ಟಂ ಪರಿಪಾಲಿಸುತ್ತಿದ್ದಾರೆ ಎಂದು ಮುಂತಾಗಿ ಕೆಲವು ಕಿಡಿಗೇಡಿಗಳು ಹೇಳಬಹುದು. ಅದಕ್ಕೆ ಗಮನ ಕೊಡಬೇಕಾಗಿಲ್ಲ, ಆದದ್ದೇನಪ್ಪಾ ಅಂದರೆ ಈ ಹಾಳು ಸಿದ್ಧರಾಮಯ್ಯ ಮಾತಿಗೆ ಮುಂಚೆ 'ದಲಿತರ ಮನೆಯಲ್ಲಿ ಯಾಕೆ ಉಳುಕೊಳ್ಳೋದಿಲ್ಲ' 'ದಲಿತರ ಮನೆಯಲ್ಲಿ ಯಾಕೆ ತಂಗ್ತಿಲ್ಲ' ಅಂತೆಲ್ಲ ಚುಡಾಯಿಸುತ್ತಿದ್ದರು. ಒಂದು ಸಲ ಹೇಳಲಿ, ಎರಡು ಸಲ ಹೇಳಲಿ, ಪದೇಪದೇ ಅದೇ ಮಾತು ಹೇಳುತ್ತಿದ್ದರೆ ಯಾರಿಗಾದರೂ ರೇಗೋದು ಸರಿ. ಅದಕ್ಕೆ ನೋಡಿ 'ದಲಿತರ ಮನೆಯನ್ನ ಯಾಕೆ ಆಯ್ಕೆ ಮಾಡಿದಿರಿ' ಅಂತ ಕೇಳಿದ್ದಕ್ಕೆ ಮುಖ್ಯಮಂತ್ರಿಗಳು 'ನಮ್ಮ ನಾಯಕರು ಕೇಳ್ತಿದ್ದರಲ್ಲ ಅದಕ್ಕೆ' ಅಂತ ಉತ್ತರಿಸಿದರು. ಪ್ರತಿಕಾ ಸಂದರ್ಶನದಲ್ಲಿ 'ಗಾಂಧೀಜಿ ಪ್ರೇರಣೆಯಿಂದ' ಹೀಗೆ ಮಾಡ್ತಿದೀನಿ ಅಂತ ಹೇಳಿ ಈ ತೋಲಾಂಡರಾಯ ಸಿದ್ಧರಾಮಯ್ಯನಿಂದ ಏನೂ ಅಲ್ಲ ಅಂತ ಸಮರ್ಥನೆ ನೀಡಿದರು. ಇದು ಹೇಗಾದರೂ ಇರಲಿ. ಸಿದ್ಧರಾಮಯ್ಯ ಪ್ರೇರಣೆಯೋ, ಗಾಂಧೀಜಿ ಪ್ರೇರಣೆಯೋ ಅಂತೂ ಯಾರದೋ ಒಂದು ಪ್ರೇರಣೆ. ಮುಖ್ಯಮಂತ್ರಿ ನಮ್ಮ ಊರಿಗೆ ಬರ್‍ತಿದಾರೆ. ಅದೇ ನಮಗೆ ಸಮಾಧಾನ.

ನಮ್ಮೂರಿನಲ್ಲಿ ಮಾತ್ರ ಅಲ್ಲ, ತಾಲ್ಲೂಕು ಕೇಂದ್ರಕ್ಕೆ ಹೋದರೂ ಅದೇ ಮುಖ್ಯಮಂತ್ರಿಗಳ ವಾಸ್ತವ್ಯದ ಸುದ್ದಿ. ಆದರೆ ದನಿ ಮಾತ್ರ ಬೇರೆ. ಹಳ್ಳಿಯಲ್ಲಿ ತೋರಿ ಬಂದ ಸಂತೋಷದ, ನಿರೀಕ್ಷಣೆಯ, ಸಂಭ್ರಮದ ದನಿ ಅಲ್ಲ, ನಿರ್ವಹಿಸಲೇಬೇಕಾದ ಹೊರೆ ಎಂಬ ಭಾವನೆ. ಯಾವ ಕಚೇರಿಗೆ ಹೋಗಿ ಕೇಳಿದರೂ 'ಸಿಎಂ ಬತ್ತಾ ಅವ್ರೆ, ನಮ್ಗೇ ತಲೇಗೆ ಬಂದು ಕುಂತದೆ. ಅಂತಾದ್ರಲ್ಲಿ ನಿಮ್ದು ಬ್ಯಾರೆ', 'ಸಿಎಂ ಬಂದು ಹೋಗಲಿ, ಆಮೇಲೆ ನೋಡಾನ' ಇಂತಹ ಸ್ಟಾಕ್ ಉತ್ತರಗಳು. ಎಲ್ಲರಿಗೂ ಏನೋ ತರಾತುರಿ. ಜಿಲ್ಲಾ ಕೇಂದ್ರಕ್ಕೆ ಹೋದರೂ 'ಸಿಎಂ ಬಂದೋಗ್ಲಿ' ಪುನರಾವರ್ತನೆ. ಅಂದರೆ ಇನ್ನು ಎಂಟು ಹತ್ತು ದಿವಸ ಸಾರ್ವಜನಿಕರ ಯಾವ ಕೆಲಸ ಮಾಡಲೂ ಅವರಿಗೆ ಪುರುಸೊತ್ತು ಆಗುವುದಿಲ್ಲ.

ಸಿಎಂ ಬರುವ ದಿವಸ ಹತ್ತಿರವಾಗುತ್ತಿದ್ದಂತೆಯೇ



ಇಡೀ ಜಿಲ್ಲಾ ಆಡಳಿತವೇ ಊರಿನಲ್ಲಿ ಠಿಕಾಣಿ ಹೂಡಿತು. ಎಷ್ಟು ಜಬ್ರ್ಜ ಜಬರ್‌ದಸ್ತಿನಿಂದ ಊರಿನಲ್ಲಿ ಅವರು ಓಡಾಡಿದರು ಅಂತೀರಿ. ನೋಡೋಕೆ ಎರಡು ಕಣ್ಣು ಸಾಕಾಗುತ್ತಿರಲಿಲ್ಲ, ಊರಿನ ಮರ್ಯಾದೆ ಪ್ರಶ್ನೆ ಇತ್ತಲ್ಲ ಅದಕ್ಕೇ ಊರೊಟ್ಟಿನ ದುಡ್ಡಿನಲ್ಲೇ ಅವರಿಗೆ ಬೇಕು ಬೇಕಾಗಿದ್ದನ್ನ ಟೈಮಿಗೆ ಸರಿಯಾಗಿ ಸರಬರಾಜು ಮಾಡಲಾಯ್ತು, ರಾತ್ರಿ ಹೊತ್ತು ಅಮಾಲು ದುಮಾಲು ಮಾಡದೇ ಇದ್ದರೆ ನಿದ್ರಾದೇವಿ ಹತ್ತಿರ ಸುಳಿಯೋಲ್ಲ ಅಂದವರಿಗೆ ಪಟೇಲರ ಮನೆಯಲ್ಲಿ ಗೋಪ್ಯವಾಗಿ ಅರೇಂಜ್ ಮಾಡಿದ್ದರು. ಊರಿಗೆ ಅಂತಂಥ ದೊಡ್ಡೋರು ಬರೋದು ಹೆಚ್ಚೋ, ನಾವು ಮಾಡೋದು ಹೆಚ್ಚೋ ಅದರ ಬಗ್ಗೆ ಚಿಂತೆಯಿಲ್ಲ ಬಿಡಿ.

ಮುಖ್ಯಮಂತ್ರಿ ಬಂದಾಗ ಊರು ಕ್ಲೀನಾಗಿ ಕಾಣ ಬೇಡವಾ. ಎಲ್ಲಿ ಅಂದರೆ ಅಲ್ಲಿ ಇದ್ದ ತಿಪ್ಪೆಗುಂಡಿಗಳನ್ನೆಲ್ಲ ಎಂತೆಂತಹವ್ರೋ ಮಿಷನ್‌ಗಳನ್ನು ತಂದು ಕೆರೆದು ಬಿಸಾಕಿದರು. ಮನೆಗೆ ಅಂಟಕೊಂಡಂಗೇ ಇದ್ದ ಬೇಲಿಗಳನ್ನೆಲ್ಲ ತರಿದು ಎಸೆದರು. ಊರಿನ ಹೈಕಳು ಬಾಯಿಬಾಯಿ ಬಿಟ್ಟುಕೊಂಡು ಆ ಹೆಮ್ಮಾರಿ ಮಿಷನ್‌ಗಳು ಕೆಲಸ ಮಾಡಾದ ನೋಡ್ತಾ ನಿಂತೊ. ಸುಮಾರು ದಿನ ಅವರ ಬಾಯಲ್ಲಿ ಅದರದ್ದೇ ಮಾತು. ಈ ಸ್ವಚ್ಛತಾ ಕಾರ್ಯಕ್ರಮದಿಂದ ತೊಂದರೆ ಆಗಿದ್ದು ಅಂದರೆ ಹೆಂಗಸರು ಮಕ್ಕಳಿಗೆ. ತಮ್ಮ ದೈನಂದಿನ ಬಹಿರ್ದೆಸೆ ಕಾರ್ಯಕ್ರಮಗಳಿಗೆ ತಿಪ್ಪೆಗುಂಡಿಯನ್ನೋ, ಬೇಲಿಯ ಮರೆಯನ್ನೋ ಆಶ್ರಯಿಸುತ್ತಿದ್ದ ಅವರಿಗೆ ಎರಡ ಒಂದ ಮಾಡುವ ತಾಣವೇ ಮಾಯವಾಗಿ ಕಂಗಾಲಾದರು. ಏನಾದರಾಗಲಿ ಊರು ನಿಗಿ ನಿಗಿ ಅಂತ ಹೊಳೆಯುತ್ತಿತ್ತು.

ಮಾನ್ಯ ಮುಖ್ಯಮಂತ್ರಿಗಳ ಕಾರು ಸಂಚರಿಸಲು ಯೋಗ್ಯವಾದ ರಸ್ತೆ ಊರಿನಲ್ಲಿ ಇರಲಿಲ್ಲವಾಗಿ ಕಾಮಗಾರಿ ಪ್ರಾರಂಭಿಸಿದರು. ಒಂದು ಎಂಟು ಹತ್ತು ಗುಡಿಸಲು, ಮುರುಕಲು ಮನೆಗಳು ರಸ್ತೆಗೆ ಅಡ್ಡ ಬರ್‍ತಿದಾವೆ ಅಂತ ಕೆಡವಿರಬಹುದಾದರೂ ರಸ್ತೆ ಅನ್ನುವ ರಸ್ತೆ ಎರಡೂ ಬದಿಗಳಲ್ಲಿ ಚರಂಡಿ ಹೊಂದಿ ಭರ್ಜರಿಯಾಗಿ ಕಾಣುತ್ತಿತ್ತು.

ದಲಿತ ಮುಖಂಡನ ಮನೆಯದ್ದೇ ಒಂದು ರೀತಿ ಬಿಡಿ. ಕೇರಿಯಲ್ಲಿ ಮನೆಗಳು ಒಂದಕ್ಕೊಂದು ಅಂಟಿಕೊಂಡಂತೆ ಇದ್ದವು. ಅವರಿಗೇನೂ ಸಪರೇಟಾಗಿ ಬಾತ್‌ರೂಮು, ಲೆಟ್ರಿನ್ನು ಇರಬೇಕು ಅನ್ನಿಸಿರಲಿಲ್ಲ, ಅವನ್ನ ಕಟ್ಟಿಸುವ ತೊಂದರೆಗೆ ಹೋಗಿರಲಿಲ್ಲ. ಮುಖ್ಯಮಂತ್ರಿಯವರಿಗೆ ಇರಬೇಕಾಗಿದ್ದರೂ ಕಟ್ಟಿಸಲು ಸ್ಥಳವೇ ಇರಲಿಲ್ಲ, ಅಧಿಕಾರಿಗಳಿಗೆ ದಿಗ್ಭ್ರಮೆ ಆಯಿತು. ಸಾಹೇಬರಿಗೆ ಲೆಟ್ರಿನ್ನು ಬಾತ್‌ರೂಮಿಗೇನು ವ್ಯವಸ್ಥೆ ಮಾಡುವುದು ಎಂಬುದು ಬೃಹದಾಕಾರದ ಸಮಸ್ಯೆಯಾಗಿ ಕಾಡಿತು. ಅಳಿದೂ ಸುರಿದೂ ಈ ಮನೆಗೆ ಅಂಟದಂತೆಯೇ ಸೇರಿರುವ ದಲಿತನ ಮನೆಯನ್ನು ಇದಕ್ಕಾಗಿ ಪರಿವರ್ತಿಸಬೇಕೆಂದೂ ಮಧ್ಯದ ಗೋಡೆಯನ್ನು ಕುಕ್ಕಿ ಬಾಗಿಲು ಇಡಬೇಕೆಂದೂ ತೀರ್ಮಾನಿಸಿದರು. ಇದಕ್ಕೆ ಅಂಜುತ್ತ ಅಂಜುತ್ತಲೇ ಗೊಣಗಿದ ಪಕ್ಕದ ಮನೆಯಾತನಿಗೆ 'ಒಂದೆರಡು ದಿನ ತಡ್ಕೊ, ಎಲ್ಲ ಮೊದ್ಲಿದ್ದಂಗೇ ಮಾಡಿ ಕೊಡ್ತೀವಿ' ಎಂಬ ಆಶ್ವಾಸನೆಯ ಜೊತೆಗೆ ಒಂದಿಷ್ಟು ರೂಪಾಯಿಗಳನ್ನು ಅವನ ಕೈಗೆ ತುರುಕಿ ಬಾಯಿ ಮುಚ್ಚಿಸಿದರು.

ನಂತರದ ಕೆಲಸ ಸುಲಭ ಆಯಿತು. ಟಿವಿ ಬಂದು ಕೂತಿತು. ಸ್ಟ್ಯಾಂಡ್ ಫ್ಯಾನ್ ತಿರುಗಿತು. ಮನೆ ಸುಣ್ಣಬಣ್ಣ ಕಂಡಿತು. ಒಟ್ಟಿನಲ್ಲಿ ನಾಟಕದಲ್ಲಿ ಆಸ್ಥಾನದ ಸೆಟ್ ಹಾಕ್ತಾರಲ್ಲ ಹಂಗೆ ಹಾಕಿ ಮನೆಯೆಂಬ ಮನೆ ಜಗಿಜಗಿ ಅನ್ನುವಂತೆ ಮಾಡಿದರು.

ಮುಖ್ಯಮಂತ್ರಿಗಳ ಆಗಮನದ ದಿನ. ಊರನ್ನು ತಳಿರು ತೋರಣಗಳಿಂದ ಮಾತ್ರ ಅಲ್ಲ, ಶಸ್ತ್ರಸಜ್ಜಿತ ಪೊಲೀಸರಿಂದ ಅಲಂಕರಿಸಿದರು. ಮನೆಮನೆಗೆ ನಾಯಿ ನುಗ್ಗಿಸಿದರು, ಯಾವುದಾದರೂ ಭಯೋತ್ಪಾದಕ ಕೃತ್ಯ ನಡೆಯಬಹುದು ಎಂಬ ಅನುಮಾನದಿಂದ. 'ಇದ್ಯಾವ್ ಸೀಮೆ ಜನವ್ರೋ ಇವ್ರು, ಕ್ವಾಣೆ ಒಳಕ್ಕೆಲ್ಲ ನಾಯಿಬಿಡ್ತಾರೆ' ಎಂಬ ಆಕ್ಷೇಪ ಕೆಲವು ಮುದುಕಿಯರಿಂದ ಬಂದಿತಾದರೂ ಪ್ರಪಂಚ ಕಂಡಿದ್ದ ಯುವಕರು 'ನಿಂಗೇನು ಗೊತ್ತಾದತ್ತು ಸುಮ್ನೆ ಕುಂತ್ಕೊ' ಎಂದು ಗದರಿಸಿ ತೆಪ್ಪಗಿರಿಸಿದರು.

ಈ ಸೆಕ್ಯೂರಿಟಿ ವ್ಯವಸ್ಥೆಯಿಂದ ನಿಜಕ್ಕೂ ಅನ್‌ಸೆಕ್ಯೂರ್ ಆದವರು ಅಂದರೆ ಮುಖ್ಯಮಂತ್ರಿ ತಂಗಬೇಕಾದ ಮನೆಯವರು. ಪಾಪ ಆ ಪುಟ್ಟ ಮನೆಯ ಸುತ್ತ ಐವತ್ತು ಅರವತ್ತು ಸಶಸ್ತ್ರ ಪೊಲೀಸರು ನಿಂತಿದ್ದರು. ಅವರ ಕಣ್ಣುತಪ್ಪಿಸಿ ಓಡಾಡುವುದೇ ಅಸಾಧ್ಯ ಅನ್ನುವ ಸ್ಥಿತಿ ಉದ್ಭವಿಸಿತ್ತು! ಮನೆಯ ಹೆಂಗಸರು ಬಹಿರ್ದೆಸೆಗೆ ಹೋಗಬೇಕಾದರೂ ಪೊಲೀಸರ ಕಣ್ಣು ಕೆಕ್ಕರಿಸಿ ನೋಡಿದಂತಾಗಿ, ನಾಚಿದ ಅವರು ಎರಡು ದಿನ ಊಟ ನೀರು ತೆಗೆದುಕೊಳ್ಳುವುದನ್ನೇ ನಿಲ್ಲಿಸಿದ್ದರಂತೆ. 'ಇಷ್ಟೊಂದು ಸೆಕ್ಯೂರಿಟಿ ಯಾಕೆ' ಅಂತ ಅಧಿಕಾರಿಗಳನ್ನು ಕೇಳಿದ್ದಕ್ಕೆ 'ಅನುಗ್ರಹ'ಕ್ಕೆ ಕೊಡುವಷ್ಟೇ ಇಲ್ಲೂ ಕೊಡ್ತೀವಿ ಅಂತ ಅಧಿಕಾರಿಗಳು ಹೇಳಿದರಂತೆ. ಅಲ್ಲ ಪುಟಗೋಸಿ ಅಷ್ಟು ಅಗಲದ ಮನೆಗೂ ಅನುಗ್ರಹದಂತಹ ಬಂಗಲೆಗೂ ಒಂದೇ ನಿಯಮಾನ ಅಂತ ಕೆಲವರು ಕುಹಕವಾಡಿದರೂ ಕಾನೂನು ನೋಡಿ, ಅಧಿಕಾರಿಗಳು ಅದರಂತೆ ನಡೆಯಬೇಕಾಗುತ್ತೆ! ಹಲವರಿಗೆ ತೊಂದರೆ ಆಗಬಹುದು. ಏನೂ ಮಾಡಕ್ಕಾಗಲ್ಲ.

ಯಾಕೋ ನಮ್ಮ ಮುಖ್ಯಮಂತ್ರಿಗಳು ಸ್ತ್ರೀದ್ವೇಷಿ ಅಂತ ಕಾಣುತ್ತೆ, ಅವರ ಮಂತ್ರಿಮಂಡಳದಲ್ಲಿ ಸ್ತ್ರೀಯರಿಲ್ಲ. ಹಳ್ಳಿಗೆ ಬಂದಾಗಲೂ ಹೆಂಗಸರು ಮಾಡಿದ ಅಡಿಗೆಯನ್ನು ಊಟ ಮಾಡಲ್ಲ, ಅದಕ್ಕೇ ಸಪರೇಟಾಗಿ ನಗರದಿಂದ ಅಡಿಗೆಯವರನ್ನು ಕರೆಸಿದ್ದರು. ಪತ್ರಕರ್ತರೇ ಇಲ್ಲದಿದ್ದರೆ ಅದೆಂತಹ ಹಳ್ಳಿಯ ವಾಸ್ತವ್ಯ, ಮುಖ್ಯಮಂತ್ರಿ ಎಷ್ಟೊಂದು ಸರಳ ಜೀವಿ ಅನ್ನೋದನ್ನ ಹಾಡಿ ಹೊಗಳುವವರಾರು? ಅದಕ್ಕಾಗಿ ಅವರಿಗೆ ಎಲ್ಲ 'ವ್ಯವಸ್ಥೆ'ಗಳನ್ನೂ ಮಾಡಿದ್ದರು. ಆ ಖರ್ಚನ್ನು ಹಳ್ಳಿಗೆ ಹಾಕಲಿಲ್ಲ ಬಿಡಿ.

ಮುಖ್ಯಮಂತ್ರಿಗಳು ಬಂದರು, ಮಾತಾಡಿದರು, ಊಟ ಆದಮೇಲೆ ಕುರ್ಲ್‌ಆನ್ ಹಾಸಿಗೆಯಲ್ಲಿ ಮಲಗಿದರು. ಇವೆಲ್ಲ ವಿವರ ಬೇಕಿಲ್ಲ ಬಿಡಿ, ಮಾಧ್ಯಮಗಳಲ್ಲೇ ನೋಡಿರ್‍ತೀರಿ. ಆಮೇಲೆ ಏನಾಯಿತು ಅಂದರೆ...

ನಾಟಕ ಮುಗಿದ ಮೇಲೆ ಸೆಟ್‌ಗಳನ್ನೆಲ್ಲಾ ಕಿತ್ತು ಹಾಕ್ತಾರಲ್ಲ ಹಾಗೇನೆ... ಟಿವಿ, ಫ್ಯಾನು, ಹಾಸಿಗೆ ಇಂತಹವೆಲ್ಲ ಮನೆಯಿಂದ ಮಂಗಮಾಯ ಆದೊ. ಕುಕ್ಕಿದ ಬಾಗಿಲು ಹಂಗೇ ಉಳೀತು. ಸಂತೆ ಕಳೆದ ಮೇಲೆ ಕಾಣುವ ಮೈದಾನದಂತೆ ಆಯಿತು. ಮಾಧ್ಯಮಗಳಲ್ಲಿ ಮುಖ್ಯಮಂತ್ರಿಯವರ ಹಳ್ಳಿಗಳ ವಾಸ್ತವ್ಯದ ಯಶಸ್ವಿ ಚಿತ್ರಣ ವರದಿ ಆಯಿತು!

-ಎಚ್.ಎಲ್. ಕೇಶವಮೂರ್ತಿ

ಕಲ್ಲನಾಗರಿಗೆ ಹಾಲೆರೆವ ಜನ

ಕಳೆದ ವಾರದ 'ಜೋಕು'ಮಾರಸ್ವಾಮಿ ಎಂಬ ಮುಖಪುಟ ವರದಿ ಮುಖ್ಯಮಂತ್ರಿಗಳ ಕಪಟ ನಾಟಕಕ್ಕೆ ಹಿಡಿದ ಕನ್ನಡಿಯಂತಿತ್ತು, ತಾನು ಗಾಂಧಿ ಶಿಷ್ಯ ಎಂಬಂತೆ ಹಳ್ಳಿಗಳಲ್ಲಿ ವಾಸ್ತವ್ಯ ಹೂಡಿ, ತಾನೊಬ್ಬ ದಲಿತೋದ್ಧಾರಕ ಎಂಬಂತೆ ಪೋಜು ಕೊಡುತ್ತಿರುವ ಕುಮಾರಸ್ವಾಮಿ ನಿಜಕ್ಕೂ ಪ್ರಸ್ತುತ ಕರ್ನಾಟಕದ ರಾಜಕೀಯದಲ್ಲಿ ಒಂದು ದೊಡ್ಡ ಜೋಕ್! ಆತ ಯಾವ ರೀತಿಯಲ್ಲೂ ಮಣ್ಣಿನ ಮೊಮ್ಮಗನಲ್ಲ, ಬದಲಾಗಿ ಒರ್ವ ಮಂಗ್ಯನ ಮಗ!

ಇಂತಹ ಮುಖ್ಯಮಂತ್ರಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ನೋವು, ದಲಿತರ ಅಸಹಾಯಕತೆ ಅರ್ಥವಾಗುವುದಾದರೂ ಹೇಗೆ?

- ರಮಜಾನ ಕೆ. ಕೊರ್ತಿ, ಬಾದಾಮಿ

'ಜೋಕು' ಮಾರಸ್ವಾಮಿ ಲೇಖನ ತುಂಬಾ ಚೆನ್ನಾಗಿತ್ತು, ತಾನು ದಲಿತರ ಮನೆಯಲ್ಲಿ ಮಲಗಿ ಗೊರಕೆ ಹೊಡೆದರೆ ಅಸ್ಪೃಶ್ಯತೆ ಮಾಯವಾಗುತ್ತದೆ ಎಂದು ನಂಬಿರುವಂತಿದೆ ಕುಮಾರಸ್ವಾಮಿಯವರು. ಪುಕ್ಕಟೆ ಪ್ರಚಾರಕ್ಕಾಗಿ ಅವರು ಇಷ್ಟು ಕೀಳು ಮಟ್ಟಕ್ಕೆ ಇಳಿಯಬಾರದಿತ್ತು, ವಿಪರ್ಯಾಸದ ಸಂಗತಿ ಯಾವುದೆಂದರೆ, ಕುಮಾರಸ್ವಾಮಿಯವರು ಇಷ್ಟೆಲ್ಲ ನಾಟಕವಾಡುತ್ತಿದ್ದರೂ ಅವರ ಈ ಖಂಡನೀಯ ವರ್ತನೆಯ ವಿರುದ್ಧ ಯಾವ ದಲಿತ ಸಂಘಟನೆಯೂ ಇಲ್ಲಿಯವರೆಗೂ ಬೀದಿಗೆ ಬಾರದೇ ಇರುವುದು.

- ಮುತ್ತಣ್ಣ ಪೂಜಾರ್, ಕದಲಬಾಳು.

'ಕಂಡಹಾಗೆ' ಅಂಕಣದಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಅಲ್ ಗೋರ್‌ರವರ ಪರಿಸರ ಪ್ರೇಮದ ಬಗ್ಗೆ ಎರಡು ಬಾರಿ ಓದಿದೆ. ಇವತ್ತು ನಮ್ಮ ಪರಿಸರವನ್ನು ರಕ್ಷಿಸುವುದು ತುರ್ತಿನ ಅವಶ್ಯಕತೆಯಾಗಿದೆ, ಇಲ್ಲವಾದರೆ ಅನಾಹುತ ಇಡೀ ಮಾನವ ಕುಲಕ್ಕೇ ಕಟ್ಟಿಟ್ಟ ಬುತ್ತಿ. ಗೋರ್‌ರವರ ಪರಿಸರ ಕಾಳಜಿ ಎಲ್ಲರಲ್ಲೂ ಮೂಡಲಿ ಎಂದು ಆಶಿಸುತ್ತಾ...

-ಅರ್ಮಾ, ಬೆಂಗಳೂರು.



ಅಮೆರಿಕದ ಬಾಲ್ಟಿ ಮೋರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕೆ ಹಾಜರಾಗಲು ಬಹಳಷ್ಟು ಶಾಸಕರು ಲಾಬಿ ಮಾಡಿದ್ದರು. ಆದರೆ ಹಾಗೆ ಹೋದ ಶಾಸಕರು ಸಮ್ಮೇಳನ ದಲ್ಲಿ ಭಾಗವಹಿಸುವ ಬದಲಾಗಿ ಹೋಟೆಲ್/ಬಾರ್ ಗಳಲ್ಲಿ ಊರು ಸುತ್ತಾಡುವುದರಲ್ಲಿ ತಮ್ಮ ಸಮಯವನ್ನು ವ್ಯರ್ಥಮಾಡಿದರಂತೆ. ಈ ರೀತಿ ಹಣ ಪೋಲು ಮಾಡುವ ಬದಲಾಗಿ ಬಡಬಗ್ಗರಿಗೆ ಹಂಚಿದ್ದರೆ ಉಪಯೋಗವಾಗುತ್ತಿತ್ತು, ಈ ಪ್ರವಾಸದಿಂದ ನಮ್ಮ ಶಾಸಕರು ಸಾಧಿಸಿದ್ದಾದರೂ ಏನನ್ನು?

- ಡಿ. ಎಲ್. ನಾಗರಾಜ್, ಹರಪ್ಪನಹಳ್ಳಿ

'ಲಂಕೇಶ್' ವಾರ ಪತ್ರಿಕೆಯಲ್ಲಿ ನಟ ಶಿವರಾಜ ಕುಮಾರ್‌ರವರ ಆತ್ಮಕತೆ ಪ್ರಾರಂಭವಾದಾಗ ನನಗ್ಯಾಕೋ ಇರುಸುಮುರುಸಾಗಿತ್ತು, ಆದರೆ ತಮ್ಮ ಆತ್ಮಕತೆಯ 19ನೇ ಕಂತಿನಲ್ಲಿ ಅವರು ದುಷ್ಕರ್ಮಿಗಳಿಂದ ಸಿಖ್ ಸಮುದಾಯದ ಹುಡುಗರನ್ನು ರಕ್ಷಿಸಿದ್ದು ಮತ್ತು ಅವರನ್ನು ತಮ್ಮತಮ್ಮ ಮನೆಗೆ ತಲುಪಿಸಿದ್ದನ್ನು ಓದಿದ ನಂತರ ನನ್ನ ಅಭಿಪ್ರಾಯ ಬದಲಾಯಿತು. ಒಂದು ಪತ್ರಿಕೆಯೊಂದಿಗೆ ಬೆಳೆಯುವುದು ಅಂದರೆ ಇದೇ ಅಲ್ಲವೇ?

- ವಿಜಯ್ ಅಮೃತರಾಜ್, ಕೊಪ್ಪಳ

ಇಡೀ ದಲಿತರ ಆತ್ಮಾಭಿಮಾನದ ಸಂಕೇತದಂತಿರುವ ದೇವನೂರು ಮಹಾದೇವರ ಅಭಿಪ್ರಾಯ, ಈ ನಾಡಿನ ಪ್ರತಿಯೊಬ್ಬ ದಲಿತರ, ನಿರ್ಗತಿಕರ ಗ್ವಾಮಾಳೆ ಕೆಳಗಿನ ಉಸಿರ ತಿತ್ತಿಯಿಂದ ಬಂದದ್ದು, ದೇವನೂರರ ಭೂಮಿ ತೂಕದ ಮಾತುಗಳು ಕೋ-ಜಾ ಸರ್ಕಾರದ ಕಿವುಡರಿಗೆ ಕೇಳಿಸಲಾರದು.

ಹುಲಿಕುಂಟೆಮೂರ್ತಿಯವರ ಲೇಖನ ಮತ್ತು ಸಂದರ್ಶನ ನಾಡಿನ ಆರೋಗ್ಯವಂತ ಮನಸ್ಸುಗಳ ಅಭಿವ್ಯಕ್ತಿಗೆ ಹಿಡಿದ ಕನ್ನಡಿಯಂತಿದೆ. ಇನ್ನಾದರೂ ದಲಿತರ ಹೆಸರಲ್ಲಿ, ದಲಿತರ ಹೆಣಗಳ ಮೇಲೆ Vote Bank ರಾಜಕಾರಣ ಮಾಡುವುದನ್ನು ಈ ದರಿದ್ರ ಸರ್ಕಾರಗಳು ನಿಲ್ಲಿಸಲಿ.

'ಥೂತ್ತೇರಿ'ಯಲ್ಲಿ 'ಯಾಹೂ' ಕುಮಾರಸ್ವಾಮಿಯ ಅಂಡಿಗೆ ಬರೆ ಇಟ್ಟಂತೆ ಬರೆದಿದ್ದಾರೆ. ಈ ಎರಡು ಲೇಖನಗಳು 'ಲಂಕೇಶ್'ನ ಅಭಿವ್ಯಕ್ತಿಯ ಘನತೆಯನ್ನು ಹೆಚ್ಚಿಸಿವೆ.

-ಕೆ.ಎಲ್. ಚಂದ್ರಶೇಖರ್ ಐಜೂರ್
ಜ್ಞಾನಭಾರತಿ, ಬೆಂಗಳೂರು.

ರಾಜಕೀಯದ ಮಾಫಿಯಾ ಲೋಕವನ್ನು ಗೌರಿ ಲಂಕೇಶ್ ಪತ್ರಿಕೆಯು ಕಣ್ಣಿಗೆ ಕಟ್ಟುತ್ತಲಿದೆ. ಕುರುಡುತನದಲ್ಲಿ ಮುಳುಗಿರುವ ಮಂದಿಯು ಕಣ್ಣಿಗೆ ಕಾಣದ್ದನ್ನು ನಂಬುತ್ತಾರೆ.

ದಡದಕಲ್ಲಹಳ್ಳಿಯ ಚಲುವಯ್ಯನವರ 'ಕಲ್ಲನಾಗರಿಗೆ' ಹಾಲನೆರೆವವರೇ ತುಂಬಿರುವಾಗ ಗಾಂಧೀಜಿಯ ಸ್ಫೂರ್ತಿಗೊಳಗಾಗುವವರಿಗೆ ಕೊರತೆಯುಂಟಾಗುವುದಿಲ್ಲ.

ಪತ್ರಿಕೆಯ ಸತ್ಯ ಪ್ರತಿಪಾದನೆಯು ಸತ್ತಂತಿರುವ ಮಂದಿಯನ್ನು ಕತ್ತಲೆಯಿಂದ ವಿಮೋಚನೆಗೊಳಿಸುವ ಕಹಳೆಯಾಗಲಿ.

-ಪಿ.ಗೋಕುಲ್‌ದಾಸ್, ಮಂಗಳೂರು

ಕಚ್ಚಾಡಿ ಸಾಧಿಸುವುದಾದರು ಏನು?

ಓದಿದೆ ಸೆ. 20ರ ಸಂಚಿಕೆಯಲ್ಲಿ
ಸುಕನ್ಯಾ ಕನಾರಳ್ಳಿ
ಅನುವಾದಿಸಿದ ಸಣ್ಣ ಕಥೆ
'ಆ ಕೋಮಿನವರು,
ಈ ಕೋಮಿನವರು'॥
ಕಥೆ ಓದುತ್ತ ಓದುತ್ತ
ವ್ಯಥೆಯಾಯಿತು
ಇಂತದೆ ಘಟನೆ; ಸಂದರ್ಭ
ಕಂಡುನೊಂದಿದ್ದ ನೆನಪಾಯಿತು॥
ಯಾಕೆ ಕಚ್ಚಾಡುತ್ತಾರೋ ಗೊತ್ತಿಲ್ಲ
ಆ ಜಾತಿ ಈ ಜಾತಿ ಎಂದು
ಕಚ್ಚಾಡುವವರೆ ಹೇಳಬೇಕು
ಕಚ್ಚಾಡಿ ಸಾಧಿಸುವುದಾದರೂ ಏನೆಂದು//

-ಅನಾರ್ಕಲಿ ಸಲೀಂಚಿಣ್ಯ,
ಶ್ರೀರಂಗಪಟ್ಟಣ

ಮಾನವ ತನ್ನ ಜೀವನವನ್ನು ಬದಲಿಸಬೇಕಾದರೆ ಮೊದಲು ಮನೋಭಾವವನ್ನು ಬದಲಿಸಬೇಕು-ವಿಲಿಯಂ ಜೇಮ್ಸ್




ನನಗಿನ್ನೂ ನೆನೆಪಿದೆ; ನಾವೆಲ್ಲ ಸಂಭಾಷಣೆಯೇ ಇಲ್ಲದ ಒಂದು ಸ್ಟೈಲಿಷ್ ನಾಟಕದಲ್ಲಿ ನಟಿಸಿದ್ದೆವು. ಲೈಟಿಂಗ್ ಮತ್ತು ಸೌಂಡ್ ತುಂಬ ಮಹತ್ತರವಾದ ಪಾತ್ರ ವಹಿಸಿದ್ದ ಆ ನಾಟಕ ಒಂದು ರೀತಿಯಲ್ಲಿ ಮೈಮ್ ಶೋ ತರಹ ಇತ್ತು.

ನಾಟಕರಂಗ ನೀಡಿದ ಮಜಾ!

ನಿರೂಪಣೆ: ಸದಾಶಿವ ಶೆಣೈ

20

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ಇದೆಂತಹ ವಿಪರ್ಯಾಸ ನೋಡಿ. ಇಂದಿರಾ ಗಾಂಧಿಯವರು ಕಗ್ಗೊಲೆಯಾದ ನಂತರದ ಗಲಭೆಯಲ್ಲಿ ಕಿಡಿಗೇಡಿಗಳ ಕಪಿಮುಷ್ಠಿಯಿಂದ ಸಿಖ್ ಹುಡುಗರನ್ನು ಬಿಡಿಸಿದ್ದ ನಾನು, ಅದಾದ ಸ್ವಲ್ಪ ದಿನಗಳಲ್ಲೇ 'ಇಂದಿರಾ ಗಾಂಧಿ ಆಲ್ ಇಂಡಿಯಾ ಲೆವೆಲ್ ಡ್ರಾಮಾ ಮತ್ತು ಡ್ಯಾನ್ಸ್ ಕಾಂಪಿಟೇಷನ್'ನಲ್ಲಿ ಸ್ಪರ್ಧಿಸುವಂತಾಯಿತು.

ಈ ಸ್ಪರ್ಧೆ ನಡೆದದ್ದು ರಾಜಧಾನಿ ನವದೆಹಲಿಯಲ್ಲಿ. ಮದ್ರಾಸಿನಿಂದ ರೈಲಿನಲ್ಲಿ ನವದೆಹಲಿಗೆ ಪ್ರಯಾಣ ಮಾಡಿದ ನಾವು ಹತ್ತು ದಿನಗಳ ಕಾಲ ಅಲ್ಲೇ ವಾಸ್ತವ್ಯ ಹೂಡಿದೆವು. ಆ ಹತ್ತು ದಿನಗಳಲ್ಲಿ ಪ್ರತಿ ಸಂಜೆ ನಮ್ಮ ಫುಲ್ ಟೀಂ ದೆಹಲಿಯ ರಸ್ತೆಗಳಲ್ಲಿ ಸುತ್ತಾಡಿದ್ದೇ ಸುತ್ತಾಡಿದ್ದು. ನಮ್ಮ ತಂಡದಲ್ಲಿ ಡ್ರಾಮ ಸೆಕ್ಷನ್‌ನಿಂದ ಸ್ಮಿತಾ ಎಂಬ ಹುಡುಗಿ ಬಂದಿದ್ದಳು. ನಾನು ಡ್ಯಾನ್ಸ್ ಸೆಕ್ಷನ್‌ನಲ್ಲಿ ಸ್ಪರ್ಧಿಸಿದ್ದೆ. ಹುಡುಗಿಯರು ಮೇಷ್ಟ್ರ ಜೊತೆ ಬೇರೆ ಕಡೆ ಉಳಿದುಕೊಂಡಿದ್ದರೂ ರಾತ್ರಿ ಹೊತ್ತು ನಾವೆಲ್ಲರು ಒಂದೇ ಕಡೆ ಊಟ ಮಾಡುತ್ತಿದ್ದೆವು.

ಅಖಿಲ ಭಾರತ ಮಟ್ಟದ ಆ ಸ್ಪರ್ಧೆಯ ಡ್ಯಾನ್ಸ್ ವಿಭಾಗದಲ್ಲಿ ನಾನು ಮೊದಲ ಪ್ರಶಸ್ತಿ ಪಡೆದಾಗ ನಮ್ಮ ತಂಡದ ಎಲ್ಲರಿಗೂ ಬಹಳ ಸಂತೋಷವಾಯಿತು. ಪ್ರಶಸ್ತಿ ಅನೌನ್ಸ್ ಆದ ಕೂಡಲೇ ಹತ್ತಿರದಲ್ಲೇ ಇದ್ದ ಫೋನ್ ಬೂತ್‌ನಿಂದ ಅಪ್ಪಾಜಿ ಮತ್ತು ಅಮ್ಮನಿಗೆ ತಿಳಿಸಿದಾಗ ಅವರಿಗೂ ತುಂಬಾ ಆನಂದವಾಯಿತು. ತಮಿಳುನಾಡಿನ ಅನೇಕ ಪತ್ರಿಕೆಗಳು ನನ್ನ ಫೋಟೋವನ್ನು ಹಾಕಿ ನನಗೆ ಪ್ರಶಸ್ತಿ ದೊರೆತಿದ್ದರ ಬಗ್ಗೆ ಬರೆದವು. ಆರಂಭದಿಂದಲೂ ನೃತ್ಯ ಮಾಡುವುದೆಂದರೆ ಇಷ್ಟ ಪಡುತ್ತಿದ್ದ ನಾನು ಆ ಸ್ಪರ್ಧೆಯಲ್ಲೂ ಸುಲಭವಾಗಿ ಡ್ಯಾನ್ಸ್ ಮಾಡಿದ್ದೆ. ಅದೊಂದು ಟೂರ್ನಮೆಂಟ್ ಎಂದು ವಿಶೇಷವಾಗಿ ಪ್ರಯತ್ನಪಟ್ಟಿರಲಿಲ್ಲ. ನನಗೆ ಡ್ಯಾನ್ಸ್‌ನಲ್ಲಿ ಪ್ರಥಮ ಪ್ರಶಸ್ತಿ ದೊರಕಿದರೆ, ಡ್ರಾಮಾ ಸೆಕ್ಷನ್‌ನಲ್ಲಿ ಸ್ಮಿತಾಳಿಗೂ ಪ್ರಶಸ್ತಿ ಬಂತು. ಹೀಗೆ ನ್ಯಾಷನಲ್ ಲೆವೆಲ್ ಕಾಂಪಿಟೇಷನ್‌ನಲ್ಲಿ ಎರಡು ಪ್ರಶಸ್ತಿಗಳನ್ನು ಪಡೆದ ನಮ್ಮ ತಂಡ ದೆಹಲಿಯಿಂದ ಮದ್ರಾಸಿಗೆ ಹಿಂದಿರುಗಿತು.

ಹಾಗೂ ಹೀಗೂ ನನ್ನ ಫಿಲ್ಮ್ ಇನ್ಸ್‌ಟಿಟ್ಯೂಟ್ ಜೀವನವೂ ಮುಗಿಯುತ್ತಾ ಬಂತು. ಅದು ಬಹುಶಃ 1984ರ ವರ್ಷವಿರಬೇಕು. ಅಲ್ಲಿಯೂ ನಾನು ಅಂತಿಮ ಪರೀಕ್ಷೆಯನ್ನು ಬರೆದು ಮುಗಿಸಿದೆ. ಮತ್ತೆ ಎಲ್ಲಾ ಪರಸ್ಪರ ಗುಡ್ ಬೈ ಹೇಳುವ ಕಾಲ ಬಂತು. ಆದರೆ ಹಾಗೆ ಗುಡ್ ಬೈ ಹೇಳುವ ಬದಲಾಗಿ ಪರೀಕ್ಷೆ ಮುಗಿದ ನಂತರವೂ ಸುಮಾರು ಒಂದು ತಿಂಗಳ ಕಾಲ ನಾವೆಲ್ಲ ಒಟ್ಟಿಗೇ ಕಳೆದೆವು.

ಆದರೆ ಆಗಲೂ ಸುಮ್ಮನೆ ಟೈಮ್ ಪಾಸ್ ಮಾಡುವ ಬದಲು ನಮ್ಮ ಪ್ರೀತಿಯ ಮೇಷ್ಟ್ರಾದ ಪ್ರೊಡಕ್ಷನ್ ಡೈರೆಕ್ಟರ್ ನಾಯರ್ ನಮಗೆಲ್ಲ ನಾಟಕಗಳಲ್ಲಿ ಭಾಗವಹಿಸುವ ಅವಕಾಶ ಮಾಡಿಕೊಟ್ಟಿದ್ದರು.

ನನಗಿನ್ನೂ ನೆನೆಪಿದೆ; ನಾವೆಲ್ಲ ಸಂಭಾಷಣೆಯೇ ಇಲ್ಲದ ಒಂದು ಸ್ಟೈಲಿಷ್ ನಾಟಕದಲ್ಲಿ ನಟಿಸಿದ್ದೆವು. ಲೈಟಿಂಗ್ ಮತ್ತು ಸೌಂಡ್ ತುಂಬ ಮಹತ್ತರವಾದ ಪಾತ್ರ ವಹಿಸಿದ್ದ ಆ ನಾಟಕ ಒಂದು ರೀತಿಯಲ್ಲಿ ಮೈಮ್ ಶೋ ತರಹ ಇತ್ತು.

ಆ ನಾಟಕದ ಹೆಸರು 'ಕರ್ಮ'. ಈ 'ಕರ್ಮ'ವನ್ನು ನೋಡಿದ ಫ್ರೆಂಚ್ ತಂಡದವರು ಅದನ್ನು ಎಷ್ಟು ಇಷ್ಟ ಪಟ್ಟರೆಂದರೆ ನಮ್ಮನ್ನು ಅವರ ದೇಶಕ್ಕೆ ಆಹ್ವಾನಿಸಿದರು. ಆದರೆ ಅದ್ಯಾವುದೋ ಕಾರಣಕ್ಕಾಗಿ ನಾವು ಈ ದೇಶಕ್ಕೆ ಹೋಗಲಾಗಲಿಲ್ಲ.

'ಕರ್ಮ' ನಾಟಕದ ಕಥಾವಸ್ತು ಶಿಕಾರಿಗೆ ಹೋಗುವವರದ್ದಾಗಿತ್ತು. ಶಿಕಾರಿಗೆ ಹೊರಡುವವರು ಹೇಗೆ ತಯಾರಿ ಮಾಡುಕೊಳ್ಳುತ್ತಾರೆ, ಕಾಡಿನಲ್ಲಿ ಎದುರಾಗುವ ಪರಿಸ್ಥಿತಿಯನ್ನು ಅವರು ಹೇಗೆ ನಿಭಾಯಿಸುತ್ತಾರೆ, ಊಟ ಎಲ್ಲಿ ಮಾಡುತ್ತಾರೆ, ಶಿಕಾರಿ ಮುಗಿದ ನಂತರ ಹೇಗೆ ಮನೆಗೆ ಮರಳುತ್ತಾರೆ, ಎಂಬತ್ಯಾದಿ ವಿಷಯಗಳ ಬಗ್ಗೆ ಆ ನಾಟಕ.

ಒಮ್ಮೆ ಶಿಕಾರಿಗೆ ಹೋಗುವಾಗ ಮಧ್ಯಾಹ್ನದ ಊಟಕ್ಕೆ ಸಾಂಬಾರು ತೆಗೆದುಕೊಂಡು ಹೋಗುವುದನ್ನು ಮರೆತಿರುತ್ತಾರೆ. ಆಗ ಯಾರು ಮೊದಲು ಮಾತನಾಡುತ್ತಾರೋ ಅವರು ಪಟ್ಟಣಕ್ಕೆ ಹೋಗಿ ಸಾಂಬಾರು ತರಬೇಕಾಗುತ್ತದೆ ಎಂದು ಶಿಕಾರಿ ತಂಡದ ನಾಯಕ ಹೇಳುತ್ತಾನೆ. ಕಾಡಿನಿಂದ ಪಟ್ಟಣ ಇಪ್ಪತ್ತೈದು ಕಿಲೋ ಮೀಟರ್ ದೂರ ಇರುವುದರಿಂದ ಯಾರೂ ಮಾತನಾಡದೇ ಬರೀ ದೈಹಿಕ ಸನ್ನೆಯಿಂದಲೇ ಕೆಲಸವನ್ನು ಮಾಡುತ್ತಿರುತ್ತಾರೆ.

ಹೀಗಿರುವಾಗ ಒಬ್ಬ ದೊಡ್ಡ ಕಾಡು ಮನುಷ್ಯ ಅಲ್ಲಿಗೆ ಬರುತ್ತಾನೆ. ಅವನು ಶಿಕಾರಿ ತಂಡದ ಸದಸ್ಯರಿಗೆ ಸಿಕ್ಕಾಪಟ್ಟೆ ಹೊಡೆಯುತ್ತಾ ಹೋಗುತ್ತಾನೆ. ಆದರೆ ಯಾರೂ ಮಾತನಾಡುವುದಿಲ್ಲ, ಯಾರೂ ಪ್ರತಿಭಟಿಸುವುದಿಲ್ಲ. ಯಾಕೆಂದರೆ ಮಾತನಾಡಿದರೆ ಅಥವಾ ಪ್ರತಿಭಟಿಸಿದರೆ ಆತ ದೂರದ ಪಟ್ಟಣಕ್ಕೆ ಹೋಗಿ ಸಾಂಬಾರನ್ನು ತರಬೇಕಾಗುತ್ತದೆ ಎಂಬ ಭಯ....! ಹೀಗೆ ಆ ಕಾಡು ಮನುಷ್ಯ ಎಲ್ಲರನ್ನೂ ಹೊಡೆಯುತ್ತಾ ಮುನ್ನುಗ್ಗುತ್ತಿದ್ದರೂ ಯಾರೂ ಹುಟಿಕ್ ಪಿಟಿಕ್ ಎನ್ನುವುದಿಲ್ಲ. ಕೊನೆಗೆ ಈ ಕಾಡು ರಾಕ್ಷಸ ಅಲ್ಲಿದ್ದ ಅನ್ನವನ್ನು ತಿನ್ನಲಾರಂಭಿಸುತ್ತಾನೆ. ಆಗ ಒಬ್ಬ ಪಾತ್ರಧಾರಿಗೆ ಸಿಟ್ಟು ಬಂದು ಆತ ಜೋರಾಗಿ ಬೊಬ್ಬೆಯಿಡುತ್ತಾ ಆ ಕಾಡು ಮನುಷ್ಯನಿಗೆ ಹೊಡೆಯಲು ಮುನ್ನುಗ್ಗುತ್ತಾನೆ. ಆಗ ಉಳಿದ ಪಾತ್ರಧಾರಿಗಳು ಅವನನ್ನು ಸುತ್ತುವರಿಯುತ್ತಾರೆ. ಎಲ್ಲರೂ ಸುತ್ತುವರಿದಿರುವುದನ್ನು ಕಂಡು ಕಾಡು ರಾಕ್ಷಸ ಓಡಿಹೋಗುತ್ತಾನೆ.

ಆಗ ತಂಡದ ನಾಯಕ ಬೊಬ್ಬೆಹಾಕಿದ ಪಾತ್ರಧಾರಿಗೆ "ನೀನು ಪಟ್ಟಣಕ್ಕೆ ಹೋಗಿ ಸಾಂಬಾರನ್ನು ತರಬೇಕು. ನಾವೆಲ್ಲರೂ ಮೌನವಾಗಿದ್ದರೂ ನೀನು ತಾನೆ ಕಿಟಾರನೆ ಕಿರುಚಿದ್ದು" ಎಂದು ಹೇಳುತ್ತಾನೆ. ಆಗ ಆ ಪಾತ್ರಧಾರಿ ನಮ್ಮನ್ನೆಲ್ಲ ಧಿಟ್ಟಿಸಿ ನೋಡುತ್ತಾನೆ. "ಅಲ್ಲ, ಅದ್ಯಾರೋ ಹೊರಗಿನವರು ಬಂದು ನಮ್ಮ ಅನ್ನವನ್ನು ತಿಂದಾಗ ನಾವು ಸುಮ್ಮನಿರಲು ಸಾಧ್ಯವೇ? ಹೊರಗಿನವರ ಆಕ್ರಮಣವನ್ನು ನಾವು ಹೀಗೆ ಸುಮ್ಮನೆ ಕುಳಿತು ನೋಡುವುದು ಎಷ್ಟು ಸರಿ?" ಎಂದು ಆತ ಪ್ರಶ್ನಿಸುತ್ತಾನೆ. ಆಗ ನಾಯಕನಿಗೆ ಜ್ಞಾನೋದಯವಾಗುತ್ತದೆ. ಕೊನೆಗೆ ಎಲ್ಲರೂ ಜೊತೆಗೂಡಿ ಈಟಿ-ಭರ್ಜಿಗಳನ್ನು ಹಿಡಿದು ಆ ಕಾಡು ಮನುಷ್ಯನನ್ನು ಹುಡುಕಿಕೊಂಡು ಹೋಗಿ ಕೊಂದುಹಾಕುತ್ತೇವೆ. ಅಲ್ಲಿಗೆ ನಾಟಕ ಮುಗಿಯುತ್ತದೆ.

ಈ ನಾಟಕದ ಕತೆಯನ್ನು ನಾವೆಲ್ಲರೂ ಸೇರಿ ಬರೆದಿದ್ದೆವು. ಇದರ ಲೈಟಿಂಗ್‌ಅನ್ನೂ, ಧ್ವನಿಯನ್ನೂ ನಾವೇ ಸಂಯೋಜಿಸಿದ್ದೆವು. ಇದು ಒಂದು ರೀತಿಯಲ್ಲಿ ಮೈಮ್ ನಾಟಕವಾಗಿದ್ದರಿಂದ ಇಲ್ಲಿ ಭಾವನೆಗಳಿಗೇ ಮೊದಲ ಪ್ರಾಶಸ್ತ್ಯವಿತ್ತು. ಈ ನಾಟಕದಲ್ಲಿ ನಾನು ಸಕ್ರಿಯವಾಗಿ ಭಾಗ ವಹಿಸಿದ್ದರಿಂದ ನಾಟಕದ ಧ್ವನಿ ಮತ್ತು ಬೆಳಕು ಮಾತ್ರವಲ್ಲ ಎಲ್ಲ ವಿಷಯದ ಬಗ್ಗೆ ಹೆಚ್ಚು ಅನುಭವ ದೊರಕಿತು.

ಹೀಗೆ ಪ್ರಾಕ್ಟಿಕಲ್ ಆಗಿ ತೊಡಗಿಸಿಕೊಂಡಿದ್ದರಿಂದ ಅನೇಕ ವಿಷಯಗಳು ನನಗೆ ನಟನೆಯಲ್ಲಿ ಸಹಕಾರಿಯಾದವು. ನನ್ನ ಪ್ರಕಾರ ಕೇವಲ ಇಮ್ಯಾಜಿನೇಷನ್ ಮಾತ್ರ ಒಬ್ಬ ನಟನಿಗೆ ಸಾಕಾಗುವುದಿಲ್ಲ. ಒಂದು ಹಂತದವರೆಗೆ ಅದು ಸಹಾಯಕವಾಗಬಹುದು. ಆದ್ದರಿಂದ ಕಲ್ಪನೆಗಿಂತ ಮುಖ್ಯವಾಗಿ ನಟನೊಬ್ಬ ತನ್ನ ಸುತ್ತಮುತ್ತಲಿನ ಅನೇಕ ವಿಷಯಗಳು ಮತ್ತು ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಈ ಗಮನಿಸುವಿಕೆಯಿಂದಲೇ ನಾನು ಅನೇಕ ವಿಷಯಗಳನ್ನು ಕಲಿತುಕೊಂಡೆ.

ಪಕ್ಕದಲ್ಲೇ ಇದ್ದ ಮಲಯಾಳಂ ಸಮಾಜದಲ್ಲಿ ನಾವೆಲ್ಲಾ ಸೇರಿ ಇಂತಹ ಅನೇಕ ನಾಟಕಗಳಲ್ಲಿ ಭಾಗವಹಿಸಿದೆವು. ಆ ನಾಟಕಗಳನ್ನು ಮಾಡುವಾಗ ನಾನು ಪಟ್ಟ ಸಂತೋಷ ಅಷ್ಟಿಷ್ಟಲ್ಲ. ಅದರಲ್ಲಿ ಸಿಕ್ಕಿದ ಅನುಭವ ಮತ್ತು ಆನಂದ ನನಗೆ ಸಿನಿಮಾದಲ್ಲೂ ಸಿಕ್ಕಿಲ್ಲ ಎಂದರೆ ತಪ್ಪಾಗಲಾರದು. ಆ ದಿನಗಳಲ್ಲಿ ಗೆಳೆಯರೊಂದಿಗೆ ಎಷ್ಟೋ ಸಂಜೆಗಳನ್ನು, ರಾತ್ರಿಗಳನ್ನು ಮಲೆಯಾಳಂ ಸಮಾಜದ ಮೆಟ್ಟಲುಗಳ ಮೇಲೆ ಕಳೆದಿದ್ದೆ. ಅದೆಲ್ಲವೂ ಈಗ ಒಂದು ಸವಿ ನೆನಪು ಮಾತ್ರವಲ್ಲ, ಸ್ಫೂರ್ತಿ ಕೂಡ. ಅಂದು ಅಲ್ಲಿ ಕಲಿತದ್ದು, ನೋಡಿದ್ದು, ಗಮನಿಸಿದ್ದು ಇವತ್ತು ನಾನು ನಟನಾಗಿ ಬೆಳೆಯುವಲ್ಲಿ ಬಹಳ ಸಹಾಯ ಮಾಡಿದೆ ಎನ್ನಲು ಸಂತೋಷವಾಗುತ್ತದೆ.

ಹೀಗೆ ಫಿಲ್ಮ್ ಇನ್ಸ್‌ಟಿಟ್ಯೂಟ್‌ನ ವರ್ಣರಂಜಿತ ಮತ್ತು ಕ್ರಿಯಾತ್ಮಕವಾದ ಜೀವನ ಮುಗಿದ ನಂತರ ಬೆಂಗಳೂರಿಗೆ ಹಿಂದಿರುಗಿದೆ. ಆಗ ಒಂದು ದಿನ ಅಮ್ಮ ನನ್ನ ಹತ್ತಿರ ಬಂದು "ಒಬ್ಬಳು ಹುಡುಗಿಯಿದ್ದಾಳೆ, ನಿನಗೆ ಸರಿಯಾಗಿ ಹೊಂದುತ್ತಾಳೆ. ನೀನೊಮ್ಮೆ ಅವಳನ್ನು ಯಾಕೆ ನೋಡಬಾರದು?" ಎಂದು ಹೇಳಿದರು. ಅಪ್ಪಾಜಿ ಕೂಡ ಹಾಗೆ ಹೇಳಿದ ನಂತರ ನಾನು ಆಕೆಯನ್ನು ನೋಡಲು ಹೋದೆ.... ಆದರೆ ಅವಳನ್ನು ನೋಡಲು ಹೋದಾಗ ನನಗೆ ಆಶ್ಚರ್ಯವೊಂದು ಕಾದಿತ್ತು. ಏಕೆಂದರೆ, ಅಲ್ಲಿ ನನ್ನ ಎದುರು ಕುಳಿತುಕೊಂಡಿದ್ದವರು ಯಾರು ಗೊತ್ತಾ? ನಿಜವಾಗಿಯೂ ನನ್ನ ಕಣ್ಣನ್ನು ನಾನೇ ನಂಬಲಾಗಲಿಲ್ಲ!

(ಮುಂದುವರೆಯುವುದು)

`gifted' ಜರ್ನಲಿಸ್ಟ್‌ಗಳು!

ಸಿನಿಮಾ ಪತ್ರಿಕೋದ್ಯಮದಲ್ಲೀಗ `gifted' ಜರ್ನಲಿಸ್ಟ್‌ಗಳ ಕಾಟ! ನಿರ್ದೇಶಕ, ನಿರ್ಮಾಪಕರು ತಮ್ಮ ಚಿತ್ರದ ಗೆಲುವಿಗೆ gifts, ಚೆಕ್, ಕ್ಯಾಷ್ ನೀಡುತ್ತಾರೆ! ಕೆಲವು ಪತ್ರಕರ್ತರು ಅದನ್ನು ಸ್ವೀಕರಿಸಿ ಚಿತ್ರಕ್ಕೆ ತಮ್ಮ ಪೇಪರಲ್ಲಿ ಹೆಚ್ಚು space ಸಿಗುವಂತೆ ಮಾಡಬಲ್ಲರು. ಹಾಗೆಯೇ 'ಒಳ್ಳೆ' ವಿಮರ್ಶೆ ಬರೆಯಬಲ್ಲರು! ಇದರಿಂದಲೇ ಒಂದು ಚಿತ್ರ ಗೆಲ್ಲೊಲ್ಲ ಎಂಬುದು ಬೇರೆ ಮಾತು ಬಿಡಿ.....

ಆದರೂ ಒಂದು ಸಂತೋಷದ ಸಂಗತಿ!

`gifted' ಜರ್ನಲಿಸ್ಟ್‌ಗಳು ಕೆಲವೇ ಕೆಲವರಿದ್ದಾರೆ ಎನ್ನುವುದು. ಬಹುತೇಕ ಸಿನಿ ಪತ್ರಕರ್ತರು ಇಂತಹ ಗಿಫ್ಟ್‌ಗಳನ್ನು ಬಯಸುವುದಿಲ್ಲ, ಇಂಥದಕ್ಕೆಲ್ಲ ಯಾಮಾರದೆ ಬಹುತೇಕರು ವಸ್ತುನಿಷ್ಠವಾಗಿಯೇ ಬರೆಯುತ್ತಿರುವುದು ಸಮಾಧಾನದ ವಿಷಯ. ಪಿ. ಲಂಕೇಶ್ ಹೇಳಿದ್ದರು: "ವಿಮರ್ಶೆ ಎಂದರೆ ಬರೀ ಹೊಗಳಿಕೆ ಅಥವಾ ಬರೀ ತೆಗಳಿಕೆ ಅಲ್ಲ... ಅನಿಸಿದ್ದನ್ನು ವಸ್ತುನಿಷ್ಠವಾಗಿ ಬರೆಯೋದು...."

gift ನಿಷ್ಠ ಪತ್ರಕರ್ತರ ಸಂಖ್ಯೆ ಬಹಳ ಚಿಕ್ಕದು. ಆದ್ದರಿಂದ ಉಳಿದೆಲ್ಲ ಗೌರವಾನ್ವಿತ ಪತ್ರಕರ್ತರು ಈ gifted ಪತ್ರಕರ್ತರಿಂದ ದೂರ ಉಳಿದು ಸಿನಿ ಪತ್ರಕರ್ತರ ಬಳಗದ ಹಿರಿಮೆಯನ್ನು ಕಾಪಾಡಿಕೊಂಡು ಹೋಗಬೇಕಲ್ಲವೇ?

'ಪೊಕಿರಿ': ಯಾಕ ಓಡುತ್ರಿ?



ಮಹೇಶ್‌ಬಾಬು ಅಭಿನಯದ 'ಪೊಕಿರಿ' ಎಂಬ ತೆಲುಗು ಚಿತ್ರ ಬೆಂಗಳೂರಿನ ಮೂರು ಥಿಯೇಟರ್‌ಗಳಲ್ಲಿ ನೂರು ದಿನ ಓಡಿದೆ. ಕರ್ನಾಟಕದಲ್ಲಿ ಒಟ್ಟು ಎಂಟು ಕಡೆ 100 ದಿನ ಪೂರೈಸಿದೆ.

ಕನ್ನಡದ ಕಳಪೆ ಮತ್ತು ಆವರೇಜ್ ಚಿತ್ರಗಳಿಂದ ಬೇಸತ್ತ ಕನ್ನಡಿಗರೇ 'ಪೊಕಿರಿ'ಯನ್ನು ಮೆಚ್ಚಿದ್ದಾರೆ. ತೆಲುಗು ಸಿನಿಮಾವೊಂದು ಇಲ್ಲಿ ಇಷ್ಟು ಓಡುತ್ತಿರಬೇಕಾದರೆ ನಮ್ಮವರೂ ಒಳ್ಳೆ ಸ್ಕ್ರಿಪ್ಟ್ ಮಾಡಿ, ಒಳ್ಳೆ ಸಿನಿಮಾ ತಯ್ಯಾರಿಸಿ ಕ್ರಿಯಾಶೀಲತೆ ತೋರಿದರೆ ಅವರನ್ನೂ ಅಪ್ಪಿಕೊಳ್ತಾರೆ ಕನ್ನಡಿಗರು....

ಉಪ್ಪಿ-ರುಪ್ಪಿ-ಪಪ್ಪಿ!



ಉದ್ಘಾಟನೆಗೆ ತಯ್ಯಾರಾಗಿದೆ ಉಪೇಂದ್ರನ ಭವ್ಯ ಹೋಟೆಲ್ & ರೆಸಾರ್ಟ್! ಹೆಸರು 'ರುಪ್ಪೀಸ್' ಅಂತೆ! ಇಲ್ಲಿ ಸಹಸ್ರಪತಿ, ಲಕ್ಷಪತಿ, ಕ್ರೋರ್‌ಪತಿ ಎಂದು ವಿಲಾಸಿಗಳ ಸಾಮರ್ಥ್ಯಕ್ಕೆ ತಕ್ಕಂತಹ ಸಲವತ್ತು ಇದೆಯಂತೆ.

ಬಿಲಿಯರ್ಡ್ಸ್ ಆಡುವ ಜಾಗ 'ಮಧುಮತಿ' (ಅಂದರೆ ಮಧುಪಾನ ಮಾಡ್ತಾ ಆಡಬೇಕೇನೊ), ಸಭೆ ನಡೆಸಲು 'ಸಭಾಪತಿ', ಜಿಮ್ ಸೆಂಟರ್‌ಗೆ 'ಮಾರುತಿ'.... ಹೀಗೆ 'ತಿ'ಯಿಂದ ಅಂತ್ಯಗೊಳ್ಳುವ ಅತಿ ರಂಜಿತ ಹೆಸರುಗಳಿವೆ. ಈಜುಗೊಳ ಗಂಗಾವತಿಯಂತೆ!



ಉಪ್ಪಿ ಹಾಕಿಕೊಂಡು ಪಾಪರ್ ಆದ ನಿರ್ಮಾಪಕರು "ನಮಗಾಗಿ ಭಿಕ್ಷಾಪತಿ ಎಂಬ ಜಾಗವಿಲ್ಲವೆ?" ಎನ್ನುತ್ತಾರೇನೊ?

ಮಹಾಸಾಧಕರ ಚಿಂತನೆಯ ಮಟ್ಟವೇ ಅವರ ಯಶಸ್ಸನ್ನು ನಿರ್ಧರಿಸಿದ್ದು-ಡಾ. ಐನ್‌ಸ್ಟೀನ್

ಲಗೆ ರಹೋ: ಮುನ್ನಾ ಮಹಾತ್ಮೆ!



ಮುನ್ನಾ ಮತ್ತು ಸರ್ಕ್ಯೂಟ್ ತಿರುಗಿ ಬಂದಿದ್ದಾರೆ... ಮತ್ತೆ ಗೆಲುವಿನ ನಗೆಯೊಂದಿಗೆ....

ಸಂಜಯ್ ದತ್, ಅರ್ಶದ್ ವಾರ್ಸಿ (ಸರ್ಕ್ಯೂಟ್), ವಿದ್ಯಾಬಾಲನ್ ಅಭಿನಯದ 'ಲಗೆ ರಹೋ ಮುನ್ನಾಭಾಯಿ' ಸಖತ್ ಮಜಾ ನೀಡುತ್ತಿದೆ. ನಿರ್ದೇಶಕ ರಾಜ್‌ಕುಮಾರ್ ಹಿರಾನಿ ಅಪ್ಪಟ ಫ್ಯಾಮಿಲಿ ಎಂಟರ್‌ಟೇನರ್ ನೀಡಿದ್ದಾರೆ. ನೀವು ಖಂಡಿತಾ ಬಿದ್ದು ಬಿದ್ದು ನಗುತ್ತೀರಿ, ಎದ್ದು ಎದ್ದು ಕೂಡುತ್ತೀರಿ.

ಕತೆ ಎಷ್ಟು ಮಜವಾಗಿದೆ ನೋಡಿ: ಮಹಾತ್ಮ ಗಾಂಧೀಜಿಯ ಮೇಲೆ ರೇಡಿಯೋ ಸ್ಪರ್ಧೆ ನಡೆಸುವ ವಿದ್ಯಾಬಾಲನ್, ಗೆದ್ದವರು ತನ್ನನ್ನು ಭೇಟಿ ಆಗಿ ಬಹುಮಾನ ಪಡೆಯಲಿದ್ದಾರೆ ಎಂದು ಘೋಷಿಸುತ್ತಾಳೆ.

ಮನಸಲ್ಲೇ ವಿದ್ಯಾಳನ್ನು ಲವ್ ಮಾಡುತ್ತಿರುವ ಮುನ್ನಾ (ಸಂಜಯ ದತ್) ಸ್ಪರ್ಧೆಗೆ ರೆಡಿ! ಸರ್ಕ್ಯೂಟ್ (ವಾರ್ಸಿ) ಹಲವಾರು ಇತಿಹಾಸ ತಜ್ಞರನ್ನು ಕಲೆ ಹಾಕುತ್ತಾನೆ! ಮುನ್ನಾ ಟಫ್ ಪ್ರಶ್ನೆಗಳಿಗೆಲ್ಲ ಉತ್ತರಿಸಿ ಸಕ್ಸಸ್ ಆಗುತ್ತಾನೆ. ವಿದ್ಯಾಬಾಲನ್ ಭೇಟಿ ಮಾಡಿ, ತಾನೊಬ್ಬ ಹಿಸ್ಟರಿ ಪ್ರೊಫೆಸರ್ ಎನ್ನುತ್ತಾನೆ.

ಅಲ್ಲಿಂದ ಲವ್ ಸ್ಟಾರ್ಟ್!

ಗಾಂಧಿ ಬಗ್ಗೆ ತಿಳಿಯಲು ಲೈಬ್ರರಿ ಹೊಕ್ಕು ಕೂಡುತ್ತಾನೆ. ಈ ಮಧ್ಯೆ ಸರ್ಕ್ಯೂಟ್‌ನ ಕಿಡಿಗೇಡಿತನದಿಂದ ಮುನ್ನಾ ಗಾಂಧಿಯನ್ನೇ ಭೇಟಿ ಆದಂತೆ, ಆತನ ಜೊತೆ ಮಾತಾಡಿದಂತೆ ಆಡತೊಡಗುತ್ತಾನೆ. ಅಲ್ಲಿಗೆ ಗೂಂಡಾಗಿರಿಯಿಂದ ಗಾಂಧೀಸಂ ಕಡೆ ಪಯಣ!

'ರಂಗ್ ದೇ ಬಸಂತಿ'ಯಲ್ಲಿ ಹಿಸ್ಟರಿಯೊಂದಿಗೆ ಎಂಟರ್‌ಟೇನ್‌ಮೆಂಟ್ ಇತ್ತಲ್ಲ... ಇಲ್ಲೂ ಹಾಗೇ ಇದೆ.... ಕಾಮಿಡಿಯ ಜೊತೆಗೆ ಹಿಸ್ಟರಿಯೂ ತೇಲಿ ಬರುತ್ತೆ!

'ಮುನ್ನಾಭಾಯಿ ಎಂಬಿಬಿಎಸ್' ನಂತರ ಸಂಜಯ್ ದತ್, ಅರ್ಶದ್ ವಾರ್ಸಿಯ 'ಅಂಥೋನಿ ಕೌನ್ ಹೈ' ಬಂತು. ಕ್ಲಿಕ್ ಆಗಲಿಲ್ಲ... ಈಗ 'ಲಗೆ ರಹೋ' ಕ್ಲಿಕ್ ಆಗುತ್ತಿದೆ.

ಪರ್ವೀನ್ ಬಾಬಿ: ಎಷ್ಟು ನೋವುಂಡೆ ಚೆಲುವೆ ನೀ...



ನೋಡಿದರೆ ನೋಡುತ್ತಲೇ ಇರಬೇಕು ಎನಿಸುವಂತಹ ಮುಖಾರವಿಂದ... ಅಂಥದೇ ಮೈಮಾಟ... ಅಭಿನಯದಲ್ಲೂ ಪರಿಪಕ್ವ... 2005ರ ಜನವರಿಯಲ್ಲಿ ಕಣ್ಮರೆಯಾದ ಈ ಮೋಹನಾಂಗಿ ಪರ್ವೀನ್ ಬಾಬಿ!

ಈಕೆ ಹಲವಾರು 'ಗಣ್ಯ' ಪ್ರಿಯತಮರಿಂದ ಮೋಸ ಹೋದದ್ದು ಗೊತ್ತೇ ಇದೆ. ಆದರೆ ನೋವುಣ್ಣುತ್ತಲೇ ಪ್ರೇಕ್ಷಕರಿಗೆ ನಲಿವು ನೀಡಿದಾಕೆ....

ಈಗ ಪರ್ವೀನ್ ಬಾಬಿ ಕತೆ ಆಧರಿಸಿಯೇ ಆಕೆಯ ಮಾಜಿ ಲವರ್ ಮಹೇಶ್ ಭಟ್ 'ವೊ ಲಮ್ಹೆ' ನಿರ್ಮಿಸುತ್ತಿದ್ದಾನೆ. 1977ರಲ್ಲೇ ಅಂದಿನ ತನ್ನ ಲವರ್ ಮಹೇಶ್ ಭಟ್‌ಗೆ ತನ್ನ ನೋವು, ಅಸಹಾಯಕತೆಗಳನ್ನು ವಿವರಿಸುವ ಆಡಿಯೋ ಕ್ಯಾಸೆಟ್ ಮಾಡಿದ್ದಳು ಈ ಚೆಲುವೆ. ಆದರೆ ಬದುಕಿದ್ದಾಗ ಅದು ಮಹೇಶ್‌ಗೆ ತಲುಪಲೇ ಇಲ್ಲ. ಅದು ಮಹೇಶ್‌ಭಟ್ ಪತ್ನಿ ಕಿರಣ್‌ಗೆ ತಲುಪಿತ್ತು. ಪರ್ವೀನ್ ನಿಧನಾ ನಂತರ ಕಿರಣ್ ಗಂಡ ಮಹೇಶ್‌ಭಟ್‌ಗೆ ನೀಡಿದಳು...

ನೋವಲ್ಲೂ ಕರ್ತವ್ಯ ನಿರ್ವಹಿಸಿದ ನೀ ಅಮರಳು ಪರ್ವೀನ್!

ವಿಪ್ರೊ-ಡಾ.ಎಲ್.ಎಸ್. 'ತನನಂ ತನನಂ'!



ನೀವು ಇನ್ಮುಂದೆ ವಿಪ್ರೊ ಕಂಪನಿಯಲ್ಲಿರುವ ನಿಮ್ಮ ಗೆಳತಿಗೋ, ಗೆಳೆಯನಿಗೋ ಫೋನ್ ಮಾಡಿದರೆ ಆರಂಭದಲ್ಲಿ ಡಾ. ಎಲ್. ಸುಬ್ರಮಣ್ಯಂರ ವಯೊಲಿನ್ ಸಂಗೀತಧಾರೆ ಹರಿದು ಬರಲಿದೆ.

ವಿಪ್ರೊ ಈಗ 'ಸ್ಪಿರಿಟ್ ಆಫ್ ವಿಪ್ರೊ' ಎನ್ನುವ ತನ್ನ ಹೊಸ ಮಿಷನ್ ಸ್ಟೇಟ್‌ಮೆಂಟ್‌ಗೆ ಡಾ. ಎಲ್.ಎಸ್.ರವರಿಂದ ಅರ್ಥಪೂರ್ಣ ಸಂಗೀತ ಮಾಡಿಸಿಕೊಂಡಿದೆ.

ಅಂದಂತೆ ಗೊತ್ತಲ್ಲ, 'ತನನಂ ತನನಂ' ಚಿತ್ರಕ್ಕೆ ವಯೊಲಿನ್ ಬಿಟ್ಸ್‌ಗಳನ್ನು ಡಾ. ಎಲ್.ಎಸ್.ರವರೇ ನೀಡಿದ್ದಾರೆ ಅಂತಾ...

ಸ್ಟಾರ್-ಟಾರ್: ಬಿರುದುಬಾವಲಿ



ಪುನೀತು 'ಪವರ್ ಸ್ಟಾರ್' ಅಂತೆ... ಮತ್ತೆ 'ಬ್ಯಾಟರಿ ಸ್ಟಾರ್' ಯಾರಾದ್ರೂ ಅವ್ರಾ? ಶಿವರಾಜ್ ಹ್ಯಾಟ್ರಿಕ್ ಸ್ಟಾರು... ಹಾಗಾದರೆ ವಿನೋದ್ ಪ್ರಭಾಕರು ಮೆಟ್ರಿಕ್ ಸ್ಟಾರಾ? (SSLC ಢಮಾರ್!) ಅಂಬಿ ರೆಬೆಲ್ ಸ್ಟಾರ್ ಆದದ್ದಕ್ಕೆ ಹುಂಬ ಬಿ.ಸಿ. ಪಾಟೀಲ್ 'ರೂರಲ್ ಸ್ಟಾರ್' ಎಂದುಕೊಳ್ಳೋದೆ? ಇನ್ನು ಅರ್ಬನ್ ಸ್ಟಾರು, ಮೆಟ್ರೊ ಸ್ಟಾರುಗಳೂ ಉಂಟಾ? ದೇವರಾಜ್ ಡೈನಾಮಿಕ್ ಸ್ಟಾರ್! ಹಾಗಾದರೆ ಎಲ್ಲೋ ಕಳೆದುಹೋಗಿರೋ ಶಶಿಕುಮಾರ್‌ಗೆ static star ಎನ್ನಬಹುದೇನೊ? ಸುದೀಪು 'ಕಿಚ್ಚ'ನಾದರೆ ಮೆಂಟಲ್ ಮಂಜ ಹೀರೋಗೆ 'ಹುಚ್ಚ' ಎಂಬ ಬಿರುದೆ? ನಿಜವಾಗ್ಲೂ ಆ ಹುಡುಗ 'ಮೆಂಟಲ್ ಸ್ಟಾರ್' ಎಂದು ಬರೆದುಕೊಂಡಿದ್ದ. ಹಿಟ್ ಆದ್ರೆ ಉಪ್ಪಿ 'ರಿಯಲ್ ಸ್ಟಾರ್'.... ಫ್ಲಾಪ್ ಆದರೆ ರೀಲ್ ಸ್ಟಾರ್! ದರ್ಶನ್ ಚಾಲೆಂಜಿಂಗ್ ಸ್ಟಾರ್ ಆದರೆ ಆದಿತ್ಯ ಬ್ಯಾಲನ್ಸಿಂಗ್ ಸ್ಟಾರ್ ಅಂತೆ!

ಈ ಬಿರುದುಬಾವಲಿಗಳನ್ನು ಕೊಡುವ ಪುಣ್ಯಾತ್ಮರು ಯಾರು?

ಪಾಪ, ಹೀರೊಯಿನ್‌ಗಳಿಗೆ ಈ ಬಿರುದುಗಳಿಲ್ಲವೆ? ನಾವಾದರೂ ಕೊಡೋಣವೆ?

ರಮ್ಯಾ-ಜಂಭದ ಕೋಳಿ, ರಾಧಿಕಾ-ಛೋಟಿ ಸ್ಟಾರ್, ರಕ್ಷಿತಾ- 'ಪ್ರೇಮ್'ರೋಗಿ, ಶೃತಿ-ಗ್ಲಿಸ್‌ರೀನ್ ಸ್ಟಾರ್, ತಾರಾ-'ಡಬಲ್ ಸ್ಟಾರ್', ಪ್ರೇಮಾ-ಕೋಮಾ ಸ್ಟಾರ್, ಡೈಸಿ-ಸ್ಪೈಸಿ ಸ್ಟಾರ್, ದೀಪಿಕಾ-ಫ್ಲಾಪಿಕಾ, ಭಾವನಾ-'hope' ಇಲ್ಲದ ಸ್ಟಾರ್, ಭಾರತಿ-ಎವರ್‌ಗ್ರೀನ್ ಸ್ಟಾರ್....



ಶ್ಯಾಂ-ರಕ್ಷಿತಾ
'ತನನಂ ತನನಂ'

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 2667642
Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44